ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 8 ಶುಕ್ರವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 22 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ಮೈಸೂರು ಮಿತ್ರ

ಭಕ್ತರೊಂದಿಗೆ ಅನುಚಿತ ವರ್ತನೆ ಹಿನ್ನೆಲೆ
ಚಾಮುಂಡೇಶ್ವರಿ ದೇವಸ್ಥಾನದ ಭದ್ರತಾ ಸಿಬ್ಬಂದಿ ವಜಾ

ಮೈಸೂರು, ಮೇ 7(ಎಸ್‌ಪಿಎನ್)– ಪಾರ್ಕಿಂಗ್ ಹಣದ ವಿಚಾರವಾಗಿ ಭಕ್ತರೊಂದಿಗೆ ಅನುಚಿತವಾಗಿ ವರ್ತಿಸಿದ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಹೊರಗುತ್ತಿಗೆ ಭದ್ರತಾ ಸಿಬ್ಬಂದಿಯನ್ನು ಕರ್ತವ್ಯದಿಂದ ವಜಾಗೊಳಿಸಲಾಗಿದೆ. ಘಟನೆಯ ವೀಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದ ಬೆನ್ನಲ್ಲೇ ಪ್ರಾಧಿಕಾರ ಪರಿಶೀಲನೆ ನಡೆಸಿ, ಈತನ ವಜಾ ಮಾಡಲಾಗಿದೆ.



ರೋಹಿತ್

ಚಾಮುಂಡಿಬೆಟ್ಟದ ವಾಹನ ಪಾರ್ಕಿಂಗ್ ಸ್ಥಳದಲ್ಲಿ ಕಳೆದ 15 ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದ ರೋಹಿತ್ ವಜಾಗೊಂಡ ಭದ್ರತಾ ಸಿಬ್ಬಂದಿ. ಈತ ಮಂಗಳವಾರ ದೇವಸ್ಥಾನಕ್ಕೆ ಬಂದಿದ್ದ ಭಕ್ತಾದಿಗಳೊಂದಿಗೆ ಪಾರ್ಕಿಂಗ್ ಹಣದ ವಿಚಾರವಾಗಿ ವಾಗ್ವಾದ ನಡೆಸಿದ್ದಾನೆ.

ಇದು ಅನುಚಿತ ನಡವಳಿಕೆಯಾಗಿದ್ದು, ಈ ರೀತಿ ಬೇರೆ ಯಾವ ಸಿಬ್ಬಂದಿಯೂ ಚಾಮುಂಡಿಬೆಟ್ಟಕ್ಕೆ ಬರುವ ಭಕ್ತಾದಿಗಳೊಂದಿಗೆ ಅನುಚಿತವಾಗಿ ವರ್ತಿಸಬಾರದು. ಸಂಯಮದಿಂದ ವರ್ತಿಸಬೇಕು

“ ವೈರಲ್ ಆದ ವೀಡಿಯೊದಲ್ಲಿ ವಾಹನ ಚಾಲಕರಿಂದ ನೂರು ರೂಪಾಯಿ ಪಡೆದು 50 ರೂ. ಟಿಕೆಟ್ ಕೊಟ್ಟಿದ್ದಾರೆ ಎಂದು ವಾಗ್ವಾದ ನಡೆಸುತ್ತಿದ್ದವರು ಆರೋಪಿಸಿದ್ದು, ಮುಂದೆ ಏನಾಗಿದೆ ಎಂಬುದರ ಸಂಪೂರ್ಣ ವಿವರ ವೀಡಿಯೊದಲ್ಲಿ ಇಲ್ಲ. ಹೀಗಾಗಿ ಸದ್ಯಕ್ಕೆ ಹೊರಗುತ್ತಿಗೆ ಭದ್ರತಾ ಸಿಬ್ಬಂದಿ ರೋಹಿತ್ ವಿರುದ್ಧ ಸಾರ್ವಜನಿಕ ಸ್ಥಳದಲ್ಲಿ ಭಕ್ತರೊಂದಿಗೆ ಅನುಚಿತವಾಗಿ ವರ್ತನೆ ಮಾಡಿರುವುದು ಸಾಬೀತಾದ ಹಿನ್ನಲೆಯಲ್ಲಿ ಕೆಲಸದಿಂದ ವಜಾಗೊಳಿಸಲಾಗಿದೆ.

–ಎಂ.ಜೆ.ರೂಪಾ, ಕಾರ್ಯದರ್ಶಿ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ಅಧಿಕಾರಿ ಎಂ.ಜೆ.ರೂಪಾ ಇತರೆ ಸಿಬ್ಬಂದಿಗೆ ಕಿವಿಮಾತು ಹೇಳಿದ್ದಾರೆ.

ವೀಡಿಯೊದಲ್ಲಿ ಭಕ್ತಾದಿಗಳು ಆರೋಪಿಸಿರುವುದರಲ್ಲಿ ಸತ್ಯಾಂಶವಿಲ್ಲ. ಪಾರ್ಕಿಂಗ್ ವ್ಯವಸ್ಥೆಯ ಹಣಕಾಸಿನ ವ್ಯವಹಾರವು ಸಂಪೂರ್ಣ ಪಾರದರ್ಶಕವಾಗಿದ್ದು, ಇಲ್ಲಿ ಯಾವುದೇ ಹಣಕಾಸಿನ ದುರುಪಯೋಗವಾಗಿಲ್ಲ. ಅಲ್ಲದೆ, ಪಾರ್ಕಿಂಗ್ ಸ್ಥಳದಲ್ಲಿ ರಶೀದಿ ಕೊಡಬೇಕಾದರೂ ಆನ್‌ಲೈನ್ ವ್ಯವಸ್ಥೆ ಕಲ್ಪಿಸಲಾಗಿದೆ.

ಕಿಕ್‌ಬ್ಯಾಕ್ ಪಡೆದು ಲೈಂಗಿಕ ದೌರ್ಜನ್ಯದ ಆರೋಪಿ ಹಿರಿಯ ಪೊಲೀಸ್ ಅಧಿಕಾರಿ ರಾಮಚಂದ್ರರಾವ್ ಅಮಾನತು ರದ್ದು

ವಿಧಾನಪರಿಷತ್ ಸದಸ್ಯ ವಿಶ್ವನಾಥ್ ಗಂಭೀರ ಆರೋಪ

ಮೈಸೂರು, ಮೇ 7(ಜಿಎ)–ಹಿರಿಯ ಪೊಲೀಸ್ ಅಧಿಕಾರಿ ಹಾಗೂ ಲೈಂಗಿಕ ದೌರ್ಜನ್ಯ ವೆಸಗಿರುವ ಆರೋಪ ಹೊತ್ತಿರುವ ರಾಮಚಂದ್ರರಾವ್‌ನಿಂದ ಕಿಕ್‌ಬ್ಯಾಕ್ ಪಡೆದು ರಾಜ್ಯ ಸರ್ಕಾರ ಅವರ ಮೇಲಿನ ಅಮಾನತು ಆದೇಶ ರದ್ದುಗೊಳಿಸಿದೆ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಇಂದಿಲ್ಲಿ ಆರೋಪಿಸಿದ್ದಾರೆ.



ಹೆಚ್.ವಿಶ್ವನಾಥ್

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಕೇರಳ ಬಸ್‌ನಲ್ಲಿ ಸಿಕ್ಕಿದ್ದ 2 ಕೋಟಿ ಹಣವನ್ನು ತೆಗೆದುಕೊಂಡು ಇನ್ಸ್‌ಪೆಕ್ಟರ್ ವಿರುದ್ಧ ಪ್ರಕರಣ ದಾಖಲಿಸಿದ್ದಂತಹ ನಟೋರಿಯಸ್ ರಾಮಚಂದ್ರರಾವ್. ಅವರ ಸಾಕು ಮಗಳು ರನ್ಯಾರಾವ್ ಚಿನ್ನಸಾಗಣೆ ಪ್ರಕರಣದಲ್ಲಿ ಸಿಕ್ಕಿಬಿದ್ದ ಪರಿಣಾಮ ಅವರನ್ನು ಅಮಾನತು ಮಾಡಲಾಗಿತ್ತು. ಅಲ್ಲದೇ ಅವರ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪ ಸಹ ಕೇಳಿ ಬಂದಿತ್ತು. ನ್ಯಾಯ ಕೇಳಲು ಬಂದಿದ್ದ ಮಹಿಳೆಯ ಮೇಲೆ ರಾಮಚಂದ್ರ ರಾವ್ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಈ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾದ ವೀಡಿಯೊ ನನ್ನದಲ್ಲ ಎಂದು ವಾದಿಸಿದ್ದರು. ಆ ನಂತರ ವಿಧಿವಿಜ್ಞಾನ ಪ್ರಯೋಗಾಲಯ ನೀಡಿದ ವರದಿಯಲ್ಲಿ ಆ ವೀಡಿಯೊ ರಾಮಚಂದ್ರರಾವ್ ಅವರದ್ದೇ ಎಂಬುದು ಸಾಬಿತಾದ ಕಾರಣ ಅವರನ್ನು ಸರ್ಕಾರ ಅಮಾನತು ಮಾಡಿತ್ತು ಎಂದರು.

ಈಗ ಏಕಾಏಕಿ ಅವರ ಮೇಲಿನ ಅಮಾನತು ಆದೇಶ ಹಿಂಪಡೆದು ಮತ್ತೆ ಕರ್ತವ್ಯಕ್ಕೆ ನಿಯೋಜಿಸಿರುವುದು ಸರಿಯಲ್ಲ. ಈ ಸರ್ಕಾರದಲ್ಲಿ ನ್ಯಾಯಕ್ಕೆ ಬೆಲೆ ಇಲ್ಲದಂತಾಗಿದೆ. ಗೃಹ ಇಲಾಖೆಯನ್ನು ಪರಮೇಶ್ವರ್ ನಡೆಸುತ್ತಿದ್ದಾರೋ ಅಥವಾ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಯತೀಂದ್ರ ನಡೆಸುತ್ತಿದ್ದಾರಾ ಎಂಬ ಅನುಮಾನವಿದೆ. ರಾಮಚಂದ್ರರಾವ್ ಮೇಲಿನ ಅಮಾನತು ಆದೇಶ ಹಿಂಪಡೆಯಲು ದೊಡ್ಡ ಮಟ್ಟದ ಕಿಕ್‌ಬ್ಯಾಕ್ ಪಡೆದಿರಬಹುದು. ರಾಜ್ಯದಲ್ಲಿ ಯಾವ ಸೀಮೆಯ ಅಧಿಕಾರ ನಡೆಯುತ್ತಿದೆ ಎಂದು ಕಿಡಿಕಾರಿದರು.

ಮೇ 9ಕ್ಕೆ ಚಿತ್ರದುರ್ಗದಲ್ಲಿ ಆಯೋಜಿಸಿರುವ ಬಿಎಸ್‌ವೈ ಅಭಿಮಾನೋತ್ಸವಕ್ಕೆ ವಿಶ್ವನಾಥ್ ವಿರೋಧ ವ್ಯಕ್ತಪಡಿಸಿದರು.

ತಮಿಳುನಾಡು ಚುನಾವಣಾ ಫಲಿತಾಂಶ ಕುರಿತು ಮಾತನಾಡಿದ ಅವರು, ತಮಿಳುನಾಡಿನಲ್ಲಿ ಯುವ ಸಮೂಹ ಓಟ್ ಮಾಡಿದ ಹಿನ್ನೆಲೆಯಲ್ಲಿ ಅಲ್ಲಿನ ರಾಜಕೀಯ ಚಿತ್ರಣವೇ ಬದಲಾಗಿದೆ. ಆ ರೀತಿಯ ಬದಲಾವಣೆ ಇಲ್ಲಿಯೂ ಆಗಬೇಕಿದೆ. ಯುವ ಸಮೂಹ ರಾಜಕೀಯ ಪ್ರಜ್ಞೆ ಬೆಳೆಸಿಕೊಂಡು ಬದಲಾವಣೆಗೆ ಮುಂದಾಗಬೇಕಿದೆ. ನಟ ವಿಜಯ್ ಎರಡು ವರ್ಷದಲ್ಲಿ ಹೊಸ ಪಕ್ಷ ಕಟ್ಟಿ ಉತ್ತಮ ಸಾಧನೆ ಮಾಡಿದ್ದಾರೆ ಎಂದು ಹೆಚ್. ವಿಶ್ವನಾಥ್ ಮೆಚ್ಚುಗೆ ವ್ಯಕ್ತಪಡಿಸಿದರು.

ಚುನಾವಣಾ ರಾಜಕೀಯಕ್ಕೆ 'ಹಳ್ಳಿಹಕ್ಕಿ' ವಿದಾಯ

“ ಮುಂಬರುವ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ನಾನು ಹಲವು ಬಾರಿ ಚುನಾವಣೆ ಎದುರಿಸಿದಾಗ ಜನರೇ ಹಣ ನೀಡಿ ಆಶೀರ್ವಾದ ಮಾಡಿದ್ದರು. ಆದರೆ ಈಗ ಹಣ ನೀಡಿ ಚುನಾವಣೆ ಎದುರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ವಿಧಾನಸಭೆ ಚುನಾವಣೆ ಎದುರಿಸಲು 50 ಕೋಟಿ ಹಣ ಬೇಕು. ರಿಯಲ್ ಎಸ್ಟೇಟ್ ನಡೆಸುವವರು ನಿವೇಶನಗಳನ್ನಾದರೂ ಮಾರಾಟ ಮಾಡಿ ಚುನಾವಣೆ ಎದುರಿಸುತ್ತಾರೆ. ನನಗೆ ಒಂದು ಮನೆ ಒಂದು ನಿವೇಶನ ಮಾತ್ರ ಇದೆ. 50 ಕೋಟಿ ರೂ. ಖರ್ಚು ಮಾಡಿ ಚುನಾವಣೆ ಎದುರಿಸುವಷ್ಟು ಶಕ್ತಿ ಈಗ ನನ್ನಲ್ಲಿ ಇಲ್ಲ. ನನ್ನ ಮಕ್ಕಳು ಕೂಡ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಅವರ ಶಕ್ತ್ಯಾನುಸಾರ ರಾಜಕೀಯದಲ್ಲಿ ಮುಂದುವರಿಯುತ್ತಾರೆ. ನಾನು ಸಹ ರಾಜಕೀಯದಲ್ಲಿ ಮುಂದುವರಿಯುತ್ತೇನೆ. ಆದರೆ ಯಾವುದೇ ಚುನಾವಣೆಗೆ ಸ್ಪರ್ಧಿಸುವುದಿಲ್ಲ.

–ಹೆಚ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯ

ಪಂಚ ಗ್ಯಾರಂಟಿ ಯೋಜನೆ ಸಭೆ

ಮೈಸೂರು: ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅರುಣ್ ಕುಮಾರ್ ಅಧ್ಯಕ್ಷತೆಯಲ್ಲಿ ಗ್ಯಾರಂಟಿ ಯೋಜನೆ ಸಭೆಯನ್ನು ಮೇ 8ರಂದು ಬೆಳಗ್ಗೆ 11.30ಕ್ಕೆ ಜಿಪಂನ ಡಿ.ದೇವರಾಜು ಅರಸು ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

ಗುಜರಾತ್‌ಗೆ ವಿದೇಶಿ ಹೂಡಿಕೆ ಮಾತ್ರವಲ್ಲ ಐಪಿಎಲ್ ಫೈನಲ್ ಪಂದ್ಯವೂ ಸ್ಥಳಾಂತರ

ಕೇಂದ್ರದ ವಿರುದ್ಧ ಸಚಿವ ಪ್ರಿಯಾಂಕ್ ಖರ್ಗೆ ಆಕ್ರೋಶ

ಬೆಂಗಳೂರು, ಮೇ 7(ಕೆಎಂಶಿ)– ವಿದೇಶಿ ಬಂಡವಾಳ ಹೂಡಿಕೆಯನ್ನು ಸಂಪೂರ್ಣ ಗುಜರಾತ್ ರಾಜ್ಯಕ್ಕೆ ಕೊಂಡೊಯ್ಯುತ್ತಿರುವ ಕೇಂದ್ರ ಸರ್ಕಾರ ಇದೀಗ ಬೆಂಗಳೂರಿನಲ್ಲಿ ನಡೆಯಬೇಕಿದ್ದ ಐಪಿಎಲ್ ಪಂದ್ಯವನ್ನೂ ಅಲ್ಲಿಗೆ ಸ್ಥಳಾಂತರಿಸಿದೆ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಇಂದಿಲ್ಲಿ ಆರೋಪಿಸಿದ್ದಾರೆ.



ಪ್ರಿಯಾಂಕ್ ಖರ್ಗೆ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಮುಖ ಕ್ರಿಕೆಟ್ ಪಂದ್ಯಗಳು ಗುಜರಾತ್‌ನಲ್ಲಿ ನಡೆಸುತ್ತಾರೆ ಜೊತೆಗೆ ವಿದೇಶಿ ಬಂಡವಾಳವೂ ಹರಿದು ಹೋಗುತ್ತಿದೆ ಎಂದರು. ನಮ್ಮಲ್ಲೇನು ಭದ್ರತೆ ಕೊರತೆ ಇದೆಯೇ ಎಂಬುದಾಗಿ ಪ್ರಶ್ನಿಸಿರುವ ಪ್ರಿಯಾಂಕ್, ಕರ್ನಾಟಕಕ್ಕೆ ಬರಬೇಕಿದ್ದ ಆರು ಸೆಮಿಕಂಡಕ್ಟರ್ ಯೋಜನೆಗಳು ಗುಜರಾತ್ ಪಾಲಾಗಿವೆ. ಸಂಸ್ಥೆಗಳು ತಮ್ಮ ಅರ್ಜಿಯಲ್ಲಿ ನಮ್ಮ ಮೊದಲ ಆಯ್ಕೆ ಕರ್ನಾಟಕ ಇಲ್ಲವೇ ತಮಿಳುನಾಡು ಎಂಬುದಾಗಿ ನಮೂದಿಸಿದರೂ ಗುಜರಾತ್ ಇಲ್ಲವೇ ಅಸ್ಸಾಂಗೆ ಸ್ಥಳಾಂತರಗೊಳಿಸಲಾಗುತ್ತಿದೆ ಎಂದು ಸಚಿವರು ಅಸಮಾಧಾನ ವ್ಯಕ್ತಪಡಿಸಿದರು.

ಅಸ್ಸಾಂ ವಿದ್ಯಾರ್ಥಿಗಳು ಇಲ್ಲಿ ಬಂದು ತರಬೇತಿ ಪಡೆದು ಹೋಗುತ್ತಾರೆ. ನಮ್ಮಲ್ಲಿ ಮೂಲ ಸೌಕರ್ಯ ಇದ್ದರೂ ಕೇಂದ್ರ ಸರ್ಕಾರ ತಾರತಮ್ಯ ಮಾಡಿ ರಾಜ್ಯಕ್ಕೆ ಬರುವ ಹೂಡಿಕೆಗಳನ್ನು ಬಿಜೆಪಿ ಆಡಳಿತ ರಾಜ್ಯಗಳಿಗೆ ಸ್ಥಳಾಂತರ ಮಾಡುತ್ತಿದೆ ಎಂದು ದೂರಿದರು.

ಮೊಬೈಲ್ ಗೀಳಿನಿಂದ ವಿದ್ಯಾರ್ಥಿಗಳ ಹೊರತರಲು ಬುದ್ಧ ಪ್ರಜ್ಞೆ ಪರಿಹಾರ



ನಾಳೆ, ನಾಳಿದ್ದು ಡಾ.ವಿಷ್ಣುವರ್ಧನ್ ಸ್ಮಾರಕದಲ್ಲಿ ದ ಬುದ್ಧ ಫೆಸ್ಟ್ ಆಯೋಜನೆ

ಮೈಸೂರು, ಮೇ 7(ಎಂಟಿವೈ)– ವಿದ್ಯಾರ್ಥಿಗಳನ್ನು ಮೊಬೈಲ್ ಹಾಗೂ ಟಿವಿ ಗೀಳಿನಿಂದ ಹೊರತರುವ ನಿಟ್ಟಿನಲ್ಲಿ ಮೇ 9 ಮತ್ತು 10ರಂದು ಮೈಸೂರಿನ ಉದ್ಬೂರ್ ಗೇಟ್‌ನಲ್ಲಿರುವ ಸಾಹಸಸಿಂಹ ಡಾ.ವಿಷ್ಣುವರ್ಧನ್ ಸ್ಮಾರಕದಲ್ಲಿ 'ಬುದ್ಧ ಪ್ರಜ್ಞೆ' ಆಧರಿಸಿದ ದ ಬುದ್ಧ ಫೆಸ್ಟ್ ಆಯೋಜಿಸಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಕ್ಕಳು ಮೊಬೈಲ್‌ಗೆ ದಾಸರಾಗಿ ಜೀವನವನ್ನೇ ಕಳೆದುಕೊಳ್ಳುತ್ತಿದ್ದಾರೆ. ಅದರಲ್ಲೂ ಆನ್‌ಲೈನ್ ಗೇಮ್ ಆಡುವ ಮೂಲಕ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರಕರಣ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮಕ್ಕಳನ್ನು ಮೊಬೈಲ್, ಟಿವಿ, ಸಾಮಾಜಿಕ ಜಾಲತಾಣಗಳಿಂದ ಹೊರಗೆ ತರುವ ನಿಟ್ಟಿನಲ್ಲಿ ದ ಬುದ್ಧ ಫೆಸ್ಟ್ ಆಯೋಜಿಸಲಾಗಿದೆ.

ಬುದ್ಧ ಪ್ರಜ್ಞೆಯನ್ನು ಮನೆಯಲ್ಲೇ ಮಾತಾಡಿ ಎಂಬ ಅಭಿಯಾನದ ಮೂಲಕ ಮಕ್ಕಳಿಗೆ ಬುದ್ಧರ ಕಥೆ ಹೇಳಿ ಮಕ್ಕಳ ಸಾಮಾಜಿಕ ಚಿಂತನೆಗೊಳಪಡುವಂತೆ ಪ್ರೇರಣೆ ನೀಡುವ ಉದ್ದೇಶದಿಂದ ಈ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.



ಪುರುಷೋತ್ತಮ್

ಈ ಹಿಂದೆ ರಾಜ್ಯಾದ್ಯಂತ ಇದೇ ವಿಷಯ ಕುರಿತು ಹಮ್ಮಿಕೊಂಡಿದ್ದ ಆನ್‌ಲೈನ್ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದ ನೂರಾರು ಮಕ್ಕಳು ವಿವಿಧ ಸ್ಪರ್ಧೆಗಳಲ್ಲಿ ಭಾಗಿಯಾಗಲಿದ್ದಾರೆ. ಎರಡೂ ದಿನ ಬೆಳಗ್ಗೆ 7.30ರಿಂದ ಸಂಜೆ 7.30ರವರೆಗೆ ಈ ಕಾರ್ಯಕ್ರಮ ನಡೆಯಲಿದೆ. ಖಿನ್ನತೆಗೆ ದೂಡಲ್ಪಡುತ್ತಿರುವ ಮಕ್ಕಳನ್ನು ನೈತಿಕವಾಗಿ ಮೇಲೆತಂದು ಆರೋಗ್ಯಕರ ಮನಸ್ಸು ರೂಢಿಸಿಕೊಳ್ಳುವಂತೆ ಮಾಡುವ ಉದ್ದೇಶದಿಂದ ಈ ಕಾರ್ಯಕ್ರಮ ನಡೆಸಲಾಗುತ್ತಿದೆ. ಕೆಲ ತಿಂಗಳ ಹಿಂದೆ ಬುದ್ಧ ಪ್ರಜ್ಞೆ ಬಗ್ಗೆ ಮನೆಯಲ್ಲೇ ಮಾತನಾಡಿ, ಬುದ್ಧರ ಕಥೆ ಹೇಳಿ ಎಂಬ ಶೀರ್ಷಿಕೆ ಅಡಿಯಲ್ಲಿ ಮಕ್ಕಳಿಗೆ ಆನ್‌ಲೈನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಬೀದರ್‌ನಿಂದ ಚಾಮರಾಜನಗರದವರೆಗಿನ ಮಕ್ಕಳು ಇದರಲ್ಲಿ ಪಾಲ್ಗೊಂಡಿದ್ದರು. ಮೇ 9, 10ರಂದು ಬುದ್ಧ ಪ್ರಜ್ಞೆ ಹರಡುವ ನಿಟ್ಟಿನಲ್ಲಿ ಬುದ್ಧ ಪ್ರಜ್ಞೆ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಅಂದು ನಾಲ್ಕು ಸಭಾಂಗಣಗಳಲ್ಲಿ ನುರಿತ ತೀರ್ಪುಗಾರರಿಂದ ವಿವಿಧ ಸ್ಪರ್ಧೆ ನಡೆಯಲಿದೆ. ಪಾಲ್ಗೊಂಡ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಲಾಗುವುದು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕೋಟಿಗಾನಹಳ್ಳಿ ರಾಮಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಜ್ಞಾನಪ್ರಕಾಶ ಸ್ವಾಮೀಜಿ, ತಾವು ಪಾಲ್ಗೊಂಡು ಬುದ್ಧ ಪ್ರಜ್ಞೆ ಬಗ್ಗೆ ಅರಿವು ಮೂಡಿಸಲಾಗುವುದು. ಈ ಕಾರ್ಯಕ್ರಮ ಪರಿಕಲ್ಪನೆ ಅಂಬೇಡ್ಕರ್ ಸಾಹಿತ್ಯ ಅಕಾಡೆಮಿಯದಾಗಿದ್ದರೆ, ಸಹಯೋಗ ಗ್ರಾಮ್ಯಾಕ್ಸ್ ಡೆವಲಪರ್ಸ್ ಸಹಕಾರ ನೀಡುತ್ತಿದೆ ಎಂದರು. ಗೋಷ್ಠಿಯಲ್ಲಿ ಸಾಹಿತಿ ಹರಕುಮಾರ್, ಸೋಮಯ್ಯ ಮಲೆಯೂರು, ಹಾರೋಹಳ್ಳಿ ಸುರೇಶ್ ಇದ್ದರು.

ಅಮಾನತ್ತಾಗಿದ್ದ ಮುಖ್ಯ ಪೇದೆ ನಾಪತ್ತೆ


■ ಪತ್ನಿಯಿಂದ ವಿಜಯನಗರ ಠಾಣೆಗೆ ದೂರು

ಮೈಸೂರು, ಮೇ 7(ಜಿಎ)–ಅಮಾನತಿನಲ್ಲಿದ್ದ ನಗರ ಸಶಸ್ತ್ರ ಮೀಸಲು ಪಡೆಯ ಹೆಡ್ ಕಾನ್ಸ್‌ಟೇಬಲ್ ಧನಂಜಯ ಕಾಣೆಯಾಗಿದ್ದು, ಈ ಸಂಬಂಧ ಹುಡುಕಿಕೊಡುವಂತೆ ಪತ್ನಿ ರಾಜೇಶ್ವರಿ ವಿಜಯನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಕಾಣೆಯಾಗಿರುವ ಹೆಡ್ ಕಾನ್ಸ್‌ಟೇಬಲ್ ಧನಂಜಯ ದೇವರಾಜ ಪೊಲೀಸ್ ಠಾಣೆಯಲ್ಲಿ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಕೆಲವು ದಿನಗಳ ಹಿಂದೆ ಕರ್ತವ್ಯದಲ್ಲಿದ್ದ ವೇಳೆ ದೇವರಾಜ ಠಾಣೆಯ ಉಮೇಶ್ ಹಾಗೂ ಧನಂಜಯ್ 112 ವಾಹನದಲ್ಲಿ ಕ್ಷುಲ್ಲಕ ಕಾರಣಕ್ಕೆ ಜಗಳವಾಡಿ ಮಾತಿನ ಚಕಮಕಿ ನಡೆಸಿದ್ದರು. ಉಮೇಶ್ ಧನಂಜಯ್ ಮೇಲೆ ಹಲ್ಲೆ ನಡೆಸಿದ ವೀಡಿಯೊ ವೈರಲ್ ಆಗಿತ್ತು ಈ ಘಟನೆ ಪೊಲೀಸ್ ಇಲಾಖೆಗೆ ಮುಜುಗರ ತಂದಿತ್ತು. ಈ ಕಾರಣಕ್ಕಾಗಿ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಇಬ್ಬರನ್ನೂ ಸಸ್ಪೆಂಡ್ ಮಾಡಿದ್ದರು. ಇತ್ತೀಚೆಗೆ ಉಮೇಶ್ ಅಮಾನತು ಆದೇಶ ರದ್ದುಪಡಿಸಿ ಕರ್ತವ್ಯಕ್ಕೆ ನಿಯೋಜನೆ ಮಾಡಲಾಗಿತ್ತು. ಧನಂಜಯ ಅಮಾನತು ಮುಂದುವರೆಸಲಾಗಿತ್ತು. ಈ ವಿಚಾರದಲ್ಲಿ ಧನಂಜಯ್ ಮಾನಸಿಕ ಖಿನ್ನತೆಗೆ ಒಳಗಾಗಿದ್ದರು. ಹಿರಿಯ ಅಧಿಕಾರಿಗಳ ಭೇಟಿ ಮಾಡಲು ಸಾಧ್ಯವಾಗದ ಕಾರಣ ಮನನೊಂದಿದ್ದರು. ಮೇ 4ರಂದು ಹೂಟಗಳ್ಳಿ ಹೌಸಿಂಗ್ ಬೋರ್ಡ್ ನಿವಾಸದಿಂದ ಹೊರಟವರು ಮನೆಗೆ ಹಿಂದಿರುಗಿಲ್ಲವೆಂದು ಪತ್ನಿ ರಾಜೇಶ್ವರಿ ಕಾಣೆಯಾಗಿದ್ದಾರೆ ಎಂದು ದಾಖಲಿಸಿದ್ದಾರೆ.

ಟನ್ ಕಬ್ಬಿಗೆ 4500 ರೂ. ದರ ನಿಗದಿಗೆ ಕಬ್ಬು ಬೆಳೆಗಾರರ ಆಗ್ರಹ

ಮೈಸೂರು, ಮೇ 7(ಎಸ್‌ಪಿಎನ್)– 2026–27ನೇ ಸಾಲಿನ (10.25 ಇಳುವರಿ ಸಕ್ಕರೆ ಉತ್ಪಾದನೆ) ಟನ್ ಕಬ್ಬಿಗೆ 3,650 ರೂ.ಗಳನ್ನು ನಿಗದಿಪಡಿಸಿರುವ ಕೇಂದ್ರ ಸರ್ಕಾರದ ನಿರ್ಧಾರಕ್ಕೆ ರಾಜ್ಯ ಕಬ್ಬು ಬೆಳೆಗಾರರ ಸಂಘ ತೀವ್ರ ವಿರೋಧ ವ್ಯಕ್ತಪಡಿಸಿದೆ. ರಾಜ್ಯ ಸರ್ಕಾರ ಟನ್ ಕಬ್ಬಿಗೆ 4,450 ರೂ. ನಿಗದಿ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ವರದಿ ನೀಡಿದೆ. ಈ ವರದಿಯನ್ನು ಕೇಂದ್ರ ಸರ್ಕಾರ ಪರಿಗಣಿಸಿ ಹೆಚ್ಚುವರಿ ಬೆಲೆನಿಗದಿ ಮಾಡಬೇಕಾಗಿತ್ತು. ಈ ನಿರ್ಧಾರ ಕಬ್ಬು ಬೆಳೆಗಾರರನ್ನು ಕಬ್ಬು ಬೆಳೆಯಿಂದ ಒಕ್ಕಲೆಬ್ಬಿಸುವ ಕಾರ್ಯತಂತ್ರವಾಗಿದೆ. ಹಾಗಾಗಿ ಈ ಕೂಡಲೇ ಎಫ್‌ಆರ್‌ಪಿ ದರವನ್ನು ಪುನರ್ ಪರಿಶೀಲಿಸಿ, ಟನ್ ಕಬ್ಬಿಗೆ 4,500 ರೂ. ನಿಗದಿಗೊಳಿಸಬೇಕು. ಕೇಂದ್ರ ಸರ್ಕಾರ ಸಕ್ಕರೆ ನಿಯಂತ್ರಣ ಕಾಯ್ದೆ 1966ಕ್ಕೆ ತಿದ್ದುಪಡಿ ಮಾಡಿ ಕಾನೂನು ಉಲ್ಲಂಘಿಸುವ ಸಕ್ಕರೆ ಕಾರ್ಖಾನೆ ಮಾಲೀಕರಿಗೆ ಕಠಿಣ ಶಿಕ್ಷೆ ಜಾರಿಗೆ ತರಬೇಕು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.



ಶಾಂತಕುಮಾರ್

“ ಕಬ್ಬಿನಿಂದ ಸಕ್ಕರೆ ಎಥನಾಲ್, ವಿದ್ಯುತ್, ಕಾಂಪೋಸ್ಟ್ ಗೊಬ್ಬರ ಸೇರಿದಂತೆ ಇತರೆ ಉಪ ಉತ್ಪನ್ನಗಳನ್ನು ಉತ್ಪಾದಿಸುವ ಸಕ್ಕರೆ ಕಾರ್ಖಾನೆಗಳು ರೈತರಿಗೆ ನಿರಂತರವಾಗಿ ವಂಚಿಸುತ್ತಿವೆ. ಕಾರ್ಖಾನೆ ಮಾಲೀಕರು ಸರ್ಕಾರದ ಆದೇಶಗಳನ್ನು ಪಾಲಿಸದೇ ಕಬ್ಬಿನ ಹಣ ಪಾವತಿಯನ್ನು ಸಕ್ಕರೆ ಕಾರ್ಖಾನೆಗಳು ಸಕಾಲಕ್ಕೆ ಸಮರ್ಪಕವಾಗಿ ಮಾಡುತ್ತಿಲ್ಲ.

–ಕುರುಬೂರು ಶಾಂತಕುಮಾರ್

ಮೈಸೂರಲ್ಲಿ ರಾಜ್ಯ ಅಹಿಂದ ಒಕ್ಕೂಟದ ಸಭೆ



ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ನೀಡಿ, ಅಭಿನಂದಿಸಲಾಯಿತು.

ಪದಾಧಿಕಾರಿಗಳ ನೇಮಿಸಿ ಅಭಿನಂದನೆ

ಮೈಸೂರು,ಮೇ 7(ಪಿಎಂ)– ಶೋಷಿತ ಸಮುದಾಯಗಳನ್ನು ಒಂದೇ ವೇದಿಕೆಯಡಿ ರಾಜಕೀಯವಾಗಿ ಸಂಘಟಿಸಿ ರಾಜ್ಯ ಮಟ್ಟದಲ್ಲಿ ಅಹಿಂದ ಒಕ್ಕೂಟವನ್ನು ಬಲಪಡಿಸುವ ಅಗತ್ಯವಿದೆ ಎಂದು ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟದ ಗೌರವ ಅಧ್ಯಕ್ಷ ಎನ್.ಆರ್.ನಾಗೇಶ್ ಹೇಳಿದರು.

ಮೈಸೂರಿನ ಜಲದರ್ಶಿನಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ವಿವಿಧ ರಾಜಕೀಯ ಪಕ್ಷಗಳು ಅಹಿಂದ ಒಕ್ಕೂಟವನ್ನು ಕೇವಲ ಮತಗಳಿಗಾಗಿ ಬಳಸಿಕೊಳ್ಳುವುದರಿಂದ ಯಾವುದೇ ದೀರ್ಘಕಾಲಿಕ ಪ್ರಯೋಜನವಾಗುವುದಿಲ್ಲ. ಸಮಾನತೆಯ ಸಮ ಸಮಾಜ ನಿರ್ಮಾಣಕ್ಕಾಗಿ ಅಹಿಂದ ಒಕ್ಕೂಟವನ್ನು ಮತ್ತಷ್ಟು ಸಂಘಟಿತಗೊಳಿಸುವುದು ಅನಿವಾರ್ಯ ಎಂದರು.

ರಾಜ್ಯ ಅಹಿಂದ ಒಕ್ಕೂಟದ ಅಧ್ಯಕ್ಷ ದ್ಯಾವಪ್ಪ ನಾಯಕ ಮಾತನಾಡಿ, ಅಹಿಂದ ಒಕ್ಕೂಟವನ್ನು ರಾಜ್ಯಾದ್ಯಂತ ಸಂಘಟಿಸಿ ಬಲಪಡಿಸಲಾಗುವುದು. ಒಕ್ಕೂಟ ವ್ಯವಸ್ಥೆಯನ್ನು ಗ್ರಾಮದಿಂದ ರಾಜ್ಯ ಮಟ್ಟದವರೆಗೆ ಬಲಿಷ್ಠಗೊಳಿಸುವ ಗುರಿ ಹೊಂದಿದ್ದೇವೆ ಎಂದು ಹೇಳಿದರು.

ಸಭೆಯಲ್ಲಿ ಅಬ್ದುಲ್ ಶುಕುರ್‌ರನ್ನು ರಾಜ್ಯ ಕಾರ್ಯಾಧ್ಯಕ್ಷರಾಗಿ, ಅಬ್ದುಲ್ ಮಾಲೀಕ್‌ರನ್ನು ರಾಜ್ಯ ಉಪಾಧ್ಯಕ್ಷರಾಗಿ ಹಾಗೂ ಜೆ.ಶಿವಕುಮಾರ್‌ರನ್ನು ನಂಜನಗೂಡು ತಾಲೂಕು ಅಧ್ಯಕ್ಷರಾಗಿ ನೇಮಿಸಿ ಆದೇಶ ಪತ್ರ ನೀಡಿ ಅಭಿನಂದಿಸಲಾಯಿತು.

ಈ ವೇಳೆ ಒಕ್ಕೂಟದ ಗೌರವ ಸಲಹೆಗಾರ ಶ್ರೀನಿವಾಸ್ ಮಿತ್ರಣ್ಣ, ರಾಜ್ಯ ಮಹಿಳಾ ಅಧ್ಯಕ್ಷೆ ಎಂ.ಎನ್.ಗೀತಾ, ರಾಜ್ಯ ಮಹಿಳಾ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ, ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಆರ್.ವಿನೋದ್ ಉಪ್ಪಾರ್, ಸಂಘಟನಾ ಕಾರ್ಯದರ್ಶಿ ಮಹೇಶ್, ಜೆ.ರವಿಕುಮಾರ್, ಮೈಸೂರು ಜಿಲ್ಲಾ ಅಧ್ಯಕ್ಷ ಕೆ.ವಿ.ರಾಜು, ರಾಜ್ಯ ನಿರ್ದೇಶಕರಾದ ಸುರೇಶ್‌ಕುಮಾರ್ ಬೀಡು, ಲಕ್ಷ್ಮಿ, ಅನಿತಾ, ರಾಜ್ಯ ರೈತರ ಯುವ ಘಟಕದ ಅಧ್ಯಕ್ಷ ಪಯಾಜ್, ರಫಿ ಉಲ್ಲಾ, ನಾಗರಾಜಗೌಡ, ಇಮ್ರಾನ್ ಪಾಷಾ, ಮೂಜಿಬ್ ಖಾನ್, ಕರೀಂ ಸೇರಿದಂತೆ ಮತ್ತಿತರರು ಹಾಜರಿದ್ದರು.

ಪಿಯು ಶುಲ್ಕ ಆನ್‌ಲೈನ್ ಪಾವತಿಗೆ ಸೂಚನೆ

ಮೈಸೂರು, ಮೇ 7(ಎಸ್‌ಪಿಎನ್)– ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ ಪಿಯು ಕಾಲೇಜುಗಳಿಗೆ 2026–27ನೇ ಸಾಲಿಗೆ ಪ್ರವೇಶ ಪಡೆಯುವ ಪ್ರಥಮ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕವೇ ಶುಲ್ಕಗಳನ್ನು ಪಾವತಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ) ನಿರ್ದೇಶಕರು, ರಾಜ್ಯ ಎಲ್ಲಾ ಪಿಯು ಕಾಲೇಜು ಪ್ರಾಂಶುಪಾಲರಿಗೆ ಸೂಚನೆ ನೀಡಿದ್ದಾರೆ.

ಈ ಸಾಲಿನ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಿಗೆ ದಾಖಲಾಗುವ ವಿದ್ಯಾರ್ಥಿಗಳಿಂದ ಸಂಗ್ರಹಿಸುವ ಸರ್ಕಾರಿ ಶುಲ್ಕ ಮತ್ತು ಮಾನ್ಯತಾ ನವೀಕರಣ ಶುಲ್ಕಗಳನ್ನು ನಿಗದಿತ ದಿನಾಂಕದೊಳಗೆ ಆನ್‌ಲೈನ್‌ನಲ್ಲಿ ಪಾವತಿಸಲು ಎಸ್‌ಎಟಿಎಸ್ ಪೋರ್ಟಲ್‌ನಲ್ಲಿ ಅವಕಾಶ ಕಲ್ಪಿಸಿತ್ತು. ಆದರೆ, ಕೆಲವು ಕಾಲೇಜಿನ ಪ್ರಾಂಶುಪಾಲರು ಆಫ್‌ಲೈನ್ ಮೂಲಕ ಶುಲ್ಕ ಪಾವತಿಸಿದ್ದಾರೆ.

ಅಲ್ಲದೆ, ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಖಾಸಗಿ ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಪಿಯು ಕಾಲೇಜು ಪ್ರಾಂಶುಪಾಲರಿಗೆ, ಆನ್‌ಲೈನ್ ಮೂಲಕ ಶುಲ್ಕ ಪಾವತಿಸಲು ಅಗತ್ಯ ಕ್ರಮವಹಿಸುವಂತೆ ಸೂಚಿಸಿದೆ. ಒಂದು ವೇಳೆ ಕೆ–2 ಚಲನ್ ಮುಖಾಂತರ ಶುಲ್ಕಗಳನ್ನು ಪಾವತಿ ಮಾಡಿದಲ್ಲಿ ಸಂಬಂಧಪಟ್ಟ ಶುಲ್ಕ ಕಾಲೇಜಿನ ಪ್ರಾಂಶುಪಾಲರೇ ಸಂಪೂರ್ಣ ಜವಾಬ್ದಾರರಾಗುತ್ತಾರೆ ಎಂದು ನಿರ್ದೇಶಕರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಫಲ್ಗುಣಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು: ಮೈಸೂರಿನ ಜಾಕಿ ಕ್ವಾಟ್ರಸ್ ಬಳಿಯಿರುವ ಸರ್ಕಾರಿ ಆದರ್ಶ ವಿದ್ಯಾಲಯದ ಫಲ್ಗುಣಿ ಕೆ.ಎಂ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625/599 (ಶೇ.95.84) ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಈಕೆ ಮಂಜುನಾಥ್.ಕೆ.ವಿ ಮತ್ತು ಸೌಮ್ಯಎಂ ದಂಪತಿ ಪುತ್ರಿ

ಕೇಂದ್ರದ ವಿರುದ್ಧ ಮತ್ತೆ ಸಿಡಿದೆದ್ದ ರಾಜ್ಯ ಸರ್ಕಾರ
ವಿಬಿ ಜಿ ರಾಮ್ ಜೀ ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರಲು ತೀರ್ಮಾನ

ಬೆಂಗಳೂರು,ಮೇ 07– ಮನ್‌ರೇಗಾ ಎನ್ನುವುದನ್ನು ವಿಬಿ ಜಿ ರಾಮ್ ಜೀ ಎಂದು ಬದಲಾವಣೆ ಮಾಡಿರುವ ಕೇಂದ್ರ ಸರ್ಕಾರದ ವಿರುದ್ಧ ಕೋರ್ಟ್ ಮೊರೆ ಹೋಗಲು ರಾಜ್ಯ ಕಾಂಗ್ರೆಸ್ ಸರ್ಕಾರ ಮುಂದಾಗಿದೆ. ಈ ಸಂಬಂಧ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟದಲ್ಲಿ ಚರ್ಚಿಸಿದ್ದು, ಮನ್‌ರೇಗಾ ಹೆಸರು ಬದಲಾವಣೆ ಪ್ರಶ್ನಿಸಿ ಕೋರ್ಟ್ ಮೊರೆ ಹೋಗಲು ತೀರ್ಮಾನಿಸಿದೆ.

ಸಚಿವ ಸಂಪುಟ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವ ಎಚ್‌ಕೆ ಪಾಟೀಲ್, ಮನ್‌ರೇಗಾವನ್ನು ವಿಬಿ ಜಿ ರಾಮ್ ಜೀ ಎಂದು ಬದಲಿಸಿದ ಕೇಂದ್ರ ಸರ್ಕಾರ ನಡೆಯನ್ನು ಪ್ರಶ್ನಿಸಿ ಕೋರ್ಟ್ ಮೊರೆ ಹೋಗಲು ಸಂಪುಟದಲ್ಲಿ ನಿರ್ಧರಿಸಿದ್ದೇವೆ. ಈ ಬಗ್ಗೆ ಸಂಪುಟ ಸಭೆಯಲ್ಲಿ 15 ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಮನ್‌ರೇಗಾ ಸ್ಥಗಿತ ಮಾಡಿದ್ದರಿಂದ ಬಡವರಿಗೆ ಅನಾನುಕೂಲವಾಗಲಿದೆ. ಹೀಗಾಗಿ ಮನ್‌ರೇಗಾ ಮರುಸ್ಥಾಪನೆಗೆ ನಾವು ಚಳವಳಿ ಮಾಡಿದ್ದೆವು. ಮೇ ತಿಂಗಳಾದರೂ ವಿಬಿ ಜಿ ರಾಮ್‌ಜೀ ನೋಟಿಫೈ ಆಗಿಲ್ಲ. ಇದುವರೆಗೆ ವಿಬಿ ಜಿ ರಾಮ್‌ಜೀ ದೇಶದಲ್ಲಿ ಇನ್ನೂ ಬಂದಿಲ್ಲ. ಮನ್‌ರೇಗಾ ಬಾಕಿ ಕೆಲಸ ಮುಂದುವರಿಸಬಹುದೆಂದು ಆದೇಶಿಸಿದೆ. ಆದರೆ ಕೇಂದ್ರ ಸರ್ಕಾರ ಯಾವುದೇ ಅನುದಾನ ನೀಡಿಲ್ಲ ಎಂದು ಹೇಳಿದರು.

ಈ ಬಾರೀ ಮಳೆ ಕೊರತೆಯಿಂದ ನೀರಿನ ಸಂಕಷ್ಟ ಅಂತಿದ್ದಾರೆ. ಆದರೂ ಬಡವರ ಕೆಲಸದ ಬಗ್ಗೆ ಕೇಂದ್ರ ಚಿಂತನೆ ಮಾಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ನಿರ್ಣಯದ ಮೂಲಕ ಒತ್ತಡ ಹೇರಿದ್ದೇವೆ. ಮುಖ್ಯಮಂತ್ರಿ ಕೂಡ ಪ್ರಧಾನಮಂತ್ರಿಗಳಿಗೆ ಪತ್ರ ಬರೆದಿದ್ದಾರೆ ಎಂದರು.

ರಾಜ್ಯ ಶಿಕ್ಷಣ ನೀತಿ ಆಯೋಗದ ಶಿಫಾರಸು ಮಂಡನೆ : ಸಂಪುಟ ಸಭೆಯಲ್ಲಿ ಆಯೋಗದ ಶಿಫಾರಸುಗಳ ಬಗ್ಗೆ ಚರ್ಚೆ ಆಗಿದ್ದು, ಆಯೋಗದ ವರದಿಯ ಅನುಷ್ಠಾನಕ್ಕೆ ಸಂಪುಟ ಉಪ ಸಮಿತಿ ರಚಿಸಲು ಸಂಪುಟದಲ್ಲಿ ನಿರ್ಧಾರವಾಗಿದೆ. ಈ ಸಂಪುಟ ಉಪ ಸಮಿತಿಯು, ಆಯೋಗದ ಶಿಫಾರಸು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಕೆ ಮಾಡಲಿದೆ.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು: ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತಾಶ್ರಯದಲ್ಲಿ ಮೇ 12ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ ಮಂಡಿಮೊಹಲ್ಲಾ, ಕಬೀರ್ ರಸ್ತೆ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 9448753597, 99161 55453, 9448738657 ಸಂಪರ್ಕಿಸಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

08.5.2026 ಶುಕ್ರವಾರ, ಮಳೆ ನಕ್ಷತ್ರ: ಭರಣಿ 27.04.2026ರಿಂದ 10.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಉತ್ತರಾಷಾಢ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ಕೀಲು ನೋವು, ಅಲರ್ಜಿ, ಚರ್ಮದ ರೋಗಗಳು, ಒತ್ತಡ, ಆತಂಕ, ಬಾಲನೆರೆ, ವಯೋಸಹಜ ಗುಣಗಳು, ದೃಷ್ಟಿಮಾಂದ್ಯ, ತಲೆ ನೋವು, ಕೆಮ್ಮು, ಅಸ್ತಮಾ, ಪಿಸಿಓಡಿ, ಪುರುಷ ಹಾಗೂ ಸ್ತ್ರೀ ಬಂಜೆತನ ತಪಾಸಣಾ ಶಿಬಿರ, ಬೆಳಗ್ಗೆ 9.30 ರಿಂದ ಆರೋಗ್ಯ ತಪಾಸಣೆ ಮತ್ತು ಜಾಗೃತಿ ಶಿಬಿರ, ಚರ್ಮ ಆರೈಕೆ ಮತ್ತು ಡಿಟಾಕ್ಸಿಫಿಕೇಶನ್ ಯೋಗ ಶಿಬಿರ, ಮಧುಮೇಹದ ಗಾಯಗಳ ಚಿಕಿತ್ಸಾ ಶಿಬಿರ, ಆರ್ಥರೈಟಿಸ್ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಸುಯೋಗ್ ಆಸ್ಪತ್ರೆ ಮತ್ತು ಸುಯೋಗ್ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಕುಟುಂಬ** : ಸುಯೋಗ್ ಆಸ್ಪತ್ರೆ ಅಧ್ಯಕ್ಷರು ಹಾಗೂ ವೈದ್ಯ ಸಾಹಿತಿಗಳೂ ಆದ ಡಾ. ಎಸ್.ಪಿ. ಯೋಗಣ್ಣ ಅವರ 72ನೇ ವರ್ಷದ ಜನ್ಮ ದಿನೋತ್ಸವ, ಸ್ಥಳ: ಸೆಮಿನಾರ್ ಹಾಲ್, 4ನೇ ಮಹಡಿ, ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಮಧ್ಯಾಹ್ನ 1ಕ್ಕೆ.

■ **ಯುಗಾಸಿಸ್ ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್** : ಹೇಬಡ್ಡಿ ಎಐ ಕೃತಕ ಬುದ್ಧಿಮತ್ತೆ ಆಧಾರಿತ ವೇದಿಕೆಯ ಸಾಫ್ಟ್ ಲಾಂಚ್ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಧನಂಜಯ ಸುಧನ್ವಾ, ಶಾಸಕ ಸಮೃದ್ಧಿ ಮಂಜುನಾಥ್, ಲಿ ರುಚಿ ಗ್ರೂಪ್ ಆಫ್ ಹೋಟೆಲ್ಸ್ ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಬಿ. ಮಂಜುನಾಥ್, ಸ್ಥಳ : ಹೋಟೆಲ್ ಲೀ ರುಚಿ ದಿ ಪ್ರಿನ್ಸ್, ಹುಣಸೂರು ರಸ್ತೆ, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ : ಬಿ.ಕೆ. ಮೀನಾಕ್ಷಿ, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಮತ್ತು ಸಂಜೆ 5.30– ಚೂಟಿ ಚೂಟಿ ಚುಟುಕ್ ಗುಳುಂ ಗುಟಕ್–ಶಿಶು ಗೀತೆಗಳ ಕಾರ್ಯಕ್ರಮ, 8.35 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ, 9.30 ಗಾಂಧೀ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ. ರಾಘವೇಂದ್ರ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ: ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು. ಪ್ರಸ್ತುತಿ: ಜಿ ಶಾಂತ ಕುಮಾರ್, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ. ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ. ಎಸ್.ವಿಜಯರಾಘವನ್– ವೀಣಾವಾದನ, 4.00 ಮಹಿಳಾರಂಗ, ಸಖೀ ಸಂವಾದ, ವಿಷಯ –ವಿಶ್ವ ತಾಯಂದಿರ ದಿನ, ಪ್ರಸ್ತುತಿ –ನೇತ್ರಾ ಕೆ. ಹಾಗೂ ಸಹನ, 4.30 ವೃತ್ತಿ ಮಾರ್ಗದರ್ಶನ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಪಪ್ಪಾಯ ಬೇಸಾಯ ಕುರಿತು ಸಂವಾದ. ಭಾಗವಹಿಸುತ್ತಾರೆ–ಮೈಸೂರಿನ ಸಸ್ಯ ವಿಜ್ಞಾನಿ ಡಾ. ವಸಂತಕುಮಾರ್ ತಿಮಕಾಪುರ ಮತ್ತು ಮಳವಳ್ಳಿ ತಾಲೂಕು ರಾವಣಿ ಗ್ರಾಮದ ನಿತ್ಯಾನಂದ, ಪ್ರಸ್ತುತಿ–ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ಕನ್ನಡ ಭಾರತಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಿ.ಪಶುಪತಿ – ಹಾಡುಗಾರಿಕೆ, 10.00 ತತ್ವ ಸಂಚಾರ– ಜನಪದ ಗಾಯಕರ ತತ್ವಗಾಯನ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 8 ಶುಕ್ರವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 22 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ದೇಶದಲ್ಲಿ ಇಂದಲ್ಲಾ ನಾಳೆ

ಏಕರೂಪ ನಾಗರಿಕ ಸಂಹಿತೆ ಜಾರಿ

■ ಮೈಸೂರಿನಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಡಾ.ಮೋಹನ್ ಭಾಗವತ್ ಆಶಾಭಾವ ■ ಸುತ್ತೂರು ಮಠದಲ್ಲಿ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ ■ ಏಕ ರೂಪ ನಾಗರಿಕ ಸಂಹಿತೆಯನ್ನ 142 ಕೋಟಿ ಜನ ನಿರ್ಧರಿಸಬೇಕು; ಸ್ವಲ್ಪ ನಿಧಾನವಾದರೂ ಜಾರಿಯಾಗುತ್ತೆ ■ ತಮ್ಮ ಅಸ್ತಿತ್ವಕ್ಕಾಗಿ ಪಾಶ್ಚಾತ್ಯರು ಹೋರಾಡುತ್ತಾರೆ; ಆದರೆ ಭಾರತೀಯರು ಪರೋಪಕಾರಿಗಳು, ಉದಾರಿಗಳು ■ ಜಾತಿ, ಭಾಷೆ, ಧಾರ್ಮಿಕ ಅಡೆ–ತಡೆಗಳ ಮೀರಿದ ಸಂಬಂಧ ರೂಢಿಸಿಕೊಳ್ಳುವ ಅನಿವಾರ್ಯತೆ ಇದೆ

ಮೈಸೂರು, ಮೇ 7(ಬಿಎಲ್‌ಯು)– ದೇಶದಲ್ಲಿ ಇಂದಲ್ಲಾ ನಾಳೆ ಏಕ ರೂಪ ನಾಗರಿಕ ಸಂಹಿತೆ ಜಾರಿಯಾಗಲಿದೆ ಎಂದು ಆರ್‌ಎಸ್‌ಎಸ್ (ರಾಷ್ಟ್ರೀಯ ಸ್ವಯಂ ಸೇವಕ ಸಂಘ) ಸರಸಂಘ ಸಂಚಾಲಕ ಡಾ.ಮೋಹನ್ ಭಾಗವತ್ ಅವರು ಸುಳಿವು ನೀಡಿದ್ದಾರೆ.



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠದಲ್ಲಿ ಗುರುವಾರ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಸುವರ್ಣ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ 15ನೇ ವಿಶೇಷ ಉಪನ್ಯಾಸದಲ್ಲಿ ಆರ್ ಎಸ್‌ಎಸ್ ಸರಸಂಘ ಸಂಚಾಲಕ ಡಾ.ಮೋಹನ್ ಭಾಗವತ್ ಅವರು 'ರಾಷ್ಟ್ರೀಯ ಅಭಿವೃದ್ಧಿಗೆ ಸಾಮಾಜಿಕ ಸೌಹಾರ್ದತೆ ಪ್ರೇರಕ' ವಿಷಯವಾಗಿ ಮಾತನಾಡಿದರು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠದಲ್ಲಿ ಇಂದು ಜೆಎಸ್‌ಎಸ್ ಮಹಾ ವಿದ್ಯಾಪೀಠದ ಸುವರ್ಣ ಮಹೋತ್ಸವ ಅಂಗವಾಗಿ ಆಯೋಜಿಸಿದ್ದ 15ನೇ ವಿಶೇಷ ಉಪನ್ಯಾಸದಲ್ಲಿ 'ರಾಷ್ಟ್ರೀಯ ಅಭಿವೃದ್ಧಿಗೆ ಸಾಮಾಜಿಕ ಸೌಹಾರ್ದತೆ ಪ್ರೇರಕ' ಕುರಿತು ಮಾತನಾಡುತ್ತಾ ಈ ಅಭಿಪ್ರಾಯ ವ್ಯಕ್ತಪಡಿಸಿದರು. ಉಪನ್ಯಾಸದ ನಂತರ ನಡೆದ ಸಂವಾದದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಯಾಗುವ ತುರ್ತು ಅಗತ್ಯವಿದೆಯೇ ಎಂಬ ಪ್ರಶ್ನೆಗೆ ಡಾ.ಮೋಹನ್ ಭಾಗವತ್ ಈ ಪ್ರತಿಕ್ರಿಯೆ ನೀಡಿದರು.

ದೇಶದ ಜನ ತೀರ್ಮಾನಿಸುತ್ತಾರೆ: ಈಗಾಗಲೇ ಉತ್ತರಾಖಂಡದಲ್ಲಿ ಏಕ ರೂಪ ನಾಗರಿಕ ಸಂಹಿತೆ ಜಾರಿಯಾಗಿದೆ. ಮತ್ತೆರಡು ರಾಜ್ಯದಲ್ಲಿ ಕೂಡ ಸದ್ಯದಲ್ಲೇ ಜಾರಿಯಾಗಬಹುದು. ಪ್ರಜಾಪ್ರಭುತ್ವದಲ್ಲಿ ಇಂತಹ ವಿಚಾರದ ಬಗ್ಗೆ ಒಬ್ಬ ವ್ಯಕ್ತಿ ತೀರ್ಮಾನ ಕೈಗೊಳ್ಳಲು ಸಾಧ್ಯವಿಲ್ಲ. ಇದನ್ನು ದೇಶದ 142 ಕೋಟಿ ಜನರು ತೀರ್ಮಾನಿಸುತ್ತಾರೆ ಎಂದರು.

ಏಕ ರೂಪ ನಾಗರಿಕ ಸಂಹಿತೆ ತುರ್ತು ಅಗತ್ಯತೆ ಬಗ್ಗೆ ಸ್ಪಷ್ಟನೆ ನೀಡಿದ ಡಾ.ಮೋಹನ್ ಭಾಗವತ್, ಈ ವಿಚಾರದ ಬಗ್ಗೆ ನಿಮಗೆ ಚಿಂತೆ ಬೇಡ. ಒಂದಲ್ಲಾ ಒಂದು ದಿನ ದೇಶದಲ್ಲಿ ಜಾರಿಯಾಗುತ್ತದೆ. ಆದರೆ ಸ್ವಲ್ಪ ನಿಧಾನವಾಗುತ್ತದೆ. ಈ ನಡುವೆ ಅರಿವು ಮೂಡಿಸುವ ನಿಮ್ಮ ಕೆಲಸವನ್ನು ನೀವು ಮುಂದುವರೆಸಿ ಎಂದು ಸಲಹೆ ನೀಡಿದರು.

ಜನಸಂಖ್ಯೆ ನಿಯಂತ್ರಣ ಸರ್ಕಾರದ ಕೆಲಸ: ದೇಶದಲ್ಲಿ ಜನ ಸಂಖ್ಯೆ ನಿಯಂತ್ರಣದ ಅಗತ್ಯತೆ ಬಗ್ಗೆಯೂ ಇದೇ ವೇಳೆ ಪ್ರತಿಕ್ರಿಯೆ ನೀಡಿದ ಡಾ.ಮೋಹನ್ ಭಾಗವತ್, ಈ ವಿಚಾರದಲ್ಲಿ ನನ್ನ ನಿಲುವು ಸ್ಪಷ್ಟಪಡಿಸಲು ನಾನು ಸರ್ಕಾರವಲ್ಲ. ಆರ್‌ಎಸ್‌ಎಸ್ ಮುಖ್ಯಸ್ಥ ಮಾತ್ರ. ಜನಸಂಖ್ಯೆ ನಿಯಂತ್ರಣ ಮಾಡಲು ಸರ್ಕಾರ ಕಾನೂನು ರೂಪಿಸುವುದಕ್ಕಿಂತ ಜನರಲ್ಲಿ ಇದರ ಬಗ್ಗೆ ಪರಿಣಾಮಕಾರಿಯಾದ ಅರಿವು ಮೂಡಿಸಬೇಕು. ಈ ವಿಚಾರದಲ್ಲಿ ಜನರು ಶಿಕ್ಷಿತರಾಗಬೇಕು ಎಂದು ಸಲಹೆ ನೀಡಿದರು.

ದೇಶದಲ್ಲಿ ಸಾಮಾಜಿಕ ಸಾಮರಸ್ಯ ಮತ್ತು ಸಾಮೂಹಿಕ ಕಲ್ಯಾಣದ ಅಗತ್ಯವಿದೆ. ದೇಶ ಅಭಿವೃದ್ಧಿಗೊಳ್ಳಲು ಭಾರತೀಯ ಸಮಾಜವು ಸ್ಪರ್ಧೆಯ ಬದಲು ಸಹಕಾರ ಹಾಗೂ ಸಮನ್ವಯತೆಯಿಂದ ವರ್ತಿಸಬೇಕು ಎಂದರು. ಅಸಮಾನತೆ ಮುಕ್ತ, ಸಾಮರಸ್ಯ, ಒಗ್ಗಟ್ಟಿನ ಸತ್ಯವನ್ನು ಅರಿತರೆ


■ 10ನೇ ಪುಟಕ್ಕೆ

ಹಿಂದೂ ಧರ್ಮ, ಸಂಸ್ಕೃತಿ ಇಡೀ ವಿಶ್ವಕ್ಕೆ ಮಾರ್ಗದರ್ಶಕ

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಮತ

ಮೈಸೂರು, ಮೇ 7(ಬಿಎಲ್‌ಯು)– ಹಿಂದೂ ಧರ್ಮ ಮತ್ತು ಸಂಸ್ಕೃತಿ ಇಡೀ ಜಗತ್ತಿಗೇ ಮಾರ್ಗದರ್ಶನ ನೀಡುವ ಸ್ಥಾನದಲ್ಲಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠದಲ್ಲಿ ಇಂದು ಜೆಎಸ್‌ಎಸ್ ಮಹಾ ವಿದ್ಯಾಪೀಠದ ಸುವರ್ಣ ಮಹೋತ್ಸವ ಅಂಗವಾಗಿ ಆಯೋಜಿಸಿದ್ದ 15 ನೇ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಪರೋಪಕಾರ ಮಾಡುವ ಮಾನವೀಯ ಅನುಕಂಪ ಭಾರತೀಯರಲ್ಲಿ ಮಾತ್ರ ಇದೆ ಎಂದು ಹೇಳಿದರು. ತಾನು ಯಾವ ಧರ್ಮವನ್ನು ಅನುಸರಿಸಬೇಕು ಎಂಬ ಜಿಜ್ಞಾಸೆಯಲ್ಲಿದ್ದ ಅಮೇರಿಕಾದ ಯುವಕನೊಬ್ಬನಿಗೆ ಹಿಂದೂ ಧರ್ಮದ ಶ್ರೇಷ್ಠತೆ ಮನದಟ್ಟಾಯಿತು. ಇದರಿಂದ ಆತ ಹಿಂದೂ ಧರ್ಮವನ್ನು ಅನುಸರಿಸಿದ. ಹಿಂದೂ ಧರ್ಮ ಮತ್ತು ಸಂಸ್ಕೃತಿಯ ಗಟ್ಟಿತನ ವಿಶ್ವಕ್ಕೆ ಮಾದರಿಯಾಗಿದೆ ಎಂದು ಸುತ್ತೂರು ಶ್ರೀಗಳು ಪ್ರಶಂಸೆ ವ್ಯಕ್ತಪಡಿಸಿದರು. ಕೆಲವರು ದೇಶ ಕೆಟ್ಟಿದೆ, ಜಗತ್ತು ಕೆಟ್ಟಿದೆ ಎಂಬ ಅಂಕು ಡೊಂಕಿನ ಮಾತನಾಡುತ್ತಾರೆ. ಆದರೆ, ತಾನು ಸರಿ ಇದ್ದೇನೆಯೇ ಎಂಬುದನ್ನು ಮೊದಲು ಮನನ ಮಾಡಿಕೊಳ್ಳಬೇಕು. ತಾನು ಸರಿ ಹೋದರೆ ದೇಶ ಸರಿ ಹೋಗುತ್ತದೆ, ವಿಶ್ವ ಸರಿ ಹೋಗುತ್ತದೆ ಎಂಬ ಸತ್ಯವನ್ನು ಅರಿಯಬೇಕು ಎಂದು ಸಲಹೆ ನೀಡಿದರು.



ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಡಾ.ಮೋಹನ್ ಭಾಗವತ್ ಅವರಿಗೆ ಮೈಸೂರು ಪೇಟ ತೊಡಿಸಿ, ಆತ್ಮೀಯವಾಗಿ ಸನ್ಮಾನಿಸಿದರು.

ಕನ್ನಡಿಯ ಧೂಳನ್ನು ಸ್ವಚ್ಛಗೊಳಿಸುವುದಕ್ಕಿಂತ ತನ್ನ ಮನಸ್ಸಿನಲ್ಲಿರುವ ಧೂಳನ್ನು ತೆಗೆಯಬೇಕು. ದ್ವೇಷ ಮುಕ್ತವಾದ ಮನಸ್ಸು ಹೊಂದಿದ್ದರೆ ಶಾಂತಿ, ಸಂತೋಷ ತನಗೆ ತಾನೆ ಬರುತ್ತದೆ. ಮೊದಲು ಅಂತ ರಂಗದ ಶುದ್ಧಿ ಹೊಂದಬೇಕು. ಮನಸ್ಸು ಪರಿಶುದ್ಧವಾದರೆ ಮನುಷ್ಯ ಕೂಡ ಪರಿಶುದ್ಧವಾಗುತ್ತಾನೆ ಎಂದು ಅಭಿಪ್ರಾಯಪಟ್ಟರು.

ಐಷರಾಮಿ ಬದುಕು ಇದ್ದರೆ ಮಾತ್ರ ಸಂತೋಷ ಸಿದ್ಧಿಸುವುದಿಲ್ಲ. ಕಷ್ಟದಲ್ಲಿ ಇರುವವರಿಗೆ ಉಪಕಾರ ಮಾಡುವುದು ಆತ್ಮ ಸಂತೋಷವನ್ನು ಉಂಟು ಮಾಡುತ್ತದೆ. ಪರೋಪಕಾರ ಮುಖ್ಯವಾಗಿದ್ದು, ಮತ್ತೊಬ್ಬರಿಗೆ ತೊಂದರೆ ಕೊಡುವುದು ಪಾಪದ ಕೆಲಸ ಎಂಬ ಸತ್ಯವನ್ನು ಅರಿಯಬೇಕು ಎಂದು ಕಿವಿಮಾತು ಹೇಳಿದರು. ಜೆಎಸ್‌ಎಸ್ ಮಹಾ ವಿದ್ಯಾಪೀಠದ

ಸುವರ್ಣ ಮಹೋತ್ಸವದ ಅಂಗವಾಗಿ 2007 ರಿಂದ ವಿಶೇಷ ಉಪನ್ಯಾಸಗಳನ್ನು ಆಯೋಜನೆ ಮಾಡಲಾಗುತ್ತಿದೆ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ತ್ರಿವಿಧ ದಾಸೋಹದ ಪರಿಕಲ್ಪನೆಯಲ್ಲಿ ಮಠ ಸಾಗುತ್ತಿದೆ. ಗ್ರಾಮೀಣ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಮೈಸೂರು ಜಯದೇವ ಹೃದ್ರೋಗ ಆಸ್ಪತ್ರೆ 600 ಹಾಸಿಗೆಗಳ ಸಾಮರ್ಥ್ಯಕ್ಕೆ ಏರಿಕೆ

● ಸಚಿವ ಸಂಪುಟ ಸಭೆ ಅನುಮೋದನೆ ● 180 ಕೋಟಿ ವೆಚ್ಚಕ್ಕೆ ಆಡಳಿತಾತ್ಮಕ ಒಪ್ಪಿಗೆ ● ಮೈಸೂರು ಮೃಗಾಲಯದಲ್ಲಿ ವನ್ಯ ಜೀವಿಗಳ ಅದ್ಭುತ ದರ್ಶನ



ಬೆಂಗಳೂರು, ಮೇ 7(ಕೆಎಂಶಿ)– ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯನ್ನು 400 ರಿಂದ 600 ಹಾಸಿಗೆಗಳ ಸಾಮರ್ಥ್ಯಕ್ಕೆ ಮೇಲ್ದರ್ಜೆಗೇರಿಸಲು ರಾಜ್ಯ ಸಚಿವ ಸಂಪುಟ ಇಂದಿಲ್ಲಿ ಅನುಮೋದನೆ ನೀಡಿದೆ.

ಮೇಲ್ದರ್ಜೆಗೇರಿಸುವ ಕಾಮಗಾರಿಯನ್ನು 180 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ಸಹ ನೀಡಲಾಗಿದೆ.

ಬೆಂಗಳೂರಿನ ಬನ್ನೇರುಘಟ್ಟ ಜೈವಿಕ ಉದ್ಯಾನವನ ಹಾಗೂ ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ವನ್ಯಜೀವಿ ಮತ್ತು

■ 10ನೇ ಪುಟಕ್ಕೆ

ರಾಜ್ಯಸಭೆಯ 4, ಪರಿಷತ್‌ನ 7 ಸ್ಥಾನಗಳಿಗೆ ಅಭ್ಯರ್ಥಿಗಳ ಆಯ್ಕೆ ಸಂಬಂಧ

ಸದ್ಯದಲ್ಲೇ ಸಿಎಂ, ಡಿಸಿಎಂ ದೆಹಲಿಗೆ

ಬೆಂಗಳೂರು, ಮೇ 7(ಕೆಎಂಶಿ)– ಬರುವ ಜೂನ್‌ನಲ್ಲಿ ತೆರವಾಗಲಿರುವ ರಾಜ್ಯಸಭೆಯ ನಾಲ್ಕು ಹಾಗೂ ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ಪಕ್ಷದ ಅಭ್ಯರ್ಥಿಗಳ ಆಯ್ಕೆಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿ ಪ್ರವಾಸ ಕೈಗೊಳ್ಳಲಿದ್ದಾರೆ.



ಕೇರಳಂ ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರ ರಚನೆ ಪೂರ್ಣಗೊಳ್ಳುತ್ತಿದ್ದಂತೆ ಉಭಯ ನಾಯಕರಿಗೆ ಪಕ್ಷದ ದೆಹಲಿ ವರಿಷ್ಠರು ಬುಲಾವ್ ನೀಡಲಿದ್ದಾರೆ.

ಬರುವ ಜೂನ್ 25ಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಬಿಜೆಪಿಯ ಈರಣ್ಣ ಕಡಾಡಿ ಹಾಗೂ ನಾರಾಯಣ ಕೊರಗಪ್ಪ ಅವರುಗಳ ರಾಜ್ಯಸಭಾ ಸದಸ್ಯತ್ವ ಅವಧಿ ಪೂರ್ಣಗೊಳ್ಳಲಿದೆ.

ಗೋವಿಂದರಾಜ್, ನಸೀರ್ ಅಹಮದ್, ಎಂ.ಟಿ.ಬಿ.ನಾಗರಾಜ್, ಪ್ರತಾಪ್‌ಸಿಂಹ ನಾಯಕ್, ತಿಪ್ಪಣ್ಣಪ್ಪ, ಸುನೀಲ್ ವಲ್ಯಾಪುರ್ ಹಾಗೂ ಬಿ.ಕೆ.ಹರಿಪ್ರಸಾದ್ ಅವರ ವಿಧಾನ ಪರಿಷತ್ ಸದಸ್ಯತ್ವ ಅವಧಿ ಜೂನ್ 30ಕ್ಕೆ ಪೂರ್ಣಗೊಳ್ಳಲಿದೆ. ಈ ಸ್ಥಾನಗಳಿಗೆ ಕೇಂದ್ರ ಚುನಾವಣಾ ಆಯೋಗ ಯಾವುದೇ ಕ್ಷಣದಲ್ಲಿ ವೇಳಾಪಟ್ಟಿ ಪ್ರಕಟಿಸಲಿದ್ದು, ಅದಕ್ಕೂ ಮುನ್ನವೇ ಅಭ್ಯರ್ಥಿಗಳ ಆಯ್ಕೆಗೆ ಮುಖ್ಯಮಂತ್ರಿ ಕಸರತ್ತು ನಡೆಸಿದ್ದಾರೆ.

ಈ ನೆಪದಲ್ಲಿ ದೆಹಲಿಗೆ ತೆರಳುವ ಉಭಯ ನಾಯಕರು ರಾಜ್ಯ ಕಾಂಗ್ರೆಸ್‌ನಲ್ಲಿನ ಅಧಿಕಾರ ಹಸ್ತಾಂತರ ಗೊಂದಲಕ್ಕೂ ತೆರೆ ಎಳೆಯುವಂತೆ ವರಿಷ್ಠರಿಗೆ ಮನವಿ ಮಾಡಿಕೊಳ್ಳಲಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮುಖ್ಯಮಂತ್ರಿ, ತಮಗೆ ಸಂಪುಟ

■ 10ನೇ ಪುಟಕ್ಕೆ

ಬಿಹಾರದಲ್ಲಿ ಹೊಸ ರಾಜಕೀಯ ಪರ್ವ

ನಿತೀಶ್ ಕುಮಾರ್ ಪುತ್ರ ಸೇರಿ 31 ಮಂದಿ ಸಚಿವರಾಗಿ ಪ್ರಮಾಣ ಸ್ವೀಕಾರ

ಪಾಟ್ನಾ, ಮೇ 7– ಬಿಹಾರ ರಾಜಕೀಯದಲ್ಲಿ ಹೊಸ ಪರ್ವ ಆರಂಭವಾಗಿದೆ. ಸಾಮ್ರಾಟ್ ಚೌಧರಿ ನೇತೃತ್ವದ ಬಿಜೆಪಿ–ಎನ್‌ಡಿಎ ಸರ್ಕಾರವು ನೂತನ ಸಂಪುಟ ವಿಸ್ತರಿಸಿದ್ದು, 31 ಎನ್‌ಡಿಎ ನಾಯಕರು ಸಚಿವರಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ.




ನಿಶಾಂತ್‌ಕುಮಾರ್

ಮಾಜಿ ಸಿಎಂ ನಿತೀಶ್ ಕುಮಾರ್ ಪುತ್ರ ನಿಶಾಂತ್ ಕುಮಾರ್, ಬಿಜೆಪಿ, ಜೆಡಿಯು, ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ಅವರ ಲೋಕ ಜನಶಕ್ತಿ ಪಕ್ಷ (ರಾಮ್ ವಿಲಾಸ್) ಮತ್ತು ಕೇಂದ್ರ ಸಚಿವ ಜಿತನ್ ರಾಮ್ ಮಾಂಝಿ ನೇತೃತ್ವದ ಹಿಂದೂಸ್ತಾನಿ ಅವಾಮ್ ಮೋರ್ಚಾ (ಜಾತ್ಯತೀತ)ದ 31 ನಾಯಕರೊಂದಿಗೆ ಇಂದು ಸಚಿವರಾಗಿ ಪದಗ್ರಹಣ ಮಾಡಿದ್ದಾರೆ. ರಾಜ್ಯಪಾಲ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಸೈಯದ್ ಅತಾ ಹಸ್ನೈನ್ ಅವರು ಪ್ರಮಾಣ ವಚನ ಬೋಧಿಸಿದ್ದಾರೆ.

■ 10ನೇ ಪುಟಕ್ಕೆ

ಕೇವಲ ಆರು ತಿಂಗಳು ಸಂಸಾರ ನಡೆಸಿದ್ದ ಕಾರಣಕ್ಕೆ ಪತ್ನಿಗೆ ಜೀವನಾಂಶ ನಿರಾಕರಿಸಲು ಸಾಧ್ಯವಿಲ್ಲ!

ಬೆಂಗಳೂರು, ಮೇ 7– ಬರೀ 7 ತಿಂಗಳ ಕಾಲ ಸಂಸಾರ ನಡೆಸಿದ್ದಾರೆ ಎಂಬ ಕಾರಣಕ್ಕೆ ಪತಿಯಿಂದ ಜೀವನಾಂಶ ಮತ್ತು ವ್ಯಾಜ್ಯ ವೆಚ್ಚ ಕೋರಿ ಪತ್ನಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಲಾಗದು ಎಂದು ಹೈಕೋರ್ಟ್ ಹೇಳಿದೆ.



ಹಿಂದೂ ವಿವಾಹ ಕಾಯ್ದೆಯ ಸೆಕ್ಷನ್ 24 ರ ಉದ್ದೇಶ ಮತ್ತು ವ್ಯಾಪ್ತಿಯನ್ನು ಕುಟುಂಬ ನ್ಯಾಯಾಲಯವು ಅನುಸರಿಸಿಲ್ಲ ಎಂದು ಹೇಳಿರುವ ಹೈಕೋರ್ಟ್ ಅರ್ಜಿಯನ್ನು ಹೊಸದಾಗಿ ಪರಿಗಣಿಸಿ ಆದೇಶಗಳನ್ನು ಹೊರಡಿಸುವಂತೆ

■ 10ನೇ ಪುಟಕ್ಕೆ

ಒಂದೇ ತಿಂಗಳಲ್ಲಿ 3688 ಕೋಟಿಯ ನಶೆ ಏರಿಸಿಕೊಂಡ ರಾಜ್ಯದ ಜನ!!!

13 ವರ್ಷಗಳ ದಾಖಲೆ ಛಿಂದಿ... ಛಿಂದಿ...

ಬೆಂಗಳೂರು, ಮೇ 7– ಕರ್ನಾಟಕದಲ್ಲಿ ಏಪ್ರಿಲ್ ತಿಂಗಳ ಮದ್ಯ ಮಾರಾಟದಲ್ಲಿ ರಾಜ್ಯ ಅಬಕಾರಿ ಇಲಾಖೆ ಹೊಸ ಇತಿಹಾಸ ಬರೆದಿದೆ. ಬರೋಬ್ಬರಿ ರಾಜ್ಯ ಸರ್ಕಾರಕ್ಕೆ ಮೂರು ಸಾವಿರ ಕೋಟಿ ಆದಾಯ ಬಂದಿದೆ. ಈ ಮೂಲಕ ಅಬಕಾರಿ ಇಲಾಖೆಯ ಕಳೆದ 13 ವರ್ಷಗಳ ಇತಿಹಾಸದಲ್ಲೇ ತಿಂಗಳೊಂದರಲ್ಲಿ ಇಷ್ಟೊಂದು ಭಾರೀ ಪ್ರಮಾಣದಲ್ಲಿ ಮದ್ಯ ಮಾರಾಟವಾಗಿರುವುದು ಇದೇ ಮೊದಲು. ವಿಸ್ಕಿ, ಬ್ರಾಂಡಿ, ರಮ್, ಜಿನ್ ಸೇರಿ ಏಪ್ರಿಲ್‌ನಲ್ಲಿ ದಾಖಲೆಯ 68.17 ಲಕ್ಷ ಬಾಕ್ಸ್ ಮಾರಾಟವಾಗಿದ್ದು, ಇದರಿಂದ ಸರ್ಕಾರದ ಬೊಕ್ಕಸಕ್ಕೆ ಬರೋಬ್ಬರಿ 3688 ಕೋಟಿ ರುಪಾಯಿ ಆದಾಯ ಹರಿದುಬಂದಿದೆ.



ಏಪ್ರಿಲ್‌ನಲ್ಲಿ ಎಷ್ಟು ಮದ್ಯ ಮಾರಾಟ: ವಿಸ್ಕಿ, ಬ್ರಾಂಡಿ, ರಮ್, ಜಿನ್ ಸೇರಿದಂತೆ 68.17 ಲಕ್ಷ ಬಾಕ್ಸ್ (ಒಂದು ಬಾಕ್ಸ್‌ಗೆ 8.64 ಲೀಟರ್) ದಾಖಲೆಯ ಐಎಂಎಲ್ ಮದ್ಯ, ಮತ್ತೊಂದೆಡೆ, 50.39 ಲಕ್ಷ ಬಾಕ್ಸ್ (ಒಂದು ಬಾಕ್ಸ್‌ಗೆ 7.80 ಲೀಟರ್) ಬಿಯರ್ ಮಾರಾಟವಾಗಿದೆ. ಇದ ರೊಂದಿಗೆ ಒಟ್ಟು 118.56 ಲಕ್ಷ ಬಾಕ್ಸ್ ಮದ್ಯ ಮಾರಾಟವಾಗಿದ್ದು 2013ರಿಂದ ಈಚೆಗೆ ಕಳೆದ 13 ವರ್ಷದಲ್ಲಿ ಯಾವ ತಿಂಗಳಿನಲ್ಲೂ ಈ ಪ್ರಮಾಣದಲ್ಲಿ ಮದ್ಯ ಮಾರಾಟವಾಗಿಲ್ಲ ಎಂಬುದು ವಿಶೇಷ.

2025 ಏಪ್ರಿಲ್‌ನಲ್ಲಿ 57.44 ಲಕ್ಷ ಬಾಕ್ಸ್ ಐಎಂಎಲ್ ಮದ್ಯ ಮಾರಾಟವಾಗಿದ್ದು, ಕಳೆದ ವರ್ಷದ ದಾಖಲೆಯಾಗಿತ್ತು. ಪ್ರಸಕ್ತ ಸಾಲಿನ ಏಪ್ರಿಲ್ ನಲ್ಲಿ 68.17 ಲಕ್ಷ ಬಾಕ್ಸ್ ಮಾರಾಟವಾಗಿದೆ. ಇನ್ನು, ಬಿಯರ್ ವಿಷಯಕ್ಕೆ ಬರುವುದಾದರೆ, 2025 ಏಪ್ರಿಲ್‌ನಲ್ಲಿ 41.60 ಲಕ್ಷ ಬಾಕ್ಸ್ ಮಾರಾಟವಾಗಿತ್ತು. ಪ್ರಸಕ್ತ ಏಪ್ರಿಲ್‌ನಲ್ಲಿ 50.39 ಲಕ್ಷ ಬಾಕ್ಸ್ ಮಾರಾಟವಾಗಿದ್ದು, ಈ ಸಾಲಿನ ಏಪ್ರಿಲ್‌ನಲ್ಲಿ ಶೇ.21.13 ಬೆಳವಣಿಗೆಯಾಗಿದೆ.

3688 ಕೋಟಿ ರೂ.ಆದಾಯ ಸಂಗ್ರಹ: 2023 ಜುಲೈನಲ್ಲಿ 66.22 ಲಕ್ಷ ಬಾಕ್ಸ್ ಐಎಂಎಲ್ ಮದ್ಯ ಮಾರಾಟವಾಗಿದ್ದೇ ಕಳೆದ ದಾಖಲೆಯಾಗಿತ್ತು. ಈ ದಾಖಲೆಯನ್ನು ಏಪ್ರಿಲ್‌ನ ಮದ್ಯ ಮಾರಾಟ ಹಿಂದಿಕ್ಕಿದೆ. 2025ರ ಏಪ್ರಿಲ್‌ನಲ್ಲಿ ಮದ್ಯ ಮಾರಾಟದಿಂದ ಒಟ್ಟಾರೆ 2904 ಕೋಟಿ ರೂಪಾಯಿ ರಾಜಸ್ವ ಸಂಗ್ರಹವಾಗಿತ್ತು. ಪ್ರಸಕ್ತ ಏಪ್ರಿಲ್‌ನಲ್ಲಿ 3688 ಕೋಟಿ ರೂಪಾಯಿ ರಾಜಸ್ವ ಸಂಗ್ರಹವಾಗಿದೆ.

■ 10ನೇ ಪುಟಕ್ಕೆ

ಪಕ್ಷಾಂತರ ಮಾಡಿದರೆ ಸಚಿವ ಸ್ಥಾನ, ಮತದಾನ ಹಕ್ಕೂ ನಿರಾಕರಣೆ!?

ಕಠಿಣ ನಿಯಮ ಜಾರಿಗೆ ಪಕ್ಷಾಂತರ ವಿರೋಧಿ ಸಮಿತಿ ಚಿಂತನೆ

ಬೆಂಗಳೂರು, ಮೇ 7– ಪಕ್ಷಗಳಿಂದ ಹೊರಹೋಗುವ ಅಥವಾ ಪಕ್ಷಾಂತರ ಮಾಡುವ ಶಾಸಕರ ವಿರುದ್ಧ ಶೀಘ್ರದಲ್ಲೇ ಇನ್ನಷ್ಟು ಕಠಿಣ ಕ್ರಮಗಳು ಜಾರಿಯಾಗುವ ಸಾಧ್ಯತೆ ಇದೆ. ಅವಿಶ್ವಾಸ ನಿರ್ಣಯದ ವೇಳೆ ಮತದಾನದ ಹಕ್ಕು ಕಳೆದುಕೊಳ್ಳುವುದು ಹಾಗೂ ಸಚಿವ ಸ್ಥಾನ ಸೇರಿದಂತೆ ಲಾಭದಾಯಕ ಸರ್ಕಾರಿ ಹುದ್ದೆಗಳನ್ನು ವಹಿಸುವುದರಿಂದ ಅನರ್ಹಗೊಳ್ಳುವಂತಹ ಕಠಿಣ ಕ್ರಮದ ಬಗ್ಗೆ ರಾಷ್ಟ್ರೀಯ ಮಟ್ಟದ ಸಮಿತಿ ಚರ್ಚೆ ನಡೆಸುತ್ತಿದೆ.



ಯು.ಟಿ.ಖಾದರ್

ಸಂವಿಧಾನದ 10ನೇ ಅನುಸೂಚನೆ (ಪಕ್ಷಾಂತರ ನಿಷೇಧ ಕಾನೂನು) ಕುರಿತ ಸುಧಾರಣೆಗಳನ್ನು ಪರಿಶೀಲಿಸುತ್ತಿರುವ ಸಮಿತಿ ಜೂನ್ ತಿಂಗಳಲ್ಲಿ ರಾಜ್ಯದಲ್ಲಿ ಅಂತಿಮ ಸಭೆ ನಡೆಸಿ ತನ್ನ ವರದಿಯನ್ನು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಸಲ್ಲಿಸಲಿದೆ ಎಂದು ರಾಜ್ಯ ವಿಧಾನಸಭಾ ಸ್ಪೀಕರ್ ಯು.ಟಿ.ಖಾದರ್ ತಿಳಿಸಿದ್ದಾರೆ.

ಈ ಸಮಿತಿಗೆ ರಾಹುಲ್ ನರ್ವೇಕರ್ ಅಧ್ಯಕ್ಷತೆ ವಹಿಸಿದ್ದು, ಪಕ್ಷಾಂತರ ನಿಷೇಧ ಕಾಯ್ದೆಯನ್ನು ಬಲಪಡಿಸಲು ಅಗತ್ಯ ಕ್ರಮಗಳನ್ನು ಶಿಫಾರಸು ಮಾಡಲು ಫೆಬ್ರವರಿಯಲ್ಲಿ ಸಮಿತಿ ರಚಿಸಲಾಗಿತ್ತು. ಯು ಟಿ ಖಾದರ್ ಅವರೊಂದಿಗೆ ಸುರಮ ಪಾದಿ ಹಾಗೂ ಶರಿಂಗೈನ್ ಲಾಂಗ್ ಕುಮೆರ್ ಸಮಿತಿಯ ಸದಸ್ಯರಾಗಿದ್ದಾರೆ.

ಈ ಹಿಂದೆ ಮುಂಬೈ ಮತ್ತು ಪುರಿಯಲ್ಲಿ ನಡೆದ ಸಭೆಗಳಲ್ಲಿ ಪ್ರಮುಖವಾಗಿ ಚರ್ಚಿಸಲಾದ ಪ್ರಸ್ತಾವನೆಗಳಲ್ಲಿ, ಪಕ್ಷಾಂತರ ಮಾಡಿದ ಶಾಸಕರಿಗೆ ಅವಿಶ್ವಾಸ ನಿರ್ಣಯದ ವೇಳೆ ಮತದಾನದ ಹಕ್ಕು ನಿರಾಕರಿಸುವುದು ಪ್ರಮುಖವಾಗಿದೆ. ರಾಜಕೀಯ ಪಕ್ಷಾಂತರಗಳ ಮೂಲಕ ಸರ್ಕಾರಗಳನ್ನು ಉರುಳಿಸುವ ಪ್ರಯತ್ನಗಳನ್ನು ತಡೆಯುವ ಉದ್ದೇಶ ಇದಾಗಿದೆ.

ಇದರ ಜೊತೆಗೆ, ಪಕ್ಷಾಂತರ ಮಾಡಿದವರು ಹೊಸ ಸರ್ಕಾರದಲ್ಲಿ ಸಚಿವರಾಗುವುದು, ಮಂಡಳಿ ಮತ್ತು ನಿಗಮಗಳ ಅಧ್ಯಕ್ಷರಾಗುವುದು ಅಥವಾ ಯಾವುದೇ ಲಾಭದಾಯಕ ಹುದ್ದೆ ವಹಿಸುವುದನ್ನು ನಿಷೇಧಿಸುವ ಪ್ರಸ್ತಾವನೆಯೂ ಪರಿಗಣನೆಯಲ್ಲಿದೆ.

ಇನ್ನೊಂದು ಮಹತ್ವದ ಸುಧಾರಣೆಯಾಗಿ, ಪಕ್ಷ ವಿಭಜನೆಯ ಸಂದರ್ಭದಲ್ಲಿ ನಿಜವಾದ ರಾಜಕೀಯ ಪಕ್ಷ ಯಾವುದು ಎಂಬ ವಿಚಾರವನ್ನು ತೀರ್ಮಾನಿಸಲು ಪ್ರತ್ಯೇಕ ನ್ಯಾಯಮಂಡಳಿ ರಚಿಸುವ ಕುರಿತು ಚರ್ಚೆ ನಡೆಯುತ್ತಿದೆ.

■ 10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಪೊಲೀಸ್ : ಏನಯ್ಯ, ರಾತ್ರಿ 12 ಗಂಟೆಯಾದರೂ ಓಡಾಡ್ತಾ ಇದ್ದೀಯಾ, ನಡಿ ಏರೋಪ್ಲೇನ್ ಹತ್ತಿಸ್ತೀನಿ.

ಗುಂಡ : ಅಯ್ಯೋ ಬೇಡ ಸಾರ್, ನಿಮಗೇಕೆ ಅಷ್ಟು ಶ್ರಮ, ಏರೋಪ್ಲೇನ್ ಬೇಡ, ಯಾವುದಾದರೂ ಆಟೋ ಹತ್ತಿಸಿ ಸಾಕು!

ಮೈಸೂರು ಮಿತ್ರ

ಶುಕ್ರವಾರ, ಮೇ 8, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಬದುಕು ಹೇಗಿರಬೇಕು ಎಂದರೆ, ಬೆಳಗ್ಗೆ ಎದ್ದಾಗ ದೃಢವಾಗಿರಬೇಕು. ರಾತ್ರಿ ಮಲಗುವಾಗ ಆತ್ಮತೃಪ್ತಿ ಇರಬೇಕು.

– ಶ್ರೀ ಶಿವಕುಮಾರ ಸ್ವಾಮೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಸೀರಿಗೇಡಿಗೆ ಸೀರೆ ಉಡಿಸಿದರೆ ಕೇರಿ ದಂಡಿ ಮ್ಯಾಗ ನಿಂತು ಕೇಕೆ ಹಾಕಿದಳು.

ನಿಮ್ಮ ಪತ್ರಗಳು

ಸ್ವಚ್ಛತೆ ಇಲ್ಲದೆ ಗಬ್ಬು ನಾರುತ್ತಿರುವ ಕಾವೇರಿ ನದಿಯ ತಟ



ಮಾನ್ಯರೆ,

ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನ ತಲಕಾಡು ಹೋಬಳಿಯ ಇತಿಹಾಸ ಪ್ರಸಿದ್ಧ ಸೋಮಶೈಲ ಖ್ಯಾತಿಯ ಮುಡುಕುತೊರೆಯ ಶ್ರೀ ಭ್ರಮರಾಂಬ ಮಲ್ಲಿಕಾರ್ಜುನ ಸ್ವಾಮಿಯ ಪರ್ವತ ಪರಿಷೆ (ಬಟ್ಟಲು ಪೂಜೆ)ಯು ಪ್ರಾರಂಭವಾಗಿದ್ದು, ಇದರ ಅಂಗವಾಗಿ ಕಾವೇರಿ ನದಿಯ ತಟದ ಸೋಪಾನಕಟ್ಟೆಯಲ್ಲಿ ಪ್ರತಿ ಸೋಮವಾರ ಹಾಗೂ ಶುಕ್ರವಾರ ಸಹಸ್ರಾರು ಭಕ್ತರು ರಾಜ್ಯದ ನಾನಾ ಮೂಲೆಗಳಿಂದ ಆಗಮಿಸಿ ಪೂಜೆ ಸಲ್ಲಿಸುತ್ತಾರೆ. ಈ ಸ್ಥಳವು ಸ್ವಚ್ಛತೆ ಇಲ್ಲದೆ ಗಬ್ಬು ನಾರುತ್ತಿದೆ. ರಾಶಿ ರಾಶಿ ಕಸವು ಕಣ್ಣಿಗೆ ರಾಚುತ್ತಿದೆ.

ಇಲ್ಲಿಗೆ ಪೂಜೆಗೆ ಬರುವವರು ಬೇಸರವನ್ನು ವ್ಯಕ್ತಪಡಿಸಿ ಕಸದ ರಾಶಿಯ ಮಧ್ಯದಲ್ಲಿಯೇ ಸ್ವಚ್ಛತೆಯನ್ನು ಮಾಡಿಕೊಂಡು ಪೂಜೆಯನ್ನು ಸಲ್ಲಿಸಿ ಆಡಳಿತ ಮಂಡಳಿಯ ವಿರುದ್ಧ ಇಡೀ ಶಾಪ ಹಾಕಿ ತೆರಳುತ್ತಿದ್ದಾರೆ. ಗಬ್ಬು ನಾರುತ್ತಿರುವ ವಾಸನೆಯು ಮೂಗಿಗೆ ಬಡಿಯುತ್ತಿದೆ. ಗಾಳಿಗೆ ಕಸದ ರಾಶಿಯು ರಸ್ತೆಯ ಮಧ್ಯಕ್ಕೂ ನದಿಯ ಮಧ್ಯಕ್ಕೂ ಚೆಲ್ಲಾಪಿಲ್ಲಿಯಾಗಿ ಬೀಳುತ್ತಿದೆ. ನದಿಗಳು ಮಾನವನ ಜೀವಾಳ ಎಂದು ಕರೆಯುತ್ತಾರೆ. ಬೇಡದ ವಸ್ತುಗಳನ್ನು ನದಿಗಳಿಗೆ ಹಾಕಿ ಮಲೀನಗೊಳಿಸುತ್ತಿದ್ದಾರೆ.

ಅಂಧಕಾರ ಮೌಲ್ಯತೆಯನ್ನು ತೊರೆದು ವೈಜ್ಞಾನಿಕತೆಗೆ ಹೆಚ್ಚು ಒತ್ತನ್ನು ಕೊಡಬೇಕು. ಇಲ್ಲಿ ಪೂಜೆ ಒಂದು ಕಡೆಯಾದರೆ ಸ್ವಚ್ಛತೆ ಇಲ್ಲದೆ ಗಬ್ಬುನಾರುತ್ತಿರುವ ಕಸದ ರಾಶಿಯು ರಾರಾಜಿಸುತ್ತಿದೆ. ಭಕ್ತರೂ ಕೂಡ ಸ್ವಚ್ಛತೆಗೆ ಹೆಚ್ಚಿನ ಗಮನ ಹರಿಸಬೇಕು. ಪೂಜಾ ಕೈಂಕರ್ಯಗಳು ನೆರವೇರಿಸಿ ಪೂಜೆಯ ನಂತರ ಪ್ಲಾಸ್ಟಿಕ್ ಹಾಗೂ ಇನ್ನಿತರ ಪೂಜಾ ಸಾಮಗ್ರಿಗಳನ್ನು ಅಲ್ಲೇ ಬಿಟ್ಟು ತೆರಳುತ್ತಿದ್ದಾರೆ. ಹಾಗೆಯೇ ಇಲ್ಲಿಗೆ ಬರುವ ಭಕ್ತರು ಕೂಡ ಈ ಸ್ಥಳದ ಸ್ವಚ್ಛತೆಯನ್ನು ಕಾಪಾಡಬೇಕು. ಮನುಷ್ಯನ ಮನಸ್ಸು ಶುದ್ಧಿಯ ಜೊತೆಗೆ ಪೂಜಾ ಮಾಡುವ ಸ್ಥಳವೂ ಕೂಡ ಸ್ವಚ್ಛತೆಯಿಂದ ಕೂಡಿರಬೇಕು. ದಯವಿಟ್ಟು ಇದಕ್ಕೆ ಸಂಬಂಧಿಸಿದವರು ಸೋಪಾನ ಕಟ್ಟೆ ಸ್ವಚ್ಛತೆಯ ಬಗ್ಗೆ ಗಮನಹರಿಸಬೇಕು. ಸ್ವಚ್ಛತೆಯ ಕುರಿತಾಗಿ ಅಲ್ಲಲ್ಲಿ ನಾಮ ಫಲಕಗಳನ್ನು ಹಾಕಿ ಬರುವ ಭಕ್ತರಿಗೆ ಅರಿವನ್ನು ಮೂಡಿಸಬೇಕು.

–ಪರಶಿವಮೂರ್ತಿ ಎನ್ ಪಿ, ನಂಜೀಪುರ, ಸರಗೂರು ತಾ.

ರಸ್ತೆ ಹೊಂಡ ಮುಚ್ಚಿಸಿ

ಮಾನ್ಯರೇ,

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಬರುವ ಕೆಲವು ಗುಂಡಿಗಳಲ್ಲಿ ಮುಖ್ಯವಾಗಿ ತೂಬಿನಕೆರೆ ಊರಿನ ಬಳಿ ಸರ್ವೀಸ್ ರಸ್ತೆಯಲ್ಲಿ ಸೇತುವೆ ಬಳಿ ರಸ್ತೆ ಡುಬ್ಬ ನಿರ್ಮಿಸಿದ್ದಾರೆ. ಇದು ಒಂದು ಕಡೆ ಉತ್ತಮ ವಿಚಾರವಾದರೂ ಅಲ್ಲಿ ಮಳೆ ಬಂದಾಗ ನೀರು ನಿಂತು ತುಂಬಾ ಗುಂಡಿಯಾಗಿ ವಾಹನಗಳೆಲ್ಲಾ ಕೆಲವು ಬಾರಿ ಪಾಂಡವಪುರ ರಸ್ತೆವರೆಗೂ ಜಾಮ್ ಆಗಿರುವ ಉದಾಹರಣೆಗಳಿವೆ. ಸುಮಾರು ತಿಂಗಳುಗಳಿಂದಲೂ ಇದೇ ಪರಿಸ್ಥಿತಿ ಇದೆ. ಇತ್ತ ಯಾರೂ ಸಹ ತಿರುಗಿ ನೋಡಿಲ್ಲ. ಆ ಜಾಗಕ್ಕೆ ಬಂದಾಗ ಎಲ್ಲರೂ ಹಿಡಿಶಾಪ ಹಾಕುತ್ತಾರೆ. ನಂತರ ಅಲ್ಲಿಗೆ ಮುಗಿಯಿತು. ದ್ವಿಚಕ್ರ ವಾಹನ ಚಾಲನೆ ಮಾಡುವವರಿಗಂತೂ ಇಲ್ಲಿ ಯಮಯಾತನೆ ಅನುಭವವಾಗುತ್ತದೆ. ಆದುದರಿಂದ ದಯವಿಟ್ಟು ಈ ಹೊಂಡವನ್ನು ಮುಚ್ಚಿಸಿ ಸರಾಗವಾಗಿ ವಾಹನ ಚಾಲನೆಗೆ ಅನುಕೂಲ ಮಾಡಿಕೊಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ.

–ಮೃತ್ಯುಂಜಯ, ಶಾಂತಿ ನಗರ, ಪಾಂಡವಪುರ.

ಸಾರ್ವಜನಿಕ ಸ್ಥಳಗಳಲ್ಲಿ ಮುಖ ಮರೆಮಾಚುವುದನ್ನು ನಿಯಂತ್ರಿಸುವ ಅಗತ್ಯವಿದೆ

ಮಾನ್ಯರೆ,

ಇಂದಿನ ದಿನಗಳಲ್ಲಿ ಅಪರಾಧಗಳ ಪತ್ತೆ ಮತ್ತು ತಡೆಗಟ್ಟುವಿಕೆಗಾಗಿ ಸರ್ಕಾರ ಹಾಗೂ ಸಾರ್ವಜನಿಕರು ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ಸಿಸಿ ಕ್ಯಾಮರಾಗಳನ್ನು ಅಳವಡಿಸುತ್ತಿದ್ದಾರೆ. ಆದರೆ, ಸಾರ್ವಜನಿಕ ಸ್ಥಳಗಳಲ್ಲಿ ಸಂಚರಿಸುವಾಗ ಬುರ್ಕಾ, ಮಾಸ್ಕ್, ಹೆಲ್ಮೆಟ್ ಅಥವಾ ಮುಖವನ್ನು ಪೂರ್ತಿಯಾಗಿ ಮುಚ್ಚುವ ಸ್ಕಾರ್ಫ್‌ಗಳನ್ನು ಧರಿಸುವ ಪದ್ಧತಿ ಹೆಚ್ಚಾಗುತ್ತಿದೆ. ಇದು ಸುರಕ್ಷತಾ ತಂತ್ರಜ್ಞಾನದ ಮೂಲ ಉದ್ದೇಶವನ್ನೇ ಬುಡಮೇಲು ಮಾಡುತ್ತಿದೆ.

ವ್ಯಕ್ತಿಯ ಧಾರ್ಮಿಕ ನಂಬಿಕೆಗಳು ಮತ್ತು ವೈಯಕ್ತಿಕ ಆಚರಣೆಗಳು ಖಾಸಗಿ ಅಥವಾ ಮನೆಯ ಆವರಣಕ್ಕೆ ಸೀಮಿತವಾಗಿರಲಿ. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ ಪ್ರತಿಯೊಬ್ಬ ನಾಗರಿಕನ ಮುಖವು ಸ್ಪಷ್ಟವಾಗಿ ಗುರುತಿಸುವಂತಿರಬೇಕು. ಯಾವುದೇ ಅಹಿತಕರ ಘಟನೆ ಅಥವಾ ಅಪರಾಧ ನಡೆದಾಗ, ದುಷ್ಕರ್ಮಿಗಳು ಇಂತಹ ಮುಖವಾಡಗಳ ಮರೆಯಲ್ಲಿ ಸುಲಭವಾಗಿ ತಪ್ಪಿಸಿಕೊಳ್ಳುತ್ತಿರುವುದು ಕಾನೂನು ಮತ್ತು ಸುವ್ಯವಸ್ಥೆಗೆ ದೊಡ್ಡ ಸವಾಲಾಗಿದೆ.

ಗುರುತು ಸಿಗದಿದ್ದ ಮೇಲೆ ಕೋಟಿ ಬೆಲೆಯ ಕ್ಯಾಮರಾಗಳು ಕೇವಲ ಪ್ರದರ್ಶನದ ವಸ್ತುಗಳಾಗುತ್ತವೆ. ಕೇವಲ ತಾಂತ್ರಿಕ ಪ್ರಗತಿಯಿಂದ ಸುರಕ್ಷತೆ ಸಾಧ್ಯವಿಲ್ಲ. ಅದಕ್ಕೆ ಪೂರಕವಾದ ಸಾಮಾಜಿಕ ಶಿಸ್ತು ಮತ್ತು ಕಟ್ಟುನಿಟ್ಟಾದ ನಿಯಮಗಳು ಅಗತ್ಯ. ಸಾರ್ವಜನಿಕ ಸ್ಥಳಗಳಲ್ಲಿ ಮುಖ ಮರೆಮಾಚುವುದನ್ನು ನಿಯಂತ್ರಿಸುವ ಬಗ್ಗೆ ಸರ್ಕಾರ ಗಂಭೀರವಾದ ನೀತಿಯನ್ನು ರೂಪಿಸಬೇಕಿದೆ. ಸಮಾಜದ ಪ್ರತಿಯೊಬ್ಬ ನಾಗರಿಕನೂ ಈ ನಿಟ್ಟಿನಲ್ಲಿ ಜವಾಬ್ದಾರಿಯಿಂದ ವರ್ತಿಸಿದರೆ ಮಾತ್ರ ಭಯಮುಕ್ತ ಸಮಾಜ ನಿರ್ಮಾಣ ಮಾಡಲು ಸಾಧ್ಯ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ನಮ್ಮ ಭಾವನೆಗಳೇ ನಮಗೆ ಸಮಸ್ಯೆಯೇ...?



ಬಹಳಷ್ಟು ಜನರಿಗೆ ಭಾವನೆಗಳು ಒಳ್ಳೆಯದನ್ನು ಮಾಡುವುದಕ್ಕಿಂತ ಹೆಚ್ಚಾಗಿ ತೊಂದರೆಯನ್ನು ನೀಡುವುದೇ ಹೆಚ್ಚು ಎನ್ನಿಸುತ್ತದೆ. ಅವುಗಳಿಲ್ಲದಿದ್ದರೆ ಚೆನ್ನಾಗಿರುತ್ತಿತ್ತೇ ಎಂಬ ಭಾವನೆ ಬರಲಿಕ್ಕೂ ಸಾಧ್ಯ.

ಆದರೆ ಮನುಷ್ಯರಲ್ಲಿ ಯಾವುದೇ ಭಾವನೆಗಳು ಇರದೇ ಹೋದರೆ, ನೀವು ಅವರನ್ನು ಮನುಷ್ಯ ಎಂದು ಕರೆಯಲು ಸಾಧ್ಯವಿಲ್ಲ. ಭಾವನೆಗಳು ಮನುಷ್ಯ ಜೀವನದ ಒಂದು ಸುಂದರವಾದ ಅಂಶ, ಅವುಗಳಿಲ್ಲದೆ ವ್ಯಕ್ತಿಗಳು ಅಸಹ್ಯವೆನಿಸುತ್ತಾರೆ. ಆದರೆ ಎಲ್ಲದರಂತೆ, ನಿಮ್ಮ ಭಾವನೆಗಳು ನಿಯಂತ್ರಣ ತಪ್ಪಿದರೆ, ಅದು ಹುಚ್ಚಿಗೆ ತಿರುಗುತ್ತದೆ. ನಿಮ್ಮ ಆಲೋಚನೆಗಳು ಅನಿಯಂತ್ರಿತವಾದರೆ, ಅದು ಹುಚ್ಚುತನವಾಗುತ್ತದೆ. **ನಿಮ್ಮ ಭಾವನೆಗಳು ಅನಿಯಂತ್ರಿತವಾದರೆ, ಅದೂ ಕೂಡ ಹುಚ್ಚುತನವಾಗುತ್ತದೆ.**

ಭಾವನೆಗಳು ಸಮಸ್ಯೆಯಲ್ಲ

ಜನರು ಭಾವನೆಗಳನ್ನು ಸಮಸ್ಯೆಯೆಂದು ನೋಡುತ್ತಾರೆ, ಏಕೆಂದರೆ ಅವರು ನೋವಿನಿಂದ ತುಂಬಿದ ಭಾವನೆಗಳನ್ನು ಹೊಂದಿರುತ್ತಾರೆ. ಅವರಲ್ಲಿ ಮಧುರವಾದ ಭಾವನೆಗಳು ಇದ್ದಿದ್ದರೆ, ಅವರದನ್ನು ಸಮಸ್ಯೆ ಎಂದು ಕರೆಯುತ್ತಿದ್ದರೆ? ನಿಮ್ಮೊಳಗೆ ನೀವು ಸಂತೋಷ, ಪ್ರೀತಿ ಮತ್ತು ಸಹಾನುಭೂತಿಯಿಂದ ತುಂಬಿದ್ದಿದ್ದರೆ, ನಿಮ್ಮ ಭಾವನೆಗಳು ಆ ರೀತಿಯಲ್ಲಿ ರೂಪುಗೊಂಡು ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತಿದ್ದುದೇ ಆದರೆ, ಅವುಗಳನ್ನು ನೀವು ತೊಂದರೆ ಎಂದು ಭಾವಿಸುತ್ತಿದ್ದಿರಾ? ಇಲ್ಲ.

ನಿಮ್ಮ ದೇಹ ಅತ್ಯುತ್ತಮವಾಗಿ ಮತ್ತು ಸುಂದರವಾಗಿ ಕಾರ್ಯನಿರ್ವಹಿಸುತ್ತಿದ್ದರೆ, ನೀವದನ್ನು ಒಂದು ಸಮಸ್ಯೆ ಎಂದು ಕರೆಯುತ್ತೀರಾ? ಇಲ್ಲ. ಅದು ನೋವು ಅಥವಾ ರೋಗಗ್ರಸ್ತವಾಗಿದ್ದರೆ, ಕೂರುವುದು, ನಿಲ್ಲುವುದು ಅಥವಾ ಬೆಳಿಗ್ಗೆ ಎದ್ದು ಬಗ್ಗಿ ಮಾಡುವುದಕ್ಕೂ ತುಂಬಾ ನೋವುಂಟು ಮಾಡಿದರೆ–ಆಗ ನಿಮ್ಮ ದೇಹ ಒಂದು ಸಮಸ್ಯೆ ಎಂದು ನೀವು ಯೋಚಿಸಬಹುದು. ಅಂತೆಯೇ, ನೀವೀಗ ನಿಮಗೆ ಯಾವುದೇ ಭಾವನೆಗಳು ಬೇಡವೆಂದು ಹೇಳುತ್ತಿರುವುದು ಏಕೆಂದರೆ ನೀವು ಅವುಗಳೊಂದಿಗೆ ಅವ್ಯವಸ್ಥೆಯನ್ನು ಮಾಡಿಕೊಂಡಿದ್ದೀರಿ. ನಿಮ್ಮ ಜೀವನವನ್ನು ಒಂದು ಹೂವಿನಂತೆ ಮಾಡುವಂತಹ ಸುಂದರವಾದ ಭಾವನೆಗಳನ್ನು ನೀವು ಹೊಂದಿದ್ದೇ ಆಗಿದ್ದರೆ, ಭಾವನೆಗಳು ಇರಬಾರದಿತ್ತು ಎಂಬುದಾಗಿ ನೀವು ಯೋಚಿಸುತ್ತಿರಲಿಲ್ಲ.

ನಾನು ನಿಮಗೆ ನಿಮ್ಮ ಭಾವನೆಗಳನ್ನು ಬಿಟ್ಟುಬಿಡಲು ಅಥವಾ ಅವುಗಳನ್ನು ಮೀರಿ ಹೋಗಲು ಹೇಳುತ್ತಿಲ್ಲ. ನಾನು ಹೇಳುತ್ತಿರುವುದೇನೆಂದರೆ ನಿಮ್ಮ ದೇಹ, ನಿಮ್ಮ ಮನಸ್ಸು, ನಿಮ್ಮ ಭಾವನೆ ಅಥವಾ ನಿಮ್ಮ ಪ್ರಾಣಶಕ್ತಿಗಳು–ಇದೀಗ ನಿಮ್ಮ ಅನುಭವದಲ್ಲಿರಬಹುದಾದ ಈ ನಾಲ್ಕು ಆಯಾಮಗಳು–ಅವುಗಳನ್ನು ಅತ್ಯಂತ ಆಹ್ಲಾದಕರ ರೀತಿಯಲ್ಲಿಟ್ಟುಕೊಳ್ಳುವುದೇ ಮೊದಲ ಮತ್ತು ಅಗ್ರಗಣ್ಯ ವಿಷಯ. ಅವುಗಳು ತುಂಬಾ ಆಹ್ಲಾದಕರವಾಗಿದ್ದರೆ, ಅವ್ಯಾವುವೂ ಇನ್ನು ಮುಂದೆ ಸಮಸ್ಯೆಯಾಗಿ ಉಳಿಯುವುದಿಲ್ಲ. ಭಾವನೆಗಳು ಸಮಸ್ಯೆಯಾಗಿಲ್ಲದಿದ್ದಾಗ, ಜನರು ಬೇರೆ ಯಾವುದಕ್ಕೂ ಹಂಬಲಿಸದಿದ್ದಾಗ ಮತ್ತು ಅವರು ತುಂಬಾ ಸಂತೋಷವಾಗಿದ್ದಾಗ ಮಾತ್ರ? ಜೀವಿತ ನಡೆಸುವ ಪ್ರಕ್ರಿಯೆಯಿಂದ ಮುಂದಕ್ಕೆ ಹೋಗುವ ಹಾತೊರೆತ ಬರುತ್ತದೆ.

> “ನೀವು ನಿಮ್ಮ ಮಿತಿಗಳನ್ನು ಮೀರಲು ನಿಮ್ಮ ಭಾವನೆಗಳನ್ನು ತ್ಯಜಿಸುವ ಅಥವಾ ತಿರಸ್ಕರಿಸುವ ಹಾಗಿಲ್ಲ. ನಿಮಗೆ ಅವುಗಳನ್ನು ತ್ಯಜಿಸಲು ಸಾಧ್ಯವಿಲ್ಲ. ನೀವು ನಿಮ್ಮ ಭಾವನೆಗಳನ್ನು ಇಲ್ಲವಾಗಿಸಲು ಪ್ರಯತ್ನಿಸಿದ್ದೇ ಆದರೆ, ನಿಮ್ಮಲ್ಲಿ ಹತ್ತಿಕ್ಕಲ್ಪಟ್ಟ, ಹುದುಗಿದ ಭಾವನೆಗಳು ಮನೆಮಾಡುತ್ತವೆ ಮತ್ತು ನೀವು ನೀರಸವಾಗಿಬಿಡುತ್ತೀರಿ. ನಿಮ್ಮ ಭಾವನೆಗಳನ್ನು ನೀವು ತುಂಬಾ ಆಳವಾದ ರೀತಿಯಲ್ಲಿ ಸ್ವೀಕರಿಸಬೇಕು, ಹಾಗಾದಾಗ ಅವು ನಿಮ್ಮ ಸ್ನೇಹಿತರಾಗುತ್ತವೆ. ಮತ್ತು ಒಬ್ಬ ಸ್ನೇಹಿತ ಎಂದರೆ ಅವನು ನಿಮಗೆ ಹಿತವನ್ನು ತರುವವನಾಗಿರುತ್ತಾನೆ.

ಇಲ್ಲೂ ಇಲ್ಲ ಅಲ್ಲೂ ಇಲ್ಲ

ಹಾಗಾಗದಿದ್ದರೆ, ನೀವು ಏನೇ ಮಾಡಲು ಪ್ರಯತ್ನಿಸಿದರೂ ಅದು ಬದುಕುಳಿಯುವ ಪ್ರಕ್ರಿಯೆಯಷ್ಟೇ. ನೀವು ದೇವರಿಗೆ ಮೊರೆ ಇಡುತ್ತಿದ್ದರೂ, ಅದು ನಿಮ್ಮ ಉಳಿವಿಗಾಗಿಯಾದ ಕರೆ ಮಾತ್ರವೇ ಆಗಿರುತ್ತದೆ, ಅಲ್ಲವೇ? ನೀವು ಇಲ್ಲಿ ಬದುಕಲು ವಿಫಲವಾದಾಗ, ನೀವು ಸ್ವರ್ಗದಲ್ಲಿ ಬದುಕುವ ಬಗ್ಗೆ ಯೋಚಿಸಲು ಶುರು ಮಾಡುತ್ತೀರಿ. ನಿಮಗೆ ಇಲ್ಲಿ ಚೆನ್ನಾಗಿ ಬದುಕಲು ಸಾಧ್ಯವಾಗದಿದ್ದರೆ, ನೀವು ಅಲ್ಲಿ ಚೆನ್ನಾಗಿ ಬದುಕುತ್ತೀರಿ ಎಂಬುದಕ್ಕೆ ಏನು ಭರವಸೆ? ಇದನ್ನೇ ಬಸವಣ್ಣನವರು ‘ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ’ ಎಂದು ಹೇಳಿರುವುದು. ಆದ್ದರಿಂದ, ಇದು ಭಾವನೆಯನ್ನು ಮೀರಿ ಹೋಗುವ ಬಗ್ಗೆಯಲ್ಲ. ನೀವು ಮೀರಿ ಹೋಗಬೇಕು, ಆದರೆ ‘ಮೀರಿ’ ಹೋಗುವುದು ಎಂದರೆ ಭಾವನೆ ಅಥವಾ ಮನಸ್ಸು ಅಥವಾ ಇನ್ನೇನನ್ನೋ ಮೀರಿ ಹೋಗಬೇಕು ಎಂದರ್ಥವಲ್ಲ. ಇದೀಗ ನಿಮ್ಮನ್ನು ಹಿಡಿದಿಟ್ಟುಕೊಂಡಿರುವಂತಹ ಮಿತಿಗಳನ್ನು ಮೀರಿ ನೀವು ಹೋಗಬೇಕು. ಇದಕ್ಕಾಗಿ ನಿಮ್ಮ ಭಾವನೆ ಮತ್ತು ಆಲೋಚನೆಗಳು ನಿಮಗೊಂದು ಮಾರ್ಗವಾಗಬಹುದು ಮತ್ತು ನಿಮ್ಮ ದಾರಿಯನ್ನು ಸುಗಮಗೊಳಿಸಲು ಅವುಗಳು ಒಂದು ಸಾಧನವಾಗಿ ಪರಿಣಮಿಸಬಹುದು.

ನೀವು ನಿಮ್ಮ ಮಿತಿಗಳನ್ನು ಮೀರಿ ಹೋಗಲು ನಿಮ್ಮ ಮನಸ್ಸನ್ನು ಬಳಸಿದರೆ, ನಾವು ಅದನ್ನು ಜ್ಞಾನಯೋಗವೆಂದು ಕರೆಯುತ್ತೇವೆ. ಅದೇ ನೀವು ನಿಮ್ಮ ಮಿತಿಗಳನ್ನು ಮೀರಲು ನಿಮ್ಮ ಭಾವನೆಗಳನ್ನು ಬಳಸಿದರೆ, ನಾವದನ್ನು ಭಕ್ತಿಯೋಗವೆಂದು ಕರೆಯುತ್ತೇವೆ. ನೀವು ನಿಮ್ಮ ದೇಹವನ್ನು ಬಳಸಿ ನಿಮ್ಮ ಮಿತಿಗಳನ್ನು ಮೀರುವುದಾದರೆ, ನಾವದನ್ನು ಕರ್ಮಯೋಗವೆಂದು ಕರೆಯುತ್ತೇವೆ. ನಿಮ್ಮ ಪ್ರಾಣಶಕ್ತಿಯನ್ನು ಬಳಸುವುದಾದರೆ, ನಾವದನ್ನು ಕ್ರಿಯಾಯೋಗವೆಂದು ಕರೆಯುತ್ತೇವೆ. ಪ್ರತಿಯೊಂದೂ ಸಹ ಒಂದು ಬಾಗಿಲೇ ಆಗಿದೆ. ಬಾಗಿಲು ನಿಮ್ಮನ್ನು ನಿರ್ಬಂಧಿಸಬಹುದು ಅಥವಾ ಅದು ನಿಮ್ಮನ್ನು ಅದರಿಂದಾಚೆಗೆ ಹೋಗಲು ಅನುವುಮಾಡಿಕೊಡಬಹುದು. ಆದ್ದರಿಂದ, ನೀವು ನಿಮ್ಮ ಮಿತಿಗಳನ್ನು ಮೀರಲು ನಿಮ್ಮ ಭಾವನೆಗಳನ್ನು ತ್ಯಜಿಸುವ ಅಥವಾ ತಿರಸ್ಕರಿಸುವ ಹಾಗಿಲ್ಲ. ನಿಮಗೆ ಅವುಗಳನ್ನು ತ್ಯಜಿಸಲು ಸಾಧ್ಯವಿಲ್ಲ. ನೀವು ನಿಮ್ಮ ಭಾವನೆಗಳನ್ನು ಇಲ್ಲವಾಗಿಸಲು ಪ್ರಯತ್ನಿಸಿದ್ದೇ ಆದರೆ, ನಿಮ್ಮಲ್ಲಿ ಹತ್ತಿಕ್ಕಲ್ಪಟ್ಟ, ಹುದುಗಿದ ಭಾವನೆಗಳು ಮನೆ ಮಾಡುತ್ತವೆ ಮತ್ತು ನೀವು ನೀರಸವಾಗಿಬಿಡುತ್ತೀರಿ. ನಿಮ್ಮ ಭಾವನೆಗಳನ್ನು ನೀವು ತುಂಬಾ ಆಳವಾದ ರೀತಿಯಲ್ಲಿ ಸ್ವೀಕರಿಸಬೇಕು, ಹಾಗಾದಾಗ ಅವು ನಿಮ್ಮ ಸ್ನೇಹಿತರಾಗುತ್ತವೆ. ಮತ್ತು ಒಬ್ಬ ಸ್ನೇಹಿತ ಎಂದರೆ ಅವನು ನಿಮಗೆ ಹಿತವನ್ನು ತರುವವನಾಗಿರುತ್ತಾನೆ.

ಮೂವರು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಮೈಸೂರಿನ ಆಜಾದ್ ನ್ಯಾಷನಲ್ ನರ್ಸರಿ, ಪ್ರಾಥಮಿಕ ಶಾಲೆ ಮತ್ತು ಮೌಲಾನಾ ಆಜಾದ್ ಪ್ರೌಢಶಾಲೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಮೈಸೂರು, ಮೇ 7(ಎಂಟಿವೈ)–ಮೈಸೂರಿನ ಡಾ.ರಾಜ್‌ಕುಮಾರ್ ರಸ್ತೆಯ ಶಿಕ್ಷಕರ ಬಡಾವಣೆಯಲ್ಲಿರುವ ಆಜಾದ್ ನ್ಯಾಷನಲ್ ನರ್ಸರಿ, ಪ್ರಾಥಮಿಕ ಶಾಲೆ ಮತ್ತು ಮೌಲಾನಾ ಆಜಾದ್ ಪ್ರೌಢ ಶಾಲೆ (ಆಂಗ್ಲ ಮಾಧ್ಯಮ)ಯಲ್ಲಿ ಹೆಚ್ಚು ಅಂಕ ಪಡೆದ ಮೂವರು ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿರುವ ಶಾಲೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳಾದ ಸಾಯಿ ಭರತ್ (572), ನಿತಿನ್ ನಾರಾಯಣ್ (530) ಹಾಗೂ ಸಿಂಧುಶ್ರೀ (513) ಅವರನ್ನು ಹಿರಿಯ ಪತ್ರಕರ್ತ ಟಿ.ಆರ್.ಸತೀಶ್‌ಕುಮಾರ್ ಹಾಗೂ ಸಂಗೀತ ವಿವಿ ಕಾತ್ಯಾಯಿನಿ ಯಶೋಮತಿ ಸನ್ಮಾನಿಸಿದರು.

ಆಜಾದ್ ನ್ಯಾಷನಲ್ ನರ್ಸರಿ, ಪ್ರಾಥಮಿಕ ಶಾಲೆ ಮತ್ತು ಮೌಲಾನಾ ಆಜಾದ್ ಪ್ರೌಢಶಾಲೆ ಮುಖ್ಯಸ್ಥ ಡಾ.ಜಾಕೀರ್ ಹುಸೇನ್ ಮಾತನಾಡಿ, ಶಿಕ್ಷಕರ ಬಡಾವಣೆಯಲ್ಲಿರುವ ನಮ್ಮ ಶಾಲೆಗೆ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.99ರಷ್ಟು ಫಲಿತಾಂಶ ಬಂದಿದೆ. ಶಾಲೆಯ ಮೂವರು ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಪ್ರೌಢ ಶಾಲೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಸಮಗ್ರ ಶಿಕ್ಷಣ, ಸೃಜನಶೀಲತೆ, ಬಲವಾದ ಶೈಕ್ಷಣಿಕ ಅಡಿಪಾಯ, ಶಿಸ್ತು ಮತ್ತು ಭವಿಷ್ಯದ ಸವಾಲುಗಳಿಗೆ ವಿದ್ಯಾರ್ಥಿಗಳನ್ನು ಸಬಲರನ್ನಾಗಿ ಮಾಡುವ ಉದ್ದೇಶ ಹೊಂದಿದೆ ಎಂದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿ ಫಾಹೀನ್ ಹುಸೇನ್, ಮುಖ್ಯೋಪಾಧ್ಯಾಯರಾದ ಸಾದಿಕ್ ಉರ್ ರೆಹನಾ, ಆಡಳಿತಾಧಿಕಾರಿ ಮನ್ಸೂರ್ ಅಹಮದ್‌ಖಾನ್, ಶಿಕ್ಷಕ ವೃಂದದ ಭವ್ಯ, ಶಿವಮ್ಮ, ತನುಶ್ರೀ, ಮೈಕ್ ಪ್ರಕಾಶ್ ಇದ್ದರು.

ಮೇ 10ಕ್ಕೆ ಅಪಾರ್ಟ್‌ಮೆಂಟ್, ಲೇಔಟ್‌ಗಳಲ್ಲಿ ಕುಡಿಯುವ ನೀರಿನ ಕೊರತೆ ಕುರಿತು ಮೈಗ್ರಾಪ ಸಾರ್ವಜನಿಕ ಸಭೆ

ಮೈಸೂರು: ಮೈಸೂರಿನ ಹಲವು ಅಪಾರ್ಟ್‌ಮೆಂಟ್ ಮತ್ತು ಲೇಔಟ್‌ಗಳಿಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸದಿರುವ ಬಗ್ಗೆ ನಾಗರಿಕರಿಂದ ಮೈಸೂರು ಗ್ರಾಹಕರ



ಪರಿಷತ್‌ಗೆ ಸಾಕಷ್ಟು ದೂರುಗಳು ಸಲ್ಲಿಕೆಯಾಗಿವೆ. ನಿವಾಸಿಗಳು ನಿಯಮಿತವಾಗಿ ಆಸ್ತಿ ತೆರಿಗೆ ಮತ್ತು ಇತರೆ ತೆರಿಗೆಗಳನ್ನು ಪಾವತಿಸುತ್ತಿದ್ದರೂ, ನೀರಿನ ಸಂಪರ್ಕ ನೀಡಿಲ್ಲ. ಈ ಕುಂದುಕೊರತೆಗಳನ್ನು ಪರಿಹರಿಸಲು, ನಾಗರಿಕರು ಮತ್ತು ವಾಣಿ ವಿಲಾಸ ವಾಟರ್ ವರ್ಕ್ಸ್ ಅಧಿಕಾರಿಗಳು ಮುಂದಿನ ಕ್ರಮದ ಬಗ್ಗೆ ಚರ್ಚಿಸಲು ಮೈಸೂರು ಗ್ರಾಹಕರ ಪರಿಷತ್ ಮೇ 10ರಂದು ಸಂಜೆ 4ಕ್ಕೆ ಎಂಜಿಪಿ ಕಚೇರಿ, 6/1, ವಿವೇಕಾನಂದ ರಸ್ತೆ, ಯಾದವಗಿರಿಯಲ್ಲಿ ಸಾರ್ವಜನಿಕ ಸಭೆ ಆಯೋಜಿಸಿದೆ.

ಕುಡಿಯುವ ನೀರಿನ ಸಂಪರ್ಕವಿಲ್ಲದ ಅಪಾರ್ಟ್‌ಮೆಂಟ್ ಮತ್ತು ಲೇಔಟ್‌ಗಳ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಅಧ್ಯಕ್ಷರು/ಕಾರ್ಯದರ್ಶಿಗಳು, ಸಾರ್ವಜನಿಕರು ತಾವು ಎದುರಿಸುತ್ತಿರುವ ಸಮಸ್ಯೆಗಳ ವಿವರಗಳು, ಈಗಾಗಲೇ ಪಾವತಿಸಿದ ಶುಲ್ಕದ ವಿವರಗಳು ಮತ್ತು ಸಂಬಂಧಿತ ದಾಖಲೆಗಳೊಂದಿಗೆ ಬರಲು ಕೋರಲಾಗಿದೆ.

56,432 ಹುದ್ದೆಗಳ ಶೀಘ್ರವೇ ಭರ್ತಿ ಮಾಡಿ

ಎಡಿಸಿ ಮೂಲಕ ಸಿಎಂಗೆ ಮನವಿ ಸಲ್ಲಿಸಿದ ಉದ್ಯೋಗ ಆಕಾಂಕ್ಷಿಗಳ ಹೋರಾಟ ಸಮಿತಿ

ಮೈಸೂರು, ಮೇ 7(ಜಿಎ)–ರಾಜ್ಯ ಸರ್ಕಾರವು ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ 56,432 ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಘೋಷಿಸಿದ್ದು, ಶೀಘ್ರವಾಗಿ ಭರ್ತಿ ಮಾಡುವಂತೆ ಉದ್ಯೋಗ ಆಕಾಂಕ್ಷಿಗಳ ಹೋರಾಟದ ಸಮಿತಿ ಮೈಸೂರು ಅಪರ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದೆ.

ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯಿಂದ ರಾಜ್ಯದಾದ್ಯಂತ ನಿರಂತರವಾಗಿ ರಾಜ್ಯ ಹಾಗೂ ಕೇಂದ್ರದಲ್ಲಿ ಎಲ್ಲಾ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಖಾಯಂ ಹಾಗೂ ಪಾರದರ್ಶಕ ನೇಮಕಾತಿಗಾಗಿ ಆಗ್ರಹಿಸಿ ಹೋರಾಟಗಳನ್ನು ಬೆಳೆಸುತ್ತಾ ಬಂದಿದೆ. ಎಲ್ಲಾ ಹೋರಾಟಗಳ ಪ್ರತಿಫಲವಾಗಿ ರಾಜ್ಯ ಸರ್ಕಾರವು ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ 56,432 ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಘೋಷಿಸಿತ್ತು. ನಂತರವೂ ವಿವಿಧ ಇಲಾಖೆಗಳ ಸಚಿವರು ಅತೀ ಶೀಘ್ರದಲ್ಲಿ ನೇಮಕಾತಿ ಮಾಡುತ್ತೇವೆ ಎಂದು ದಿನಕ್ಕೊಂದು ಹೇಳಿಕೆಗಳನ್ನು ನೀಡುತ್ತಿರುವುದು ಉದ್ಯೋಗಾಕಾಂಕ್ಷಿಗಳಿಗೆ ಭ್ರಮನಿರಸನ ಉಂಟುಮಾಡಿದೆ ಎಂದು ಸಮಿತಿ ಸದಸ್ಯರು ತಿಳಿಸಿದರು.



ಮೈಸೂರಿನ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯಿಂದ ಅಪರ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಘೋಷಣೆ ಮಾಡಿ ಐದು ತಿಂಗಳು ಕಳೆದಿದ್ದರೂ ಇದುವರೆಗೂ ಯಾವುದೇ ನೇಮಕಾತಿಗಳಿಗೆ ಅಧಿಸೂಚನೆಗಳನ್ನು ಹೊರಡಿಸಿಲ್ಲ. ಆದ್ದರಿಂದ ಉದ್ಯೋಗಾಕಾಂಕ್ಷಿಗಳು ಸರ್ಕಾರದ ಘೋಷಣೆಗಳನ್ನು ನಂಬಲು ಸಾಧ್ಯವಾಗದೆ, ವಿಶ್ವಾಸ ಕಳೆದುಕೊಂಡು ಮತ್ತೆ ಹೋರಾಡಲು ಬೀದಿಗಿಳಿದಿದ್ದಾರೆ ಎಂದು ಸಮಿತಿ ತಿಳಿಸಿದೆ.

ಈ ಮಧ್ಯೆ ಕೆಪಿಎಸ್‌ಸಿ ನಡೆಸಿದ ಕೆಎಎಸ್ ಪರೀಕ್ಷೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿರುವ ಬಗ್ಗೆಯೂ ವರದಿಗಳು ಬಂದಿದ್ದು ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕೆಂದು ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯು ಆಗ್ರಹಿಸುತ್ತಾ ಬಂದಿದೆ. ಈ ಹಿಂದೆ ಕೂಡ ಕೆಪಿಎಸ್‌ಸಿ ನಡೆಸಿದ ಹಲವಾರು ನೇಮಕಾತಿ ಪ್ರಕ್ರಿಯೆಗಳಲ್ಲಿ ಭ್ರಷ್ಟಾಚಾರಗಳು ನಡೆದಿವೆ. ಆದ್ದರಿಂದ ಈ ಕೂಡಲೇ ಕೆಪಿಎಸ್‌ಸಿಯನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿ ಮುಂದಿನ ಎಲ್ಲಾ ನೇಮಕಾತಿಗಳು ಪಾರದರ್ಶಕವಾಗಿ ನಡೆಯುವಂತೆ ಖಾತ್ರಿಪಡಿಸಬೇಕಾಗಿರುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಸಮಿತಿ ಆಗ್ರಹಿಸಿದೆ.

ಈ ವೇಳೆ ಮೈಸೂರಿನ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯಿಂದ ಅಪರ ಜಿಲ್ಲಾಧಿಕಾರಿ ಐಶ್ವರ್ಯ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಉದ್ಯೋಗ ಆಕಾಂಕ್ಷಿಗಳ ಹೋರಾಟ ಸಮಿತಿಯ ಮೈಸೂರು ಜಿಲ್ಲಾ ಸಂಚಾಲಕಿ ಎಸ್.ವಿ.ನೀತುಶ್ರೀ, ಸದಸ್ಯರಾದ ಎಸ್.ಸುಮಾ, ರಣಜಿತ್ ಧೂಪತ್, ಪೂರ್ಣಿಮಾ ಉಪಸ್ಥಿತರಿದ್ದರು.

ಹಕ್ಕೊತ್ತಾಯಗಳು

ರಾಜ್ಯ ಸರ್ಕಾರ ತೀರ್ಮಾನಿಸಿದಂತೆ 56,432 ಹುದ್ದೆಗಳಿಗೆ ಕೂಡಲೇ ನೇಮಕಾತಿ ಅಧಿಸೂಚನೆ ಹೊರಡಿಸಬೇಕು. ಎಲ್ಲಾ ರೀತಿಯ ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಲು ಹಾಗೂ ಪಾರದರ್ಶಕ ನೇಮಕಾತಿಗಾಗಿ ಕೆಪಿಎಸ್‌ಸಿ ಸಂಪೂರ್ಣವಾಗಿ ಸ್ವಚ್ಛಗೊಳಿಸಲು ಪಿಸಿ ಹೋಟಾ ಸಮಿತಿಯ ವರದಿಯನ್ನು ತಕ್ಷಣವೇ ಜಾರಿಗೊಳಿಸಬೇಕು. ಎಲ್ಲಾ ನೇಮಕಾತಿಗಳ ದುಬಾರಿ ಅರ್ಜಿ ಶುಲ್ಕವನ್ನು ಕೈಬಿಡಬೇಕು ಹಾಗೂ ನೇಮಕಾತಿ ಪರೀಕ್ಷೆ ಸಂದರ್ಭದಲ್ಲಿ ಅಭ್ಯರ್ಥಿಗಳಿಗೆ ಉಚಿತ ಸಾರಿಗೆ ಒದಗಿಸಬೇಕು. ರಾಜ್ಯದಲ್ಲಿ ಎಲ್ಲಾ ನೇಮಕಾತಿ ಪ್ರಾಧಿಕಾರಗಳು ಪ್ರತಿ ವರ್ಷ ನೇಮಕಾತಿ ಪ್ರಕ್ರಿಯೆಯ ವಾರ್ಷಿಕ ಕ್ಯಾಲೆಂಡರ್ ಬಿಡುಗಡೆ ಮಾಡಬೇಕು. ಕೇಂದ್ರ, ರಾಜ್ಯ ಸರ್ಕಾರಗಳಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು ಎಂದು ಆಗ್ರಹಿಸಿದರು.

ಪುನರ್ವಸತಿ ಕಾರ್ಯಕರ್ತರ ನೇಮಕಾತಿಗಾಗಿ ಅರ್ಜಿ ಆಹ್ವಾನ

ಮೈಸೂರು, ಮೇ 7– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಗ್ರಾಮೀಣ ಪುನರ್ವಸತಿ ಯೋಜನೆಯಡಿ ನಗರ ಪುನರ್ವಸತಿ ಕಾರ್ಯಕರ್ತರನ್ನು ಗೌರವಧನದ ಆಧಾರದ ಮೇಲೆ ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ವಲಯ ಕಚೇರಿ–1 ಮತ್ತು ಕಚೇರಿ–7ರಲ್ಲಿ ಖಾಲಿಯಿರುವ ನಗರ ಪುನರ್ವಸತಿ ಕಾರ್ಯಕರ್ತರ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರಬೇಕು (ಅಂಕಪಟ್ಟಿ ಕಡ್ಡಾಯ), ವಯೋಮಿತಿ 18 ರಿಂದ 45 ವರ್ಷದ ಒಳಗಿರಬೇಕು. ಸದರಿ ಹುದ್ದೆಯು ಗೌರವಧನ ಆಧಾರಿತ ಹುದ್ದೆಯಾಗಿದ್ದು, ಖಾಯಂ ಹುದ್ದೆಯಾಗಿರುವುದಿಲ್ಲ. ಆಸಕ್ತ ಅರ್ಹ ವಿಕಲಚೇತನರು ಜಿಲ್ಲಾ ಅಂಗ ವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ, ಪುಲಿಕೇಶಿ ರಸ್ತೆ ತಿಲಕ್‌ನಗರ, ಮೈಸೂರು ಇಲ್ಲಿ ಮೇ 8ರಿಂದ 22ರವರೆಗೆ ನಿಗದಿತ ಅರ್ಜಿ ನಮೂನೆ ಪಡೆದು ಭರ್ತಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ ಮೇ 25ರ ಸಂಜೆ 5 ಗಂಟೆಯೊಳಗೆ ಸಲ್ಲಿಸಬಹುದಾಗಿದೆ. ಮಾಹಿತಿಗಾಗಿ ದೂ.ಸಂಖ್ಯೆ: 0821–2490333 ಸಂಪರ್ಕಿಸಬಹುದೆಂದು ಜಿಲ್ಲಾ ಅಂಗ ಅಂಗವಿಕಲರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 8 ಶುಕ್ರವಾರ 2026

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 22 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಫ್ಲೈ ಓವರ್, ರಸ್ತೆ ಅಭಿವೃದ್ಧಿ ಕಾಮಗಾರಿಯಿಂದ ಮೈಸೂರು ಗ್ರೀನ್ ಸಿಟಿಗೆ ಚ್ಯುತಿ ಉಂಟಾಗಬಾರದು

● ಅಧಿಕಾರಿಗಳಿಗೆ ಸಂಸದ ಯದುವೀರ್ ಸೂಚನೆ ● ಮಣಿಪಾಲ್ ಬಳಿ ಫ್ಲೈ ಓವರ್‌ಗೆ ತೆರವುಗೊಳಿಸಲು ಉದ್ದೇಶಿಸಲಾಗಿರುವ ಮರಗಳ ಮಾಹಿತಿ ಸಂಗ್ರಹ

ಮೈಸೂರು, ಮೇ 7(ವಿವಿಹೆಚ್)– ಮೈಸೂರು–ಬೆಂಗಳೂರು ರಸ್ತೆಯ ಮಣಿಪಾಲ್ ಆಸ್ಪತ್ರೆಯ ಜಂಕ್ಷನ್‌ನಲ್ಲಿ ನಿರ್ಮಿಸುತ್ತಿರುವ ಫ್ಲೈ ಓವರ್ ಕಾಮಗಾರಿಯಿಂದ ಮೈಸೂರು ಗ್ರೀನ್ ಸಿಟಿ ಹೆಸರಿಗೆ ಯಾವುದೇ ಚ್ಯುತಿ ಬರಬಾರದು ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ನಗರದ ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಬಳಿ ನಿರ್ಮಿಸಲಾಗುತ್ತಿರುವ ಫ್ಲೈ ಓವರ್ ಕಾಮಗಾರಿಗೆ ತೆರವುಗೊಳಿಸಲು ಗುರುತಿಸಲಾಗಿರುವ ಮರಗಳ ವೀಕ್ಷಣೆ ಮಾಡಿದ ಬಳಿಕ ಸಂಸದ ಯದುವೀರ್ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು.

ಫ್ಲೈ ಓವರ್ ಕಾಮಗಾರಿ ಹಿನ್ನೆಲೆಯಲ್ಲಿ 150ಕ್ಕೂ ಹೆಚ್ಚು ಮರಗಳನ್ನು ಕಡಿಯಲಿದ್ದಾರೆ ಎಂದು ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ. ಮರಗಳನ್ನು ಉಳಿಸಿಕೊಂಡೇ ನಮ್ಮ ಅಭಿವೃದ್ಧಿ ಕಾರ್ಯಗಳು ನಡೆಯಲಿವೆ. ಯಾವುದೇ ಕಾರಣಕ್ಕೂ ಅಭಿವೃದ್ಧಿಯ ಹೆಸರಿನಲ್ಲಿ ಪರಿಸರಕ್ಕೆ ಹಾನಿಯುಂಟು ಮಾಡುವುದಿಲ್ಲ ಎಂದು ಹೇಳಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಫ್ಲೈ ಓವರ್ ನಿರ್ಮಾಣಕ್ಕಾಗಿ ಮರಗಳನ್ನು ತೆರವುಗೊಳಿಸಬೇಕೆಂದು ನನ್ನ ಗಮನಕ್ಕೆ ತಂದಿದ್ದರು. ಆದರೆ ಭಾಗಶಃ ಮರಗಳನ್ನು ಉಳಿಸಿಕೊಳ್ಳುವಂತೆ ಸೂಚಿಸಿದ್ದೇನೆ. ಅಗತ್ಯವಿರುವ ಮರಗಳನ್ನು ಸುರಕ್ಷಿತವಾಗಿ ಸ್ಥಳಾಂತರ ಮಾಡಬೇಕು. ಕಾಮಗಾರಿ ಸಂಬಂಧ ಮೊದಲೇ ಸಾರ್ವಜನಿಕರಲ್ಲಿ ಸಲಹೆ ಕೇಳಲಾಗಿತ್ತು. ಹೀಗಿದ್ದರೂ ಕಾಮಗಾರಿ ಆರಂಭಕ್ಕೆ ಮುನ್ನವೇ ತೆರವು ಕಾರ್ಯಾಚರಣೆ ಬಗ್ಗೆ ಜನರಲ್ಲಿ ಆತಂಕದ ಭಾವನೆ ಮೂಡಿದೆ. ಇದನ್ನು ಹೋಗಲಾಡಿಸಿ, ಮೈಸೂರಿನ ಪಾರಂಪರಿಕತೆಗೆ ಧಕ್ಕೆ ಬರದಂತೆ ಕಾಮಗಾರಿ ನಡೆಸಲಾಗುವುದು ಎಂದು ತಿಳಿಸಿದರು.

ಮಣಿಪಾಲ್ ಆಸ್ಪತ್ರೆಯಿಂದ ಸಿದ್ದಿಕಿ ನಗರ, ಬನ್ನಿಮಂಟಪ ಹಾಗೂ ಫೌಂಟೇನ್ ವೃತ್ತದ ಕಡೆಗಳಲ್ಲಿ ಒಂದು ಭಾಗದಲ್ಲಿ 155 ಮರಗಳಿದ್ದರೆ ಮತ್ತೊಂದು ಕಡೆ 108 ಮರಗಳಿವೆ. ಇವುಗಳನ್ನು ಭಾಗಶಃ ಉಳಿಸಿಕೊಳ್ಳುವ ಕೆಲಸ ಮಾಡಲಾಗುವುದು. ಕೆಲವು ಮರಗಳನ್ನು ಕಡಿದಾಗ ಪಕ್ಕದಲ್ಲಿ ಒಂದಕ್ಕೆ ಮೂರು ಮರಗಳಂತೆ ಮರು ಬೆಳೆಸಲು ಎಲ್ಲಾ ಕ್ರಮ ಕೈಗೊಳ್ಳಲಾಗುವುದು. ಸೂರತ್ ಹೆದ್ದಾರಿ ಕಾಮಗಾರಿ ವೇಳೆ ಬಳಸಲಾದ ವೈಜ್ಞಾನಿಕ ಮಾದರಿಯನ್ನೇ ಇಲ್ಲಿಯೂ ಮರಗಳ ಸ್ಥಳಾಂತರಕ್ಕೆ ಬಳಸಲಾಗುವುದು ಎಂದು ವಿವರಿಸಿದರು.

500ಕ್ಕೂ ಅಧಿಕ ಮರಗಳನ್ನು ಗುರುತಿಸಿರುವುದರಿಂದ ನಮಗೂ ಕೂಡ ಆತಂಕ ಎದುರಾಗಿತ್ತು. ಆದರೆ, ಎಲ್ಲ ಮರಗಳನ್ನು ಸ್ಥಳಾಂತರ ಮಾಡುವಂತೆ ಸೂಚನೆ ನೀಡಲಾಗಿದೆ. ಇದರ ಕುರಿತು ಅರಣ್ಯ ಇಲಾಖೆ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಿ ವರದಿ ನೀಡಬೇಕು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಸೂಚನೆ ನೀಡಿದ್ದಾರೆ.

ಆದರೆ, ಫ್ಲೈ ಓವರ್ ಕಾಮಗಾರಿ ಸಂಬಂಧ ಇರುವ ಅಡಚಣೆಗಳನ್ನು ತೆರವುಗೊಳಿಸುವುದಕ್ಕಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮಾಡಿದ್ದ ಮನವಿಗೆ ಸ್ಪಂದಿಸಿದ ಅರಣ್ಯ ಇಲಾಖೆ ಮರಗಳನ್ನು ಗುರುತಿಸಿದೆ. ಇದರಲ್ಲಿ ಯಾವುದೇ ಗೊಂದಲವಿಲ್ಲ. ಸೃಜನಶೀಲವಾಗಿ ಅಭಿವೃದ್ಧಿ ಕೆಲಸ ಮಾಡುವುದರಿಂದ ಪರಿಸರ ಸಂರಕ್ಷಣೆಯಾಗಲಿದೆ ಎಂದರು.

ಮುಂದುವರಿದು, ಇದು 712 ಕೋಟಿ ರೂ. ಯೋಜನೆಯಾಗಿದ್ದು, ಇದರಲ್ಲಿ 120 ಕೋಟಿ ರೂ.ನಲ್ಲಿ ಫ್ಲೈ ಓವರ್ ನಿರ್ಮಾಣವಾಗಲಿದೆ ಹಾಗೂ ಫ್ಲೈ ಓವರ್ ಕಾಮಗಾರಿ 2027ರಲ್ಲಿ ಪೂರ್ಣಗೊಳ್ಳಲಿದೆ ಎಂದು ಸಂಸದರು ಸವಿವರವಾಗಿ ಮಾಹಿತಿ ನೀಡಿದರು.

ಈ ವೇಳೆ ಮಾಜಿ ಮಹಾಪೌರ ಸಂದೇಶ ಸ್ವಾಮಿ, ನಗರಪಾಲಿಕೆ ಉಪ ವಿಭಾಗಾಧಿಕಾರಿ ಮಂಜುನಾಥ್, ನಗರಪಾಲಿಕೆ ಅಧಿಕಾರಿ ವೀಣಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಮೈಸೂರು–ಬೆಂಗಳೂರು ರಸ್ತೆಯ ಮಣಿಪಾಲ್ ಆಸ್ಪತ್ರೆಯ ಜಂಕ್ಷನ್‌ನಲ್ಲಿ ನಿರ್ಮಿಸುತ್ತಿರುವ ಫ್ಲೈ ಓವರ್ ಕಾಮಗಾರಿಗೆ ತೆರವುಗೊಳಿಸಲು ಗುರುತಿಸಲಾಗಿರುವ ಮರಗಳ ಬಗ್ಗೆ ಸಂಸದ ಯದುವೀರ್ ಒಡೆಯರ್, ಅಧಿಕಾರಿಗಳಿಂದ ಮಾಹಿತಿ ಪಡೆದರು.

ನಾಳೆ ಕುವೆಂಪು ಶೈಕ್ಷಣಿಕ ಚಿಂತನೆಗಳು ಕುರಿತು ವಿಚಾರಗೋಷ್ಠಿ

ಮೈಸೂರು, ಮೇ 7– ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯ ಮೈಸೂರು ಜಿಲ್ಲಾ ಘಟಕದ ವತಿಯಿಂದ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯದ ಸಹಯೋಗದೊಂದಿಗೆ ಮೇ 9ರಂದು ಬೆಳಗ್ಗೆ 10.30 ಗಂಟೆಗೆ ನಗರದ ಎನ್.ಆರ್.ಮೊಹಲ್ಲಾ ವಿಧಾನಸಭಾ ವ್ಯಾಪ್ತಿಯ ರಾಜೇಂದ್ರನಗರದಲ್ಲಿರುವ ಮಹಾವಿದ್ಯಾಯದ ಛಾಯಾದೇವಿ ರಂಗಮಂಟಪದಲ್ಲಿ ಕುವೆಂಪು ಶೈಕ್ಷಣಿಕ ಚಿಂತನೆಗಳು ಕುರಿತು ವಿಚಾರಗೋಷ್ಠಿ ನಡೆಯಲಿದೆ. ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ಕೆ.ನರಸಿಂಹಮೂರ್ತಿ ಉದ್ಘಾಟಿಸಲಿದ್ದು, ಬೆಂಗಳೂರಿನ ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಕೊಟ್ರೇಶ್ ಎಸ್.ಉಪ್ಪಾರ್ ಅಧ್ಯಕ್ಷತೆ ವಹಿಸುವರು. ವೇದಿಕೆ ರಾಜ್ಯ ಉಪಾಧ್ಯಕ್ಷ ಹಾಗೂ ಸಾಹಿತಿ ಟಿ.ಸತೀಶ್ ಜವರೇಗೌಡ ಆಶಯ ನುಡಿಗಳನ್ನಾಡುವರು.

ಕುವೆಂಪು ಅವರ ಶೈಕ್ಷಣಿಕ ಚಿಂತನೆಗಳು ಕುರಿತು ನಂಜನಗೂಡು ತಾಲೂಕಿನ ದೇವನೂರು ಸರ್ಕಾರಿ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಹಾಗೂ ಸಾಹಿತಿ ಡಾ. ಉಮೇಶ್ ಬೇವಿನಹಳ್ಳಿ ವಿಚಾರ ಮಂಡನೆ ಮಾಡುವರು. ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಸಿ. ಅಂತೋಣಿ ಪೌಲ್ ರಾಜ್ ಉಪಸ್ಥಿತರಿರುವರು ಎಂದು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯ ಜಿಲ್ಲಾ ಘಟಕದ ಅಧ್ಯಕ್ಷ ಬಸಪ್ಪ ಸಿ. ಸಾಲುಂಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ರಾಹಕರು, ವ್ಯಾಪಾರಿಗಳಿಗೆ ಬಟ್ಟೆ ಚೀಲ ವಿತರಣೆ



ಶ್ರೀರಾಂಪುರದಲ್ಲಿ ಕ್ಷೇಮ ಧಾಮ ಟ್ರಸ್ಟ್ ಹಾಗೂ ಅರಿವು ಸಂಸ್ಥೆ ವತಿಯಿಂದ ಮಾರುಕಟ್ಟೆಯ ತರಕಾರಿ ವ್ಯಾಪಾರಿಗಳಿಗೆ ಹಾಗೂ ಗ್ರಾಹಕರಿಗೆ ಬಟ್ಟೆ ಚೀಲ ವಿತರಿಸಿದರು.

ಮೈಸೂರು, ಮೇ 7– ಮರು ಬಳಕೆ ಮಾಡಲು ಸಾಧ್ಯವಿಲ್ಲದ ಪ್ಲಾಸ್ಟಿಕ್ ಪರಿಸರಕ್ಕೆ ಮಾರಕ. ಆದ್ದರಿಂದ ಪ್ಲಾಸ್ಟಿಕ್ ಚೀಲಗಳ ಬದಲು ಬಟ್ಟೆ ಚೀಲಗಳನ್ನು ಬಳಸಲು ವರ್ತಕರು–ಗ್ರಾಹಕರು ಗಂಭೀರವಾಗಿ ಚಿಂತಿಸಬೇಕು ಎಂದು ಕ್ಷೇಮ ಧಾಮ ಟ್ರಸ್ಟ್ ಕಾರ್ಯದರ್ಶಿ ಎಚ್.ವಿ.ಎಲ್.ಎಸ್.ಆಚಾರ್ ತಿಳಿಸಿದರು.

ಕ್ಷೇಮ ಧಾಮ ಟ್ರಸ್ಟ್ ಹಾಗೂ ಅರಿವು ಸಂಸ್ಥೆ ವತಿಯಿಂದ ಗುರುವಾರ ಶ್ರೀರಾಂಪುರದಲ್ಲಿ ಮಾರುಕಟ್ಟೆಯ ತರಕಾರಿ ವ್ಯಾಪಾರಿಗಳಿಗೆ ಹಾಗೂ ಗ್ರಾಹಕರಿಗೆ ಬಟ್ಟೆ ಚೀಲ ವಿತರಿಸಿ ಮಾತನಾಡಿದರು.

ಪ್ಲಾಸ್ಟಿಕ್ ಬಳಕೆಯಿಂದ ಪರಿಸರ, ಮನುಷ್ಯರ ಆರೋಗ್ಯ ಹಾಗೂ ಪ್ರಾಣಿ ಸಂಕುಲದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ. ಮಣ್ಣಿನ ಫಲವತ್ತತೆ ಕಡಿಮೆ ಆಗುತ್ತದೆ. ಜಲಮೂಲಗಳು ಕಲುಷಿತಗೊಳ್ಳುತ್ತವೆ. ಪ್ಲಾಸ್ಟಿಕ್ ವಿಷಕಾರಿ ರಾಸಾಯನಿಕ ಬಿಡುಗಡೆ ಮಾಡುವ ಕಾರಣ ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗಳೂ ಕಾಣಿಸಿಕೊಳ್ಳುತ್ತವೆ ಎಂದು ಎಚ್ಚರಿಸಿದರು.

ಪ್ಲಾಸ್ಟಿಕ್ ಬಾಟಲ್‌ನಲ್ಲಿನ ನೀರು ಶುದ್ಧವೆಂದು ಭಾವಿಸಿ ಸೇವಿಸುವುದು ಫ್ಯಾಷನ್ ಆಗಿದೆ. ಭವಿಷ್ಯದಲ್ಲಿ ಖಾಲಿ ಬಾಟಲ್‌ಗಳನ್ನು ವಿಲೇವಾರಿ ಮಾಡುವುದೇ ಬಹುದೊಡ್ಡ ಸಮಸ್ಯೆ ಆಗಲಿದೆ. ನೀರನ್ನು ರೆಫ್ರಿಜರೇಟರ್‌ನಲ್ಲಿಟ್ಟು ತಣ್ಣಗೆ ಮಾಡಿಕೊಂಡು ಕುಡಿಯುವುದು ಆರೋಗ್ಯಕ್ಕೆ ಒಳ್ಳೆಯದಲ್ಲ. ಬದಲಿಗೆ ನೀರನ್ನು ಮಣ್ಣಿನ ಮಡಿಕೆಯಲ್ಲಿ ಹಾಕಿ ಕುಡಿಯುವುದು ಉತ್ತಮ ಎಂದು ಸಲಹೆ ನೀಡಿದರು.

ಕ್ಷೇಮ ಧಾಮ ಟ್ರಸ್ಟ್ ಅಧ್ಯಕ್ಷ ಶೇಖರ್, ಅರಿವು ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ್ ಕಶ್ಯಪ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಮೈಸೂರು ಮಹಾನಗರ ಪಾಲಿಕೆಯ ಸ್ಥಳೀಯ ಹಿರಿಯ ಆರೋಗ್ಯ ನಿರೀಕ್ಷಕರಾದ ಅಶ್ವಥ್, ಲಯನ್ ನಾಗೇಶ್ ಮೂರ್ತಿ, ಬಿಜೆಪಿ ಮುಖಂಡರಾದ ದೂರ ರಾಜಣ್ಣ, ಸತೀಶ್, ರಾಮಲಿಂಗ, ಮಂಜುನಾಥ್, ವಿಹ ಎಸ್ ಆಚಾರ್ಯ ಹಾಗೂ ಇನ್ನಿತರರು ಹಾಜರಿದ್ದರು.

ವಿಶ್ವ ಲಿವರ್ ದಿನ; ಹೊಟ್ಟೆ, ಲಿವರ್ ಆರೋಗ್ಯ ಜಾಗೃತಿ

ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ 'ನಿಮ್ಮ ವೈದ್ಯರ ಬಗ್ಗೆ ತಿಳಿಯಿರಿ' ವಿಶೇಷ ಕಾರ್ಯಕ್ರಮ

ಮೈಸೂರು, ಮೇ 7– ಮೈಸೂರಿನ ಮಣಿಪಾಲ್ ಆಸ್ಪತ್ರೆ ವತಿಯಿಂದ ಕೈಗೊಂಡಿರುವ ಮಣಿಪಾಲ್ ಹೆಲ್ತ್ ಶೃಂಗಸಭೆ ಹಾಗೂ ವಿಶ್ವ ಲಿವರ್ ದಿನದ ಅಂಗವಾಗಿ 'ನಿಮ್ಮ ವೈದ್ಯರ ಬಗ್ಗೆ ತಿಳಿಯಿರಿ' ಎಂಬ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಜನಸಾಮಾನ್ಯರಿಗೆ ಸರಳವಾಗಿ ವೈದ್ಯಕೀಯ ಅರಿವು ಮೂಡಿಸಿ, ಉಪಯುಕ್ತ ಮಾಹಿತಿ ನೀಡುವುದರ ಜೊತೆಗೆ ತಜ್ಞ ವೈದ್ಯರನ್ನು ನೇರವಾಗಿ ಭೇಟಿ ಮಾಡಿ ತಮ್ಮ ಸಮಸ್ಯೆ ಬಗ್ಗೆ ಮುಕ್ತವಾಗಿ ಚರ್ಚಿಸಿ, ಸೂಕ್ತ ಮಾರ್ಗದರ್ಶನ ಪಡೆಯುವ ಸದಾವಕಾಶ ಕಲ್ಪಿಸಲಾಗಿತ್ತು. ಸುಮಾರು 125 ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಉಪಯೋಗ ಪಡೆದರು.

ಮೆಡಿಕಲ್ ಗ್ಯಾಸ್ಟ್ರೋಎಂಟರಾಲಜಿ ಮತ್ತು ಹೆಪಟಾಲಜಿ ವಿಭಾಗದ ಸೀನಿಯರ್ ಕನ್ಸಲ್ಟೆಂಟ್ ಡಾ.ಎ.ಕೆ.ಸತೀಶ್ ರಾವ್ ಮಾತನಾಡಿ, ಪದೇ ಪದೆ ಎದೆಯುರಿ, ಹೊಟ್ಟೆಯಲ್ಲಿ ಹುಣ್ಣು(ಅಲ್ಸರ್), ಕರುಳಿನ ತೊಂದರೆಗಳು(ಐಬಿಎಸ್) ಮತ್ತು ಮೂಲವ್ಯಾಧಿ ಕಾಣಿಸಿಕೊಳ್ಳುತ್ತಿದ್ದರೆ ನಿರ್ಲಕ್ಷ್ಯಿಸದೆ ತಪಾಸಣೆ ಮಾಡಿಸಿಕೊಳ್ಳುವುದು ಅತ್ಯವಶ್ಯ. ಆರಂಭದಲ್ಲೇ ಇಂತಹ ಲಕ್ಷಣಗಳನ್ನು ಗುರುತಿಸಿ, ಸೂಕ್ತ ಚಿಕಿತ್ಸೆ ಪಡೆಯುವುದರಿಂದ ಕ್ಯಾನ್ಸರ್‌ನಂತಹ ಗಂಭೀರ ಸಮಸ್ಯೆಗಳನ್ನು ತಡೆಗಟ್ಟಲು ಸಾಧ್ಯ. ಆದ್ದರಿಂದ ರೋಗ ಗುರುತಿಸುವ ವಿಧಾನಗಳ ಬಗ್ಗೆ ತಿಳಿಯುವುದು ಮತ್ತು ಸಕಾಲದಲ್ಲಿ ವೈದ್ಯರ ಸಲಹೆ ಪಡೆಯುವುದು ಉತ್ತಮ ಎಂದರು.

ಜೀರ್ಣಕ್ರಿಯೆ ಕೇವಲ ಒಂದು ದಿನದ ಆಹಾರ ಅಥವಾ ತಾತ್ಕಾಲಿಕ ಪರಿಹಾರದಿಂದ ಸುಧಾರಿಸುವುದಿಲ್ಲ. ಪ್ರತಿದಿನ ಸಮತೋಲಿತ ಆಹಾರವನ್ನು ಸರಿಯಾದ ಸಮಯಕ್ಕೆ ಸೇವಿಸುವುದು ಹಾಗೂ ದೈಹಿಕ ವ್ಯಾಯಾಮದ ಜೊತೆಗೆ ಮಾನಸಿಕ ಒತ್ತಡವನ್ನು ಕಡಿಮೆ ಮಾಡಿಕೊಳ್ಳುವುದು ಬಹಳ ಮುಖ್ಯ. ಎದೆಯುರಿ, ಹೊಟ್ಟೆ ಉಬ್ಬರ ಅಥವಾ ಮಲವಿಸರ್ಜನೆಯಲ್ಲಿ ಬದಲಾವಣೆ ಕಂಡುಬಂದಾಗ ಸಾಮಾನ್ಯವೆಂದು ನಿರ್ಲಕ್ಷಿಸದೆ ವೈದ್ಯರ ಸಲಹೆ ಪಡೆಯಿರಿ ಎಂದರು.

ಗ್ಯಾಸ್ಟ್ರೋಇಂಟೆಸ್ಟೈನಲ್ ಆಂಕೋಸರ್ಜನ್ ಡಾ.ವಾಸುದೇವ್ ಪೈ ಹೊಸದುರ್ಗ ಮಾತನಾಡಿ, ಯಾವ ಸಮಸ್ಯೆಯಾದರೂ ವಿಳಂಬ ಮಾಡದೆ ಶಸ್ತ್ರಚಿಕಿತ್ಸಕರಿಂದ ತಪಾಸಣೆ ಮಾಡಿಸಿಕೊಳ್ಳುವುದು ಅಗತ್ಯ. ಹೊಟ್ಟೆಗೆ ಸಂಬಂಧಿಸಿದ ಗಂಭೀರ ಕಾಯಿಲೆಗಳು ಏಕಾಏಕಿ ಬರುವುದಿಲ್ಲ. ಹಾಗಾಗಿ, ಸಣ್ಣ ಲಕ್ಷಣ ಕಂಡಾಗಲೇ ತಪಾಸಣೆ ಮಾಡಿಸಿಕೊಳ್ಳುವುದು ತುಂಬಾ ಮುಖ್ಯ. ಕ್ಯಾನ್ಸರ್, ಪಿತ್ತಕೋಶದ ಕಲ್ಲುಗಳು ಅಥವಾ ಕರುಳಿನ ಕಾಯಿಲೆಗಳನ್ನು ಆರಂಭದಲ್ಲೇ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ನೀಡಿದರೆ, ರೋಗಿಯು ತ್ವರಿತವಾಗಿ ಹಾಗೂ ಪೂರ್ಣವಾಗಿ ಗುಣವಾಗಲು ಸಾಧ್ಯ ಎಂದರು.

ಕನ್ಸಲ್ಟೆಂಟ್ ಡಾ.ಆರ್.ನಿಶ್ಚಯ್ ಮಾತನಾಡಿ, ಲಿವರ್ ಕಾಯಿಲೆಗಳು ಆರಂಭಿಕ ಹಂತದಲ್ಲಿ ಯಾವುದೇ ಲಕ್ಷಣಗಳನ್ನು ತೋರಿಸುವುದಿಲ್ಲ. ನಿಯಮಿತ ತಪಾಸಣೆ ಮತ್ತು ಜೀವನಶೈಲಿಯಲ್ಲಿ ಸರಳ ಬದಲಾವಣೆಗಳು ದೀರ್ಘಕಾಲದ ಆರೋಗ್ಯವನ್ನು ಕಾಪಾಡಲು ಸಹಕಾರಿ. ಫ್ಯಾಟಿ ಲಿವರ್, ಸಿರೋಸಿಸ್, ಪೋರ್ಟಲ್ ಹೈಪರ್ಟೆನ್ಷನ್ ಮತ್ತು ಹೆಪಾಟಿಕ್ ಎನ್ಸೆಫಲೋಪತಿಯಂತಹ ಸಮಸ್ಯೆಗಳ ತಡೆಗಟ್ಟಲು ತಪಾಸಣೆ ಅಗತ್ಯ ಎಂದು ಹೇಳಿದರು.

ಮೈಸೂರಿನ ಮಣಿಪಾಲ್ ಆಸ್ಪತ್ರೆ ನಿರ್ದೇಶಕ ಬಿ.ಜೆ.ಸಂದೀಪ್ ಪಟೇಲ್ ಮಾತನಾಡಿ, ನಮ್ಮ ಆಸ್ಪತ್ರೆಯು ರೋಗಿಗಳಿಗೆ ಚಿಕಿತ್ಸೆ ನೀಡುವುದಕ್ಕೆ ಸೀಮಿತವಾಗದೆ ಇಂತಹ ಕಾರ್ಯಕ್ರಮಗಳ ಮೂಲಕ ರೋಗಗಳನ್ನು ಆರಂಭದಲ್ಲೇ ತಡೆಗಟ್ಟುವ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಜನರಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ಶ್ರಮಿಸುತ್ತಿದೆ. ನಿಮ್ಮ ವೈದ್ಯರ ಬಗ್ಗೆ ತಿಳಿಯಿರಿ ಕಾರ್ಯಕ್ರಮದ ಅಂಗವಾಗಿ ವಿಶೇಷ ಗ್ಯಾಸ್ಟ್ರೋ ಇಂಟೆಸ್ಟಿನಲ್ ಹೆಲ್ತ್ ಪ್ಯಾಕೇಜ್‌ಗಳನ್ನು ಪರಿಚಯಿಸಿದೆ. ಎಂಡೋಸ್ಕೋಪಿ, ಅಲ್ಟ್ರಾಸೌಂಡ್ ಮತ್ತು ಸಿಬಿಸಿ ಒಳಗೊಂಡ ಡಿಸ್ಪೆಪ್ಸಿಯಾ ಪ್ಯಾಕೇಜ್, ಕೊಲೊನೊಸ್ಕೋಪಿ, ಅಲ್ಟ್ರಾಸೌಂಡ್ ಮತ್ತು ಸಿಬಿಸಿ ಒಳಗೊಂಡ ಐಬಿಎಸ್ ಪ್ಯಾಕೇಜ್ ಮತ್ತು ಕಾಮಾಲೆ ತಪಾಸಣೆ ಪ್ಯಾಕೇಜ್ ಮೇಲೆ ವಿಶೇಷ ರಿಯಾಯಿತಿ ಜೊತೆಗೆ ಪ್ರಯೋಗಾಲಯ ಮತ್ತು ರೇಡಿಯಾಲಜಿ ಸೇವೆಗಳ ಮೇಲೆಯೂ ರಿಯಾಯಿತಿ ನೀಡಲಾಗುತ್ತಿದೆ ಎಂದು ತಿಳಿಸಿದರು.



ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಆಯೋಜಿಸಿರುವ 'ನಿಮ್ಮ ವೈದ್ಯರ ಬಗ್ಗೆ ತಿಳಿಯಿರಿ' ಕಾರ್ಯಕ್ರಮದಲ್ಲಿ ವೈದ್ಯರು ಆರೋಗ್ಯ ಕಾಳಜಿ ಬಗ್ಗೆ ಮಾಹಿತಿ ನೀಡಿದರು.

ಅಚ್ಚರಿ! ಕೊಳೆತು ನಾರುವ ಕಸದ ರಾಶಿ ಮಾಯ...! ಈಗ ಅತ್ಯಂತ ಸ್ವಚ್ಛತಾ ತಾಣ!!






ವಿನೋಬಾ ರಸ್ತೆಯ 8ನೇ ಕ್ರಾಸ್‌ನಲ್ಲಿ ವಾರದ ಹಿಂದಿದ್ದ ದೃಶ್ಯಗಳು

ಪ್ರತಿಷ್ಠಿತ ಅರಸು ರಸ್ತೆ ಪಕ್ಕದಲ್ಲೇ ಬದಲಾವಣೆ ಪರ್ವ!

ಮೈಸೂರು, ಮೇ 7(ಎಂಕೆ)– ಕಸದ ರಾಶಿಯಿಂದ ಗಬ್ಬೆದ್ದು ನಾರುತ್ತಿದ್ದ ಸ್ಥಳ ಈಗ ಸ್ವಚ್ಛತೆಯಿಂದ ಮಕರಂದ ಹರಡುತ್ತಿದೆ...! ಅದು ಮೈಸೂರಿನ ಹೃದಯ ಭಾಗದಲ್ಲೇ...

ಮೈಸೂರು ಮಹಾನಗರಪಾಲಿಕೆ ವಾರ್ಡ್ ನಂಬರ್ 23ರ ದೇವರಾಜ ಮೊಹಲ್ಲಾದ ವಿನೋಬಾ ರಸ್ತೆಯ 8ನೇ ಕ್ರಾಸ್‌ನಲ್ಲಿ ಬದಲಾವಣೆಯ ಗಾಳಿ ಬೀಸಿದ್ದು, ಎಲ್ಲೆಂದರಲ್ಲಿ ಕೊಳೆಯುತ್ತಿದ್ದ ರಾಶಿ ರಾಶಿ ಕಸ ಒಂದೇ ವಾರದಲ್ಲಿ ಮತ್ತೆಂದೂ ಕಾಣದಂತೆ ಕಣ್ಮರೆಯಾಗಿದೆ.

ನಗರದ ಹೃದಯ ಭಾಗದಲ್ಲಿರುವ ಪ್ರಮುಖ ವಾಣಿಜ್ಯ ರಸ್ತೆಯೆಂದೇ ಕರೆಯಲ್ಪಡುವ ಡಿ.ದೇವರಾಜ ಅರಸು ರಸ್ತೆಗೆ ಹೊಂದಿಕೊಂಡಂತಿರುವ ಈ ರಸ್ತೆಯ ಇಕ್ಕೆಲಗಳಲ್ಲಿ ಸದಾ ಕಸ ತುಂಬಿ ತುಳುಕುತ್ತಿತ್ತು. ಆದರೆ ಈಗ ಕಸವನ್ನು ಸಂಪೂರ್ಣವಾಗಿ ತೆರವುಗೊಳಿಸಿ, ಅಕ್ಕ–ಪಕ್ಕದ ನಿವಾಸಿಗಳಲ್ಲಿ ಸ್ವಚ್ಛತಾ ಅರಿವು ಮೂಡಿಸುವ ಮೂಲಕ ಹೊಸ ಶುಚಿತ್ವ ರೂಪಕ್ಕೆ ತರಲಾಗಿದೆ.

ವಾರದ ಹಿಂದೆಯಷ್ಟೇ ಸಂಜೆಯೊಳಗೆ ಲೋಡ್‌ಗಟ್ಟಲೇ ಕಸ ಸಂಗ್ರಹಣೆಯಾಗುತ್ತಿದ್ದ ಸ್ಥಳವನ್ನು ಪಾಲಿಕೆಯ ಪರಿಸರ ವಿಭಾಗದ ಇಂಜಿನಿಯರ್‌ಗಳು, ಮುತುವರ್ಜಿ ವಹಿಸಿ ಸ್ವಚ್ಛತೆಯ ತಾಣವನ್ನಾಗಿ ಮಾಡಿದ್ದಾರೆ. ಸೊಳ್ಳೆ, ನೊಣಗಳ ಆವಾಸ ಸ್ಥಳದಲ್ಲಿ ಈಗ ಹೂವಿನ ಪಾಟ್‌ಗಳನ್ನು ಇಟ್ಟು, ಸ್ವಚ್ಛತೆ ಅರಿವಿನ ಮಾಹಿತಿಯುಳ್ಳ ಫಲಕಗಳನ್ನು ಅಳವಡಿಸಿ, ಮಾದರಿ ಕಾರ್ಯವನ್ನು ಮಾಡಿದ್ದಾರೆ.

ಹೆಲ್ತ್ ಇನ್ಸ್‌ಪೆಕ್ಟರ್ ಬಸವರಾಜು ನೇತೃತ್ವದಲ್ಲಿ, ಪರಿಸರ ಇಂಜಿನಿಯರ್‌ಗಳ ಮಾಗದರ್ಶನದಲ್ಲಿ ನಡೆದ ಒಂದು ವಾರದ ಸ್ವಚ್ಛತಾ ಅಭಿಯಾನದ ಅಂಗವಾಗಿ ಇಡೀ ರಸ್ತೆ(8ನೇ ಕ್ರಾಸ್) ಸ್ವಚ್ಛತೆಗೆ ಮರಳಿದ್ದು, ಸ್ಥಳೀಯ ನಿವಾಸಿಗಳು, ವ್ಯಾಪಾರಸ್ಥರ ಮೆಚ್ಚುಗೆಗೆ ಕಾರಣವಾಗಿದೆ.

ವಾರ್ಡ್ ನಂಬರ್ 25 ಮತ್ತು 40ರಲ್ಲಿ ಸ್ವಚ್ಛತಾ ನಿರ್ವಹಣೆಯಲ್ಲಿ ಗಮನ ಸೆಳೆದಿದ್ದ ಪಾಲಿಕೆ ಹೆಲ್ತ್ ಇನ್ಸ್‌ಪೆಕ್ಟರ್ ಬಸವರಾಜು, ವಾರ್ಡ್ ನಂಬರ್ 23ಕ್ಕೆ ತಿಂಗಳ ಹಿಂದೆಯಷ್ಟೇ ನಿಯೋಜನೆಗೊಂಡಿದ್ದರು. ಈ ರಸ್ತೆಯಲ್ಲಿ ಪ್ರತಿನಿತ್ಯ ಕಸ ವಿಲೇವಾರಿ ಮಾಡಿದರೂ ಮತ್ತದೇ ಪರಿಸ್ಥಿತಿ ನಿರ್ಮಾಣವಾಗುತ್ತಿರುವುದನ್ನು ಮನಗಂಡು ಶಾಶ್ವತ ಪರಿಹಾರ ಕಂಡುಕೊಳ್ಳಲು ನಡೆಸಿದ ಪ್ರಯತ್ನ ಯಶಸ್ವಿಯಾಗಿದೆ.

ನಿವಾಸಿಗಳ ಸಹಕಾರ ಅತೀ ಮುಖ್ಯ: ಮೈಸೂರನ್ನು ಸ್ವಚ್ಛ ನಗರವನ್ನಾಗಿ ಮಾಡಲು ಸಾರ್ವಜನಿಕರ ಸಹಕಾರ ಅತೀ ಮುಖ್ಯ. ಅದರಂತೆ ರಸ್ತೆ ಇಕ್ಕೆಲಗಳಲ್ಲಿ ಕಸ ಸುರಿಯಬಾರದು ಎಂಬ ಅರಿವನ್ನು ಮೂಡಿಸಬೇಕು. ಅದರಂತೆ ವಿನೋಬಾ ರಸ್ತೆಯ 8ನೇ ಕ್ರಾಸ್ (ಲೋಕಾಬಿರಾಮ ಹತ್ತು ಜನಗಳ ಗರಡಿ ಎದುರು)ನಲ್ಲಿ ಸ್ಥಳೀಯ ನಿವಾಸಿಗಳ ಸಹಕಾರದಿಂದ ಕಸದ ರಾಶಿಯನ್ನು ಸಂಪೂರ್ಣವಾಗಿ ತೆರವುಗೊಳಿಸಲಾಗಿದೆ ಎಂದು ಹೆಲ್ತ್ ಇನ್ಸ್‌ಪೆಕ್ಟರ್ ಬಸವರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಇದೇ ರೀತಿ ಜನರು ಸಹಕಾರ ನೀಡಿದರೆ, ಮೈಸೂರಿನಲ್ಲಿ ಎಲ್ಲಿಯೂ ಕಸದ ರಾಶಿ ಕಾಣದಂತೆ ಮಾಡಬಹುದು. ಈ ರಸ್ತೆಯಲ್ಲಿ ಸ್ವಚ್ಛತೆ ಆದ್ಯತೆ ನೀಡಿದ್ದರಿಂದ ನಿವಾಸಿಗಳು ಖುಷಿ ವ್ಯಕ್ತಪಡಿಸಿದ್ದು, ಸೊಳ್ಳೆ ಮತ್ತು ನೊಣಗಳ ಕಾಟ ಕಡಿಮೆಯಾಗಿದೆ. ದುರ್ವಾಸನೆ ಜಾಗದಲ್ಲಿ ಹೂ ಮತ್ತು ಇನ್ನಿತರೆ ಗಿಡಗಳ ಪಾಟ್‌ಗಳನ್ನು ಇಡುವ ಮೂಲಕ ಹೊಸ ವಾತಾವರಣ ಸೃಷ್ಟಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.






ಸ್ವಚ್ಛತೆಯಿಂದ ಹೊಸ ರೂಪ ಪಡೆದಿರುವ ವಿನೋಬಾ ರಸ್ತೆಯ 8ನೇ ಕ್ರಾಸ್

ಅಪರಿಚಿತ ಶವ ಪತ್ತೆ

ಮೈಸೂರು, ಮೇ 7– ಶ್ರೀರಂಗಪಟ್ಟಣ ರೈಲು ನಿಲ್ದಾಣದ ವೇದಿಕೆ ನಂ.02ರ ರೈಲ್ವೆ ಕಿಮೀ ಸಂಖ್ಯೆ 123/300–400 ರಲ್ಲಿ ಸುಮಾರು 65–70 ವರ್ಷ ಅಪರಿಚಿತ ಗಂಡಸು ರೈಲುಗಾಡಿಗೆ ಸಿಕ್ಕಿ ಮೃತಪಟ್ಟಿದ್ದು, ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಮಾರು 65–70 ವರ್ಷ, 5 ಅಡಿ ಎತ್ತರ, ಸಾಧಾರಣ ಮೈಕಟ್ಟು, ಗೋಧಿ ಮೈಬಣ್ಣ, ಕೋಲು ಮುಖ, ಉದ್ದ ಮೂಗು, ತಲೆ ಮುಂಭಾಗ ಬೋಳಾಗಿದ್ದು, ತಲೆಯಲ್ಲಿ ಸುಮಾರು 1 ಇಂಚು ಬಿಳಿ ಕೂದಲು, ಬಿಳಿ ಮೀಸೆ ಇರುತ್ತದೆ. ಬಲ ತೊಡೆಯಲ್ಲಿ ಕಪ್ಪು ಮಚ್ಚೆ ಇದ್ದು, ಬಿಳಿ ಬಣ್ಣದ ಅರ್ಧ ತೋಳಿನ ಶರ್ಟ್, ಕಂದು ಬಣ್ಣದ ಪ್ಯಾಂಟ್, ಬಿಳಿ ಬಣ್ಣದ ಬನಿಯನ್ ಧರಿಸಿರುತ್ತಾರೆ. ಮೃತದೇಹವು ಮಂಡ್ಯ ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿರುತ್ತದೆ.

ಮೃತನ ವಾರಸುದಾರರ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆ ದೂ.ಸಂಖ್ಯೆ–0821–2516579, 9480802122 ನ್ನು ಸಂಪರ್ಕಿಸಬಹುದೆಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾವೇರಿ 2.0 ತಂತ್ರಾಂಶ ಜನರಿಗೆ ಉಪಯೋಗಕಾರಿಯಲ್ಲ

ಪತ್ರ ಬರಹಗಾರರ ಒಕ್ಕೂಟದ ಆರೋಪ

ಮೈಸೂರು, ಮೇ 7(ಎಂಟಿವೈ)– ನೋಂದಣಿ ಮತ್ತು ಮುದ್ರಾಂಕ ಇಲಾಖೆ ಜಾರಿಗೆ ತಂದಿರುವ ಕಾವೇರಿ 2.0 ತಂತ್ರಾಂಶ ಅನೇಕ ಲೋಪಗಳಿಂದ ಕೂಡಿದೆ. ಇದರಿಂದ ಆಸ್ತಿ ಹೊಂದಿರುವವರಿಗೆ ಸಮಸ್ಯೆಯಾಗುತ್ತಿದೆ ಎಂದು ಮೈಸೂರು ನಗರ, ತಾಲೂಕು ಪತ್ರ ಬರಹಗಾರರ ಒಕ್ಕೂಟದ ಅಧ್ಯಕ್ಷ ನಿಸಾರ್ ಅಹಮದ್ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾವೇರಿ 2.0 ತಂತ್ರಾಶ ಅನುಷ್ಠಾನಗೊಂಡಿರುವ ಪ್ರಕ್ರಿಯೆಯಲ್ಲಿ ಪಕ್ಷಕಾರರ ಭೌತಿಕ ಸಹಿ, ಸಾಕ್ಷಿಗಳ ಭೌತಿಕ ಸಹಿ, ಉಪ ನೋಂದಣಾಧಿಕಾರಿಗಳ ಭೌತಿಕ ಸಹಿ ಹಾಗೂ ಪತ್ರ ಬರಹಗಾರರ ಭೌತಿಕ ಸಹಿ ಇಲ್ಲದಿದ್ದು, ಇದರಿಂದಾಗಿ ದಾಖಲಾತಿಗಳು ಕೇವಲ ಮುದ್ರಣ ಹೊರತುಪಡಿಸಿ ಯಾವುದೇ ವಿಶೇಷತೆ ಹೊಂದಿಲ್ಲ. ಪೇಪರ್‌ಲೆಸ್ ನೋಂದಣಿ ಮೂಲಕ ನೋಂದಣಿ ಆಗುವ ದಸ್ತಾವೇಜು ಡಿಜಿಟಲ್ ರೂಪದಲ್ಲಿ ಕೇಂದ್ರಿತ ದತ್ತಾಂಶದಲ್ಲಿ ದಾಖಲಾಗುವ ಕಾರಣ ಭೌತಿಕವಾಗಿ ಲಭ್ಯವಾಗದಿದ್ದು, ಈ ನೋಂದಾಯಿತ ದಸ್ತಾವೇಜುಗಳ ಮೇಲೆ ಕಷ್ಟಕಾಲದಲ್ಲಿ ಆರ್ಥಿಕ, ಹಣಕಾಸು ಸೌಲಭ್ಯವನ್ನು ಖಾಸಗಿ ವ್ಯಕ್ತಿಗಳಿಂದ ಪಡೆಯಲು ಸಹ ಸಾಧ್ಯವಾಗುವುದಿಲ್ಲ. ಡಿಜಿಟಲ್ ರೂಪದಲ್ಲಿ ಸ್ವತ್ತಿನ ಹಕ್ಕುದಾರರು ಒಂದಕ್ಕಿಂತ ಹೆಚ್ಚು ಮುದ್ರಿತ ಪ್ರತಿ ಪಡೆಯಲು ಸಾಧ್ಯವಿದ್ದು, ಖಾಸಗಿ ವ್ಯಕ್ತಿಗಳು ಯಾವುದೇ ಅಸಲು ದಸ್ತಾವೇಜಿನ ಖಾತರಿ ಇಲ್ಲದೇ ಆರ್ಥಿಕ ಸಹಾಯ ನೀಡಲು ಹಿಂಜರಿಯುವ ಸಂಭವವಿದೆ. ಹೀಗಾಗಿ ಪತ್ರ ಬರಹಗಾರರ ಅವಲಂಬನೆಗೆ ಕಡಿವಾಣ ಹಾಕುವ ಯಾವುದೇ ಪ್ರವೃತ್ತಿ ಸಹಾಯಕಾರಿಯಲ್ಲ. ಇದರಿಂದ ಜನತೆಗೆ ಹೆಚ್ಚು ಅನಾನುಕೂಲವಾಗುವ ಕಾರಣ ಈ ಹಿಂದಿನ ಪದ್ಧತಿ ರದ್ದುಗೊಳಿಸುವುದು ಸರಿಯಲ್ಲ ಎಂದರು.

ಗೋಷ್ಠಿಯಲ್ಲಿ ಮೈಸೂರು ನಗರ, ತಾಲೂಕು ಪತ್ರ ಬರಹಗಾರರ ಒಕ್ಕೂಟದ ಪದಾಧಿಕಾರಿಗಳಾದ ಕೆ.ಆರ್.ಉದಯ್ ಕುಮಾರ್, ಎಂ.ಎಸ್.ನರಸಿಂಹಮೂರ್ತಿ, ಎಂ.ಗಣೇಶ್, ಎ.ಎಸ್.ನಾಗಭೂಷಣ ಆರಾಧ್ಯ, ಹಾಗೂ ಇನ್ನಿತರರು ಇದ್ದರು.

ಮೈಸೂರು ಮಿತ್ರ

ಶುಕ್ರವಾರ 8 ಮೇ 2026

ರಾಜೀನಾಮೆ ಕೊಡದೆ ಮಮತಾ ಹಠ: ಪಶ್ಚಿಮ ಬಂಗಾಳ ವಿಧಾನಸಭೆ ವಿಸರ್ಜಿಸಿದ ರಾಜ್ಯಪಾಲರು

ಕೋಲ್ಕತ್ತ, ಮೇ 7– ಪಶ್ಚಿಮ ಬಂಗಾಳದ ರಾಜಕೀಯ ಹಗ್ಗ ಜಗ್ಗಾಟ ಅಂತಿಮವಾಗಿ ತೆರೆ ಬಿದ್ದಿದ್ದು, ವಿಧಾನಸಭೆಯನ್ನು ಗುರುವಾರ ವಿಸರ್ಜಿಸಲಾಗಿದೆ. ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲು ಮಮತಾ ಬ್ಯಾನರ್ಜಿ ನಿರಾಕರಿಸಿದ ಬೆನ್ನಲ್ಲೇ, ರಾಜ್ಯ ಪಾಲ ಆರ್.ಎನ್.ರವಿ ಇಂದು ಸಂಜೆ ರಾಜ್ಯ ವಿಧಾನ ಸಭೆಯನ್ನು ವಿಸರ್ಜಿಸಿ, ಆದೇಶ ಹೊರಡಿಸಿದ್ದಾರೆ.



ರಾಜಭವನದಿಂದ ಅಧಿಕೃತ ಆದೇಶ: ವಿಧಾನ ಸಭೆ ಅವಧಿಯು ಇಂದು ಮುಕ್ತಾಯಗೊಳ್ಳಲಿರುವ ಹಿನ್ನೆಲೆಯಲ್ಲಿ, ರಾಜಭವನ ನಿನ್ನೆ ಹೊರಡಿಸಿದ್ದ ಪತ್ರವನ್ನು ಇಂದು ಸಂಜೆ ಅಧಿಕೃತ ವಾಗಿ ಪ್ರಕಟಿಸಿದೆ. ಸಂವಿಧಾನದ 174ನೇ ವಿಧಿ ಅನ್ವಯ ತಮಗೆ ನೀಡಿರುವ ಅಧಿಕಾರವನ್ನು ಬಳಸಿ ರಾಜ್ಯಪಾಲರು ಮೇ 7ರಿಂದ ಜಾರಿಗೆ ಬರುವಂತೆ ಪಶ್ಚಿಮ ಬಂಗಾಳ ವಿಧಾನಸಭೆಯನ್ನು ವಿಸರ್ಜಿಸಿದ್ದಾರೆ.

ಮಮತಾ ಬ್ಯಾನರ್ಜಿ ನಿಲುವು: ವಿಧಾನಸಭಾ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ಭಾರೀ ಹಿನ್ನಡೆಯಾದ ನಂತರವೂ, ಮಮತಾ ಬ್ಯಾನರ್ಜಿ ರಾಜೀನಾಮೆ ನೀಡಲು ನಿರಾಕರಿಸಿ ದೊಡ್ಡ ವಿವಾದವನ್ನೇ ಸೃಷ್ಟಿಸಿದ್ದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ್ದ ಅವರು, ನಾನು ಚುನಾವಣೆಯಲ್ಲಿ ಸೋತಿಲ್ಲ. ಆದ್ದರಿಂದ ರಾಜಭವನಕ್ಕೆ ಹೋಗುವುದಿಲ್ಲ ಮತ್ತು ರಾಜೀನಾಮೆ ಸಲ್ಲಿಸುವುದಿಲ್ಲ. ಬಿಜೆಪಿಗೆ ಸಿಕ್ಕಿರುವ ಬಹುಮತ ಜನರದ್ದಲ್ಲ, ಅದು ಮತಗಳ ಲೂಟಿ ಎಂದು ಆರೋಪಿಸಿದ್ದರು. ಮಮತಾ ಬ್ಯಾನರ್ಜಿ ನಡೆಗೆ ಬಿಜೆಪಿ ನಾಯಕರಿಂದ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಚುನಾವಣೆಯಲ್ಲಿ ಸೋತ ನಂತರವೂ ಅಧಿಕಾರದಲ್ಲಿ ಮುಂದುವರಿಯಲು ಯತ್ನಿಸುತ್ತಿರುವ ಅವರನ್ನು ಕೂಡಲೇ ವಜಾಗೊಳಿಸಬೇಕು ಎಂದು ಬಿಜೆಪಿ ನಾಯಕರು ಆಗ್ರಹಿಸಿದ್ದರು. ಈಗ ವಿಧಾನಸಭೆ ವಿಸರ್ಜನೆಗೊಂಡಿರುವುದರಿಂದ ಮಮತಾ ಬ್ಯಾನರ್ಜಿ ಅವರ ಅಧಿಕಾರಾವದಿ ಅಧಿಕೃತವಾಗಿ ಅಂತ್ಯಗೊಂಡು ಬಂಗಾಳವು ಮುಂದಿನ ಆಡಳಿತಾತ್ಮಕ ಬದಲಾವಣೆಗಳಿಗೆ ಸಾಕ್ಷಿಯಾಗಿದೆ.

ಜೀವಿತಾವಧಿ ಪ್ರಮಾಣಪತ್ರ ಸಲ್ಲಿಕೆಗೆ ಸೂಚನೆ

ಮೈಸೂರು, ಮೇ 7– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಾಸಾಶನ ಪಡೆಯುತ್ತಿರುವ ಜಿಲ್ಲೆಯ ಕಲಾವಿದರು, ಸಾಹಿತಿಗಳು ಹಾಗೂ ವಿಧವಾ ಮಾಸಾಶನ ಪಡೆಯುತ್ತಿರುವವರು 2026–27ನೇ ಸಾಲಿಗೆ ಜೀವಿತಾವಧಿ ಪ್ರಮಾಣ ಪತ್ರ ಸಲ್ಲಿಸ ಬೇಕಾಗುತ್ತದೆ. ಮಾಹಿತಿಗಾಗಿ ಕಚೇರಿಯ ದೂರವಾಣಿ ಸಂಖ್ಯೆ: 0821–2513225 ನ್ನು ಸಂಪರ್ಕಿಸಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಎಂ.ಡಿ.ಸುದರ್ಶನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ಯೋಗಾಧಾರಿತ ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು: CIPET ವತಿಯಿಂದ 2026–27ನೇ ಸಾಲಿನ ಉದ್ಯೋಗಾಧಾರಿತ ಮತ್ತು ಉದ್ಯೋಗ ಖಚಿತ ಡಿಪ್ಲೊಮಾ, ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಡಿಪ್ಲೊಮಾ ಇನ್ ಪ್ಲಾಸ್ಟಿಕ್ಸ್ ಟೆಕ್ನಾಲಜಿ (OPT), ಡಿಪ್ಲೊಮಾ ಇನ್ ಪ್ಲಾಸ್ಟಿಕ್ಸ್ ಮೌಲ್ಡ್ ಟೆಕ್ನಾಲಜಿ (DPMT) -3 ವರ್ಷದ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಬಹುದು.

ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಐಟಿಐ ಪರೀಕ್ಷೆಯಲ್ಲಿ ತೇರ್ಗಡೆಯಾದವರು, ಹಾಜರಾದವರು ಆನ್‌ಲೈನ್, ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಪಿಯುಸಿ (ವಿಜ್ಞಾನ), ಐಟಿಐ ತೇರ್ಗಡೆಯಾದವರು ಡಿಪ್ಲೊಮಾ 2ನೇ ವರ್ಷಕ್ಕೆ ಪ್ರವೇಶ (Lateral Entry for 2nd year Diploma) ಪಡೆಯಬಹುದಾಗಿದೆ. ಆಸಕ್ತ ವಿದ್ಯಾರ್ಥಿಗಳು ಮೇ28ರೊಳಗೆ https://cipet26.online registration form.org/CIPET/ ಹಾಗೂ www.cipet.gov.in ಆನ್‌ಲೈನ್ ರಿಜಿಸ್ಟ್ರೇಷನ್ ಲಿಂಕ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ ದೂ.ಸಂ: 9480253024/9791431827 ಸಂಪರ್ಕಿಸಬಹುದೆಂದು ಪ್ರಕಟಣೆ ತಿಳಿಸಿದೆ.

ಮೈಮುಲ್‌ಗೆ ಆಡಳಿತಾಧಿಕಾರಿ ನೇಮಕ



ಮೈಸೂರು: ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ(ಮೈಮುಲ್)ದ ಆಡಳಿತ ಮಂಡಳಿ ಅವಧಿ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದ ಮೇರೆಗೆ ಒಕ್ಕೂಟದ ಆಡಳಿತಾಧಿಕಾರಿಯಾಗಿ ಸಹಕಾರ ಸಂಘಗಳ ಜಂಟಿ ನಿಬಂಧಕ ಸಿ.ಪ್ರಸಾದ್‌ರೆಡ್ಡಿ ಅಧಿಕಾರ ವಹಿಸಿಕೊಂಡಿದ್ದಾರೆ.

ಪಕ್ಷ, ಸರ್ಕಾರಕ್ಕೆ ಡ್ಯಾಮೇಜ್ ಆಗುವ ಮುನ್ನ ನಾಯಕತ್ವ ಬದಲಾವಣೆ ಗೊಂದಲ ನಿವಾರಣೆಯಾಗಬೇಕು!

- ಮಾಜಿ ಸಚಿವ ಕೆ.ಎನ್.ರಾಜಣ್ಣ ಅಭಿಮತ
- ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ಮಾಡಿ ಸಮಾಲೋಚನೆ



ಮೈಸೂರಿನ ಸಿಎಂ ಸಿದ್ದರಾಮಯ್ಯ ಅವರ ನಿವಾಸಕ್ಕೆ ಆಗಮಿಸಿ, ಅವರ ಜೊತೆ ಸಮಾಲೋಚಿಸಿದ ನಂತರ ಮಾಜಿ ಸಚಿವ ಕೆ.ಎನ್.ರಾಜಣ್ಣ ಮಾತನಾಡಿದರು.

ಮೈಸೂರು,ಮೇ7(ಎಂಟಿವೈ)–ನಾಯಕತ್ವ ಬದಲಾವಣೆ ಗೊಂದಲ ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷದ ಮೇಲೆ ದುಷ್ಪರಿಣಾಮ ಬೀರುವ ಮೊದಲು ಹೈಕಮಾಂಡ್ ನಿರ್ಧಾರ ಮಾಡಬೇಕು ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಒತ್ತಾಯಿಸಿದ್ದಾರೆ.

ಇಂದು ಬೆಳಗ್ಗೆ ಮೈಸೂರಿನ ರಾಮಕೃಷ್ಣ ನಗರದಲ್ಲಿರುವ ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರ ನಿವಾಸಕ್ಕೆ ಆಗಮಿಸಿ, ಸಿಎಂ ಜೊತೆ ಸಮಾಲೋಚಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಚಿವ ಸಂಪುಟ ಪುನರ‍್ರಚನೆ ಮಾಡ ಬೇಕಾ ಅಥವಾ ನಾಯಕತ್ವ ಬದಲಾವಣೆ ಮಾಡಬೇಕಾ ಎಂದು ಹೈಕಮಾಂಡ್ ಕೈಗೊಳ್ಳುವ ತೀರ್ಮಾನಕ್ಕೆ ನಾವೆಲ್ಲರೂ ಬದ್ಧ. ರಾಜ್ಯದಲ್ಲಿ ಏನೆಲ್ಲಾ ಬೆಳವಣಿಗೆ ನಡೆ ಯುತ್ತಿದೆ ಎಂಬುದು ನಮಗಿಂತ ನಿಮಗೆ (ಮಾಧ್ಯಮದವರಿಗೆ) ಚೆನ್ನಾಗಿ ಗೊತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಎಲ್ಲವನ್ನೂ ಹೇಳಿದ್ದಾರೆ. ಹೈಕಮಾಂಡ್ ಬಯಸಿದರೆ ಐದು ವರ್ಷಗಳ ಕಾಲ ಮುಂದುವರಿಯುವ ಮಾತನ್ನಾಡಿದ್ದಾರೆ. ಅಲ್ಲದೆ, ಹೈಕಮಾಂಡ್ ಕೈಗೊಳ್ಳುವ ತೀರ್ಮಾನಕ್ಕೂ ಬದ್ಧ ಎಂದಿದ್ದಾರೆ ಎಂದರು.

ಸಚಿವ ಸಂಪುಟ ಪುನರ್‌ರಚನೆ ಮಾಡ ಬೇಕಾ ಅಥವಾ ನಾಯಕತ್ವ ಬದಲಾವಣೆ ಏನಾದರೂ ಮಾಡಬೇಕಾ ಎಂಬುದನ್ನು ಹೈಕಮಾಂಡ್ ತೀರ್ಮಾನಿಸಬೇಕು. ಇದೇ ವಿಚಾರದಲ್ಲಿ ಗೊಂದಲ ಮುಂದು ವರಿದರೆ ಸರ್ಕಾರ ಮತ್ತು ಪಕ್ಷದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಹಾಗಾಗಿ, ಕಾಂಗ್ರೆಸ್ ಹೈಕಮಾಂಡ್ ಬೇಗ ಒಂದು ಸ್ಪಷ್ಟ ತೀರ್ಮಾನಕ್ಕೆ ಬರಬೇಕು. ವರಿಷ್ಠರನ್ನು ಭೇಟಿ ಮಾಡಿದಾಗ ಇದೇ ವಿಚಾರವನ್ನು ಹೇಳಿದ್ದೇನೆ. ಮತ್ತೊಮ್ಮೆ ಅದನ್ನೇ ಒತ್ತಾಯಿಸುವೆ ಎಂದರು.

ಮೇ 15ರೊಳಗೆ ಡಿ.ಕೆ.ಶಿವಕುಮಾರ್ ಅವರಿಗೆ ಶುಭಸುದ್ದಿ ಬರುತ್ತದೆ ಎನ್ನುವ ಮಾತುಗಳನ್ನು ಆಪ್ತರು ಹೇಳುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ರಾಜಕಾರಣದಲ್ಲಿ ಆಶಾ ಭಾವನೆ, ಆಶಾವಾದಿಗಳಾಗಿರಬೇಕು. ಮುಖ್ಯ ಮಂತ್ರಿ ಸ್ಥಾನಕ್ಕೆ ಒಂದು ಡಜನ್ ಆಕಾಂಕ್ಷಿ ಗಳಿದ್ದಾರೆ. ಮಲ್ಲಿಕಾರ್ಜುನಖರ್ಗೆ, ಡಾ.ಜಿ.ಪರಮೇಶ್ವರ್, ಎಂ.ಬಿ.ಪಾಟೀಲ್ ಸೇರಿದಂತೆ ಅನೇಕರು ಇದ್ದಾರೆ. ಆಸೆಪಡು ವುದು ತಪ್ಪಲ್ಲ ಅಂತಿಮವಾಗಿ ಹೈಕಮಾಂಡ್ ತೀರ್ಮಾನವಾಗಿರುತ್ತದೆ ಎಂದರು.

ನಾಯಕತ್ವ ಬದಲಾವಣೆ ಬಗ್ಗೆ ನಾನೇನೂ ಹೇಳಲಾರೆ. ಈ ಒಂದು ಬದಲಾವಣೆ ಆಗಲೂಬಹುದು ಅಥವಾ ಆಗದಿರಲೂ ಬಹುದು. ನಾನು ಸಚಿವ ಸ್ಥಾನದ ಆಕಾಂಕ್ಷಿ ಯಲ್ಲ. ನಾನು ನಿತ್ಯ ಸಚಿವನಾಗಿದ್ದೇನೆ ಎಂದು ಹಾಸ್ಯಧಾಟಿಯಲ್ಲಿ ಉತ್ತರಿಸಿದರು.

ಸಚಿವರು, ಶಾಸಕರೊಂದಿಗೆ ಸಿಎಂ ಔಪಚಾರಿಕ ಚರ್ಚೆ

ಮೈಸೂರು,ಮೇ 7(ಎಂಟಿವೈ)– ನಾಯಕತ್ವ ಬದಲಾವಣೆ ವಿಚಾರ ಚರ್ಚೆ ಯಾಗುತ್ತಿರುವ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೈಸೂರಿನ ತಮ್ಮ ನಿವಾಸದಲ್ಲಿ ಮೈಸೂರು ಭಾಗದ ಶಾಸಕರೊಂದಿಗೆ ಕೆಲಕಾಲ ಔಪ ಚಾರಿಕವಾಗಿ ಚರ್ಚೆ ನಡೆಸಿದ್ದಾರೆ.



ಸಾರ್ವಜನಿಕರ ಬಳಿ ಅಹವಾಲು ಸ್ವೀಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ.

ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊ ಳ್ಳಲು ಮೈಸೂರಿಗೆ ಆಗಮಿಸಿದ್ದ ಸಿದ್ದ ರಾಮಯ್ಯ ಕಳೆದ ರಾತ್ರಿ ರಾಮಕೃಷ್ಣ ನಗರದಲ್ಲಿರುವ ತಮ್ಮ ನಿವಾಸದಲ್ಲಿ ವಾಸ್ತವ್ಯ ಹೂಡಿದ್ದರು. ಇಂದು ಬೆಳಗ್ಗೆ ಬೆಂಗಳೂರಿಗೆ ತೆರಳುವ ಮುನ್ನ ಮೈಸೂರು, ಚಾಮರಾಜನಗರದ ಶಾಸಕ ರೊಂದಿಗೆ ಕೆಲಕಾಲ ಚರ್ಚಿಸಿ, ಆಯಾ ಕ್ಷೇತ್ರಗಳಲ್ಲಿ ಆಗುತ್ತಿರುವ ಅಭಿವೃದ್ಧಿ ಕಾರ್ಯದ ಬಗ್ಗೆ ಮಾಹಿತಿ ಪಡೆದರ ಲ್ಲದೆ, ಸಾರ್ವಜನಿಕರ ಕುಂದುಕೊರತೆ ಆಲಿಸಿ ಸಾಧ್ಯವಾದಷ್ಟು ತಮ್ಮ ತಮ್ಮ ಕ್ಷೇತ್ರದ ಸಮಸ್ಯೆಗಳ ಪರಿಹರಿಸುವಂತೆ ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಈ ವೇಳೆ ರೇಷ್ಮೆ ಮತ್ತು ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಮಾಜಿ ಸಚಿವ ಕೆ.ಎನ್.ರಾಜಣ್ಣ, ಶಾಸಕ ರಾದ ಕೆ.ಹರೀಶ್‌ಗೌಡ, ಅನಿಲ್ ಚಿಕ್ಕ ಮಾದು, ಡಿ.ರವಿಶಂಕರ್, ಸಿ.ಪುಟ್ಟರಂಗ ಶೆಟ್ಟಿ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಇತರೆ ಮುಖಂಡರು ಉಪಸ್ಥಿತರಿದ್ದರೆನ್ನಲಾಗಿದೆ.

ಅಧಿಕಾರಿಗಳಿಂದ ಮಾಹಿತಿ: ಸಚಿ ವರು, ಆಪ್ತ ಶಾಸಕರೊಂದಿಗೆ ಚರ್ಚಿಸಿದ ಬಳಿಕ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ, ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಐಜಿಪಿ ಡಾ.ಎಂ.ಬಿ. ಬೋರಲಿಂಗಯ್ಯ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಮುಖ್ಯ ಮಂತ್ರಿಗಳ ಭೇಟಿ ಮಾಡಿ, ಚರ್ಚಿಸಿದರು.

ಅಹವಾಲು ಸ್ವೀಕಾರ: ಮನೆಯಿಂದ ಹೊರಗೆ ಬಂದ ಸಿಎಂ, ತಮಗಾಗಿ ಕಾದು ನಿಂತಿದ್ದ ಸಾರ್ವಜನಿಕರ ಬಳಿ ತೆರಳಿ ಅವರ ಅಹವಾಲು ಸ್ವೀಕರಿಸಿದರು. ಕೆಲವು ಸಮಸ್ಯೆ ಗಳಿಗೆ ಸ್ಥಳದಲ್ಲೇ ಪರಿಹಾರ ಸೂಚಿಸಿದರೆ, ಮತ್ತೆ ಕೆಲವು ಮನವಿ ಪತ್ರಗಳನ್ನು ತಮ್ಮ ಆಪ್ತ ಸಹಾಯಕರಿಗೆ ನೀಡಿ, ಮುಂದಿನ ಕ್ರಮಕ್ಕೆ ಸೂಚಿಸಿದರು. ಈ ವೇಳೆ ಮದುವೆ, ಗೃಹಪ್ರವೇಶದ ಆಹ್ವಾನ ಪತ್ರಿಕೆಯನ್ನು ನೀಡಿದವರಿಗೆ ಸಿಎಂ, ನನ್ನ ಬದಲಿಗೆ ಯತೀಂದ್ರ ಬರುತ್ತಾರೆಂದು ಹೇಳಿದರು. ಬಳಿಕ ಮನೆಯಿಂದ ನೇರವಾಗಿ ಹೋಟೆಲ್ ಮೈಲಾರಿಗೆ ತೆರಳಿ ಬೆಳಗಿನ ಉಪಹಾರ ಸೇವನೆ ಮಾಡಿದರು.

ನಕಾರ: ಎಂದಿನಂತೆ ಮನೆಯಿಂದ ಹೊರಗೆ ಬಂದಾಗ ಮಾಧ್ಯಮದವ ರೊಂದಿಗೆ ಮಾತನಾಡುತ್ತಿದ್ದ ಸಿಎಂ ಸಿದ್ದರಾಮಯ್ಯ ಅವರು ಗುರುವಾರ ಅತ್ತ ಸುಳಿಯಲಿಲ್ಲ. ಅವರನ್ನು ರಿಕ್ವೆಸ್ಟ್ ಮಾಡಿದರೂ, ಕಾರನ್ನೇರಿ ಹೊರಟರು.

ಮೇ 10ಕ್ಕೆ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಲ್ಲಿ ಪಿಯುಸಿ ಪಾಸಾದವರಿಗೆ 'ಓಪನ್ ಡೇ'

ಮೈಸೂರು, ಮೇ 7(ಎಂಟಿವೈ)– ಮೈಸೂರಿನ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪಿಯುಸಿ ಪಾಸಾದ ವಿದ್ಯಾರ್ಥಿಗಳಿಗೆ ಮೇ 10 ರಂದು 'ಓಪನ್ ಡೇ' ಕಾರ್ಯಕ್ರಮ ಆಯೋ ಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಸದಾಶಿವೇಗೌಡ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ದ್ವಿತೀಯ ಪಿಯುಸಿ ಪಾಸಾದ 3 ಲಕ್ಷ ವಿದ್ಯಾರ್ಥಿಗಳು ಈ ಬಾರಿ ಸಿಇಟಿ ಪರೀಕ್ಷೆ ಬರೆದಿದ್ದು, ಅವರಲ್ಲಿ 1.50 ಲಕ್ಷ ವಿದ್ಯಾರ್ಥಿಗಳು ಎಂಜಿನಿಯರ್ ಓದಬೇಕೆಂಬ ಬಯಕೆ ಹೊಂದಿದ್ದಾರೆ. ಈ ಹಿನ್ನೆಲೆಯಲ್ಲಿ ಎಂಜಿನಿಯ ರಿಂಗ್ ಶಿಕ್ಷಣದ ಬಗ್ಗೆ ಮಾಹಿತಿ ಮತ್ತು ಮಾರ್ಗ ದರ್ಶನ ನೀಡುವ ನಿಟ್ಟಿನಲ್ಲಿ ಓಪನ್ ಡೇ ಆಯೋ ಜಿಸಲಾಗಿದೆ. ಮೇ 10ರಂದು ಬೆಳಗ್ಗೆ 10.30ಕ್ಕೆ ಓಪನ್ ಡೇಗೆ ಚಾಲನೆ ದೊರೆಯಲಿದೆ. ಸಂಸ್ಥೆಯ ಅಧ್ಯಕ್ಷ ಗುಂಡಪ್ಪ ಗೌಡ ಅಧ್ಯಕ್ಷತೆ ವಹಿಸಲಿದ್ದು, ಇನ್ಫೋಸಿಸ್ ಲಿ.ನ ಉಪಾಧ್ಯಕ್ಷ ಕೆ.ಎಸ್.ಸುಂದರ್, ಸೀನಿಯರ್ ಡಿಸೈನ್ ಎಂಜಿನಿಯರ್ ವಿ.ರವೀಂದ್ರ, ಸಿಇಟಿ ತಜ್ಞ ಉದಯ್ ಶಂಕರ್, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಪಿ.ವಿಶ್ವನಾಥ್ ಮುಖ್ಯ ಅತಿಥಿ ಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ವಿದ್ಯಾರ್ಥಿಗಳಿಗೆ ಯಾವ ಕೋರ್ಸ್ ಆಯ್ಕೆ ಮಾಡಿಕೊಳ್ಳಬೇಕೆಂಬ ಗೊಂದಲದಲ್ಲಿದ್ದಾರೆ. ಇದನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ನಡೆಯ ಲಿದೆ. ಈ ವೇಳೆ ಸಂವಾದ, ಉದ್ಯಮ ಕ್ಷೇತ್ರದ ಒಳ ನೋಟ, ತಾಂತ್ರಿಕ ಪ್ರದರ್ಶನ ಇರಲಿವೆ ಎಂದರು.

ವಿದ್ಯುತ್ ಉತ್ಸವ: ಮೇ 8ರಿಂದ 10ರವರೆಗೆ ಕಾಲೇಜು ಕ್ಯಾಂಪಸ್‌ನಲ್ಲಿ ವಿದ್ಯುತ್ ಶೀರ್ಷಿಕೆಯ ಸಾಂಸ್ಕೃತಿಕ ಉತ್ಸವ ಹಾಗೂ ವಿದ್ಯುತ್ ಉತ್ಸವದಲ್ಲಿ ಸಾಂಸ್ಕೃತಿಕ, ಕಲಾತ್ಮಕ ಕಾರ್ಯಕ್ರಮಗಳು ಆಯೋಜನೆಗೊಳ್ಳಲಿವೆ. ವಿವಿಧ ಕಾಲೇಜುಗಳು ಮತ್ತು ವಿವಿಗಳ ವಿದ್ಯಾರ್ಥಿ ಗಳನ್ನು ಒಂದೇ ವೇದಿಕೆಗೆ ತರುವ ಯತ್ನ ಇದಾಗಿದೆ. ಡಾಗ್ ಶೋ, ಆಟೋ ಎಕ್ಸ್ಪೋ, ರಂಗೋಲಿ, ಬ್ಯಾಟಲ್ ಆಫ್ ಬ್ಯಾಂಡ್ಸ್, ಗೋಲ್ಡನ್ ಮೈಕ್, ಮೆಹಂದಿ ಸ್ಪರ್ಧೆ, ಟ್ರೆಷರ್ ಹಂಟ್ ಮೊದಲಾದವುಗಳು ಸಹ ಆಕರ್ಷಣೆ ಯಾಗಿವೆ. ಬಾಲಿವುಡ್ ನೈಟ್, ಡಿಜೆಗಳು ಸಹ ವಿದ್ಯಾರ್ಥಿ ಗಳನ್ನು ರಂಜಿಸಲಿವೆ ಎಂದು ವಿವರಿಸಿದರು. ಈ ವೇಳೆ ಗೋಷ್ಠಿಯಲ್ಲಿ ಡಾ.ನವೀನ್‌ಪ್ರಕಾಶ್, ಡಾ.ಗೌರಿ ಶಂಕರ್, ಡಾ.ಮಂಜು ಇನ್ನಿತರರು ಇದ್ದರು.

ಮಕ್ಕಳ ಸೀಳು ತುಟಿ, ಅಂಗುಳ ಸಮಸ್ಯೆ ನಿವಾರಣೆಗೆ ಸಂಘ–ಸಂಸ್ಥೆಗಳು ಸರ್ಕಾರದೊಂದಿಗೆ ಸಹಕರಿಸಿ

- ಆರೋಗ್ಯ–ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಮನವಿ
- ಸೂಕ್ತ ಸಮಯದಲ್ಲಿ ಚಿಕಿತ್ಸೆ ದೊರೆತರೆ ಸಹಜತೆ ಸಾಧ್ಯ
- ಆಯಿಷ್‌ನಲ್ಲಿ 'ಇಂಡೋಕ್ಲೆಫ್ಟ್‌ಕಾನ್–2026' ವಾರ್ಷಿಕ ಸಮ್ಮೇಳನ

ಮೈಸೂರು,ಮೇ7(ಎಂಕೆ)–ಸೀಳು ತುಟಿ(ಕ್ಲೆಫ್ಟ್ ಲಿಪ್) ಮತ್ತು ಸೀಳು ಅಂಗುಳ(ಕ್ಲೆಫ್ಟ್ ಪ್ಯಾಲೇಟ್) ಸಮಸ್ಯೆ ಹೊಂದಿ ರುವ ಮಕ್ಕಳಿಗೆ ಸೂಕ್ತ ಸಮಯದಲ್ಲಿ ಸಮಗ್ರವಾದ ಚಿಕಿತ್ಸೆ ನೀಡುವುದು ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಅಗತ್ಯ ನೆರವು ನೀಡುತ್ತಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್)ಯ ನಾಲೆಡ್ಜ್ ಪಾರ್ಕ್ ಸಭಾಂಗಣದಲ್ಲಿ ಇಂಡಿಯಾ ಸೊಸೈಟಿ ಆಫ್ ಕ್ಲೆಫ್ಟ್ ಲಿಪ್, ಪ್ಯಾಲೇಟ್ ಮತ್ತು ಕ್ರಾನಿಯೊಫೇಷಿಯಲ್ ಅನಾಮಲೀಸ್(ಐಎಸ್‌ಸಿಎಲ್ ಪಿಸಿಎ) ವತಿಯಿಂದ ಆಯೋಜಿಸಿರುವ ಮೂರು ದಿನಗಳ 'ಇಂಡೋಕ್ಲೆಫ್ಟ್‌ಕಾನ್–2026' 24ನೇ ವಾರ್ಷಿಕ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಅರಿವಿನ ಕೊರತೆ ಮತ್ತು ಸಮಯೋಚಿತ ಚಿಕಿತ್ಸೆ ನೀಡದೆ ಇರುವುದರಿಂದ ಸೀಳು ತುಟಿ ಮತ್ತು ಸೀಳು ಅಂಗುಳ ಸಮಸ್ಯೆ ಜನನದಿಂದಲೇ ಬರುವಂತದ್ದಾಗಿದೆ. ಆದರೆ ಸೂಕ್ತ ಸಮಯದಲ್ಲಿ ತಜ್ಞರ ಸಲಹೆಯೊಂದಿಗೆ ಸಮಸ್ಯೆ ಗುರುತಿಸದಿದ್ದರೆ ಮುಂದಿನ ದಿನಗಳಲ್ಲಿ ಮಕ್ಕಳು ಹೆಚ್ಚಿನ ತೊಂದರೆ ಅನುಭವಿಸ ಬೇಕಾಗುತ್ತದೆ ಎಂದು ಸಚಿವರು ಎಚ್ಚರಿಸಿದರು.



ಮೈಸೂರಿನಲ್ಲಿರುವ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ(ಆಯಿಷ್)ಯಲ್ಲಿ ಆಯೋಜಿಸಿರುವ ಮೂರು ದಿನಗಳ 'ಇಂಡೋಕ್ಲೆಫ್ಟ್‌ಕಾನ್–2026' 24ನೇ ವಾರ್ಷಿಕ ಸಮ್ಮೇಳನವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಗುರುವಾರ ಉದ್ಘಾಟಿಸಿದರು. ಈ ವೇಳೆ ಸ್ಮೈಲ್ ಟ್ರೈನ್ ಇಂಡಿಯಾ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕರಾದ ರೇಣು ಮೆಹ್ತಾ, ಐಎಸ್‌ಸಿಎಲ್‌ಪಿಸಿಎ ಅಧ್ಯಕ್ಷರೂ ಆದ ಆಯಿಷ್ ನಿರ್ದೇಶಕಿ ಡಾ.ಎಂ.ಪುಷ್ಪಾವತಿ, ಕಾರ್ಯದರ್ಶಿ ಡಾ.ಪ್ರೀತಮ್ ಶೆಟ್ಟಿ, ಡಾ.ಗೋಪಿಶಂಕರ್ ಉಪಸ್ಥಿತರಿದ್ದರು.

ಗ್ರಾಮೀಣ ಭಾಗದಲ್ಲಿ ಮತ್ತು ಸಣ್ಣ ಪಟ್ಟಣಗಳಲ್ಲಿ ವಾಸಿ ಸುವ ಜನರಲ್ಲಿ ಸೀಳು ತುಟಿ ಮತ್ತು ಸೀಳು ಅಂಗುಳ ಸಮಸ್ಯೆ ಕುರಿತು ವ್ಯಾಪಕ ಅರಿವು ಮೂಡಿಸಬೇಕಿದೆ. ಆರೋಗ್ಯ ಇಲಾಖೆ ಸಿಬ್ಬಂದಿ ಮನೆ ಮನೆಗೆ ಭೇಟಿ ನೀಡಿದಾಗ ಇಂತಹ ಸಮಸ್ಯೆ ಇರುವ ಮಕ್ಕಳನ್ನು ಗುರುತಿಸಿ, ಅವರಿಗೆ ಎಲ್ಲಿ ಮತ್ತು ಹೇಗೆ ಚಿಕಿತ್ಸೆ ಪಡೆಯಬೇಕೆಂದು ಮಾರ್ಗದರ್ಶನ ನೀಡಬೇಕು ಎಂದು ದಿನೇಶ್‌ಗುಂಡೂರಾವ್ ತಿಳಿಸಿದರು.

ಕೇವಲ ಒಂದು ಬಾರಿಯ ಶಸ್ತ್ರ ಚಿಕಿತ್ಸೆಯಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ಸಮಗ್ರ ಚಿಕಿತ್ಸಾ ವಿಧಾನ ದೊಂದಿಗೆ ಸಂಪೂರ್ಣವಾಗಿ ಸಹಜ ಸ್ವರೂಪಕ್ಕೆ ಬರುವವ ರೆಗೂ ಶಸ್ತ್ರ ಚಿಕಿತ್ಸೆಗಳಾಗಬೇಕು. ನುರಿತ ಶಸ್ತ್ರ ಚಿಕಿತ್ಸಕರು, ಆರ್ಥೋಡಾಂಟಿಸ್ಟ್‌ಗಳು, ಸರ್ಜನ್‌ಗಳು, ವಾಕ್ ಚಿಕಿತ್ಸಕ ರೆಲ್ಲರೂ ಒಗ್ಗೂಡಿ ಚಿಕಿತ್ಸೆ ನೀಡಿದಾಗ ಮಾತ್ರ ಮಗುವಿನ ಬೆಳವಣಿಗೆ ಸರಿಯಾಗಿ ಆಗಲು ಸಾಧ್ಯ. ಸರ್ಕಾರದ ಸಹಕಾರದ ಜೊತೆಗೆ ಕಳೆದ 20 ವರ್ಷಗಳಿಂದ 'ಸ್ಮೈಲ್ ಟ್ರೈನ್ ಇಂಡಿಯಾ (Smile Train)' ಸಂಸ್ಥೆಯು ನೀಡುತ್ತಿರುವ ಸೇವೆ ಶ್ಲಾಘನೀಯ. ಈವರೆಗೆ ಈ ಸಂಸ್ಥೆಯು 7 ಲಕ್ಷಕ್ಕೂ ಹೆಚ್ಚು ಶಸ್ತ್ರ ಚಿಕಿತ್ಸೆಗಳನ್ನು ಯಶಸ್ವಿಯಾಗಿ ಮಾಡಿರುವುದು ಸಾಮಾನ್ಯ ಸಾಧನೆಯಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

> ಸರ್ಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಒಟ್ಟಾಗಿ ಕೆಲಸ ಮಾಡಿದರೆ ಮಾತ್ರವೇ ಮಕ್ಕಳಲ್ಲಿನ ಸೀಳು ತುಟಿ ಮತ್ತು ಸೀಳು ಅಂಗುಳ ಸಮಸ್ಯೆಗಳನ್ನು ಸಮರ್ಥವಾಗಿ ನಿವಾರಿಸಲು ಸಾಧ್ಯ. ಈ ನಿಟ್ಟಿನಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ ವೈದ್ಯ ಕೀಯ ಕ್ಷೇತ್ರದಲ್ಲಿ ನಡೆಯುತ್ತಿರುವ ಹೊಸ ಸಂಶೋ ಧನೆಗಳು ಆಧುನಿಕ ಶಸ್ತ್ರಚಿಕಿತ್ಸಾ ವಿಧಾನಗಳು ಮತ್ತು ಹೊಸ ಸಾಮಗ್ರಿಗಳನ್ನು ಬಳಸಿಕೊಳ್ಳುವ ಮೂಲಕ ಚಿಕಿತ್ಸೆಯ ಗುಣಮಟ್ಟವನ್ನು ಹೆಚ್ಚಿಸಬೇಕು.
> –ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ.

ಬಡ ಜನರಿಗೆ ಚಿಕಿತ್ಸೆ ಪಡೆಯಲು ಬೆಂಗಳೂರಿನಂತಹ ದೊಡ್ಡ ನಗರಗಳಿಗೆ ಬರಲು ಕಷ್ಟವಾಗುತ್ತದೆ. ಆದ್ದರಿಂದ ಇದನ್ನು ಸರಿದೂಗಿಸಲು ಮತ್ತು ಅತ್ಯುತ್ತಮ ಚಿಕಿತ್ಸೆ ನೀಡಲು ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು ಒಟ್ಟಾಗಿ ಕೆಲಸ ಮಾಡು ತ್ತಿದ್ದು, ಮೈಸೂರಿನಲ್ಲಿಯೂ ಚಿಕಿತ್ಸೆ ನೀಡಲಾಗುತ್ತಿದೆ. 'ಸಂಪರ್ಕಿಸಿ, ಸಂವಹನ ನಡೆಸಿ ಮತ್ತು ಸಹಕರಿಸಿ (Connect, Commu nicate and Collaborate)' ಎಂಬ ಸಮ್ಮೇಳನದ ಘೋಷ ವಾಕ್ಯ ಅತ್ಯಂತ ಸೂಕ್ತವಾಗಿದೆ ಎಂದು ಶ್ಲಾಘಿಸಿದರು.


ಸ್ಮೈಲ್ ಟ್ರೈನ್ ಕಾಳಜಿ: ದಕ್ಷಿಣ ಏಷ್ಯಾದ ಸ್ಮೈಲ್ ಟ್ರೈನ್ ಇಂಡಿಯಾ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕರಾದ ರೇಣು ಮೆಹ್ತಾ ಮಾತನಾಡಿ, ಸೀಳು ತುಟಿ ಮತ್ತು ಸೀಳು ಅಂಗುಳಿನ ಸಮಸ್ಯೆಯೊಂದಿಗೆ ಜನಿಸಿದ ಪ್ರತಿಯೊಂದು ಮಗುವಿನ ಬಗ್ಗೆ ಸ್ಮೈಲ್ ಟ್ರೈನ್ ಸಂಸ್ಥೆ ಸ್ಥಳೀಯವಾಗಿ ಕಾಳಜಿ ವಹಿಸು ತ್ತದೆ. 1999ರಿಂದ ಇಲ್ಲಿಯವರೆಗೆ ಜಾಗತಿಕವಾಗಿ 20 ಲಕ್ಷಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಗಳಿಗೆ ಸ್ಮೈಲ್ ಟ್ರೈನ್ ಸಂಸ್ಥೆಯು ಬೆಂಬಲ ನೀಡಿದೆ. ಕಳೆದ 26 ವರ್ಷಗಳಲ್ಲಿ ಭಾರತದಲ್ಲೇ 7,50,000 ಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿದೆ. ಸ್ಮೈಲ್ ಟ್ರೈನ್ ಸಂಸ್ಥೆ ಸ್ಥಳೀಯ ಆಸ್ಪತ್ರೆಗಳು, ವೈದ್ಯರು ಮತ್ತು ಶಸ್ತ್ರ ಚಿಕಿತ್ಸಕರೊಂದಿಗೆ ಕೆಲಸ ಮಾಡಲಿದೆ ಹಾಗೂ ಗುಣಮಟ್ಟದ ಚಿಕಿತ್ಸೆಯನ್ನು ಎಲ್ಲರಿಗೂ ತಲುಪಿಸುವ ನಿಟ್ಟಿನಲ್ಲಿ ದೇಶದ 13 ರಾಜ್ಯಗಳೊಂದಿಗೆ ಅಧಿಕೃತ ಒಪ್ಪಂದ ಗಳನ್ನು ಮಾಡಿಕೊಂಡಿದೆ ಎಂದು ಹೇಳಿದರು.

ಪ್ರಾಯೋಗಿಕ ತರಬೇತಿ: ಸೀಳು ತುಟಿ ಮತ್ತು ಸೀಳು ಅಂಗುಳಿನ ಸಮಸ್ಯೆ ನಿವಾರಣೆಗೆ ಮಾಡುವ ಅಲ್ವಿಯೋ ಲಾರ್ ಬೋನ್ ಗ್ರಾಫ್ಟ್ (Alveolar Bone Grafting-ABG) ಶಸ್ತ್ರ ಚಿಕಿತ್ಸೆಯ ಕುರಿತು ಇತ್ತೀಚೆಗೆ ನಡೆದ ಕಾರ್ಯಾ ಗಾರದಲ್ಲಿ 30 ಯುವ ಶಸ್ತ್ರಚಿಕಿತ್ಸಕರಿಗೆ ಪ್ರಾಯೋಗಿಕ ತರಬೇತಿ ನೀಡಲಾಗಿದೆ. ಈ ಮೂಲಕ ಚಿಕಿತ್ಸಾ ಸೇವೆ ವಿಸ್ತರಿಸುವುದು ಸಂಸ್ಥೆಯ ಗುರಿಯಾಗಿದೆ. ಸರ್ಕಾರದ ಬೆಂಬಲದೊಂದಿಗೆ ದೇಶದ ಕಟ್ಟ ಕಡೆಯ ಸಮುದಾಯಗಳಿಗೂ ಸಮಗ್ರ ಚಿಕಿತ್ಸೆ ವಿಸ್ತರಿಸುವ ಭರವಸೆಯನ್ನು ನೀಡುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಐಎಸ್‌ಸಿಎಲ್‌ಪಿಸಿಎ ಅಧ್ಯಕ್ಷರೂ ಆದ ಆಯಿಷ್ ನಿರ್ದೇಶಕಿ ಡಾ.ಎಂ.ಪುಷ್ಪಾವತಿ, ಕಾರ್ಯದರ್ಶಿ ಡಾ.ಪ್ರೀತಮ್ ಶೆಟ್ಟಿ, ಡಾ.ಗೋಪಿಶಂಕರ್ ಮತ್ತಿತರರಿದ್ದರು.

ದೇಶ - ವಿದೇಶ

ಕಚ್ಚಾ ಬಾಂಬ್ ದಾಳಿ: ಬಿಜೆಪಿಯ ಐವರು ಕಾರ್ಯಕರ್ತರಿಗೆ ಗಾಯ


ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಚುನಾವಣೋತ್ತರ ಹಿಂಸಾಚಾರ ತೀವ್ರ ಸ್ವರೂಪ ಪಡೆಯುತ್ತಿದ್ದು, ನಿನ್ನೆ ರಾತ್ರಿ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಆಪ್ತ ಸಹಾ ಯಕನನ್ನು ಗುಂಡಿಕ್ಕಿ ಹತ್ಯೆ ಮಾಡಿದ ಕೆಲವೇ ಗಂಟೆ ಗಳಲ್ಲಿ ಉತ್ತರ 24 ಪರಗಣ ಜಿಲ್ಲೆಯ ಪನಿಹಟಿಯಲ್ಲಿ ಬಾಂಬ್ ದಾಳಿ ನಡೆಸಲಾಗಿದ್ದು, ಘಟನೆಯಲ್ಲಿ ಐವರು ಬಿಜೆಪಿ ಕಾರ್ಯ ಕರ್ತರು ಗಾಯಗೊಂಡಿದ್ದಾರೆ. ಪನಿಹಟಿಯ ಸೇಂಟ್ ಕ್ಸೇವಿ ಯರ್ಸ್ ಸಂಸ್ಥೆಯ ಬಳಿ ಬಿಜೆಪಿ ಕಾರ್ಯಕರ್ತರ ಗುಂಪಿನ ಮೇಲೆ ಕಚ್ಚಾ ಬಾಂಬ್‌ಗಳನ್ನು ಎಸೆದಿದ್ದಾರೆ. ಗಾಯಾಳುಗಳನ್ನು ಕೋಲ್ಕತ್ತಾದ ಆರ್‌ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.



ಪನಿಹತಿಯ ವಾರ್ಡ್ ಸಂಖ್ಯೆ 2ರ ದತ್ತ ರಸ್ತೆಯಲ್ಲಿ ಬಿಜೆಪಿ ಕಾರ್ಯಕರ್ತರು ಅಲ್ಲಿನ ನಿವಾಸಿಗಳೊಂದಿಗೆ ಸಂವಹನ ನಡೆಸುತ್ತಿದ್ದಾಗ, ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳ ಗುಂಪೊಂದು ನಾಡ ಬಾಂಬ್‌ಗಳನ್ನು ಎಸೆದು ಪರಾರಿಯಾಗಿದೆ. ದಾಳಿ ಕೋರರಿಗೆ ಟಿಎಂಸಿ ಬೆಂಬಲ ನೀಡಿದ್ದು, ಚುನಾವಣೆಯಲ್ಲಿ ಹೀನಾಯ ಸೋಲುಂಟಾಗಿದ್ದಕ್ಕೆ ಪ್ರತೀಕಾರವಾಗಿ ನಮ್ಮ ಕಾರ್ಯಕರ್ತರ ಮೇಲೆ ದಾಳಿ ನಡೆಸಲಾಗುತ್ತಿದೆ ಎಂದು ಬಿಜೆಪಿ ಆರೋಪಿಸಿದೆ.

ಚೀನಾದ ಮಾಜಿ ರಕ್ಷಣಾ ಸಚಿವರಿಗೆ ಮರಣದಂಡನೆ ಘೋಷಣೆ

ಬೀಜಿಂಗ್: ಭ್ರಷ್ಟಾಚಾರ ಆರೋಪಗಳಿಗೆ ಸಂಬಂಧಿಸಿ ಚೀನಾದ ಇಬ್ಬರು ಮಾಜಿ ರಕ್ಷಣಾ ಸಚಿವರಾದ ವೆಯಿ ಫೆಂಗೆ ಹಾಗೂ ಲೀ ಶಾಂಫ್‌ಫು ಅವರಿಗೆ ಎರಡು ವರ್ಷಗಳ ತಾತ್ಕಾಲಿಕ ಮುಂದೂ ಡುವಿಕೆಯೊಂದಿಗೆ ಮರಣದಂಡನೆ ಘೋಷಿಸಲಾಗಿದೆ.




ಚೀನಾದ ಸೇನಾ ನ್ಯಾಯಾಲ ಯವು ಈ ಇಬ್ಬರು ಮಾಜಿ ರಕ್ಷಣಾ ಸಚಿವರಿಗೆ ಪ್ರತ್ಯೇಕವಾಗಿ ಈ ಶಿಕ್ಷೆ ವಿಧಿಸಿದೆ. ಚೀನಾದ ಕಾನೂನು ಪ್ರಕಾರ ಅಮಾನತಿನಲ್ಲಿರಿಸಲಾದ ಮರಣ ದಂಡನೆಯಲ್ಲಿ ಆರೋಪಿಗಳು ತಕ್ಷಣವೇ ಮರಣ ದಂಡನೆಗೆ ಒಳಪಡುವುದಿಲ್ಲ. ಈ ಎರಡು ವರ್ಷಗಳ ಅವಧಿಯಲ್ಲಿ ಅವರು ಯಾವುದೇ ಗಂಭೀರ ಅಪರಾಧ ಎಸಗದೆ ಇದ್ದಲ್ಲಿ, ಶಿಕ್ಷೆಯನ್ನು ಜೀವಾವಧಿ ಶಿಕ್ಷೆಯಾಗಿ ಪರಿವರ್ತಿಸಲಾಗುತ್ತದೆ.

ವೆಯಿ ಹಾಗೂ ಅವರ ಉತ್ತರಾಧಿಕಾರಿ ಲೀ ಇಬ್ಬರೂ ಕ್ಸಿ ಜಿನ್‌ಪಿಂಗ್ ಆಡಳಿತದಲ್ಲಿ ಕಾರ್ಯನಿರ್ವಹಿಸಿದ್ದು, ಭ್ರಷ್ಟಾಚಾರ ಆರೋಪಗಳಿಗೆ ಸಂಬಂಧಿಸಿ 2024ರಲ್ಲಿ ಕಮ್ಯೂನಿಸ್ಟ್ ಪಕ್ಷದಿಂದ ಉಚ್ಚಾಟಿತರಾಗಿದ್ದರು.

ವೆಯಿ ಅವರು 2018ರಿಂದ 2023ರವರೆಗೆ ರಕ್ಷಣಾ ಸಚಿವರಾಗಿದ್ದರು. ಅವರ ಉತ್ತರಾಧಿಕಾರಿಯಾಗಿ ನೇಮಕಗೊಂಡ ಲೀ ಕೆಲವೇ ತಿಂಗಳು ಕಾರ್ಯ ನಿರ್ವಹಿಸಿದ್ದರು.

ಇಡಿ ಅಧಿಕಾರಿಗಳು ದಾಳಿ ನಡೆಸಿದಾಗ 9ನೇ ಮಹಡಿಯಿಂದ ಬಿತ್ತು ಹಣದ ಬ್ಯಾಗ್!


ಚಂಡೀಗಢ: ಜಾರಿ ನಿರ್ದೇಶನಾಲಯದ(ಇಡಿ) ದಾಳಿ ವೇಳೆ ಕಟ್ಟಡದ 9ನೇ ಮಹಡಿಯಿಂದ 500 ರೂ. ಮುಖಬೆಲೆಯ ನೋಟು ಗಳಿದ್ದ ಹಣದ ಚೀಲ ಗಳನ್ನು ಹೊರಕ್ಕೆ ಎಸೆದ ಘಟನೆ ಪಂಜಾಬ್‌ನ ಮೊಹಾಲಿ ಜಿಲ್ಲೆಯ ಖರಾರ್‌ನಲ್ಲಿ ವರದಿಯಾಗಿದೆ. ಇಡಿ ಅಧಿಕಾರಿ ಗಳು ಖರಾರ್‌ನ ವೆಸ್ಟರ್ನ್ ಟವರ್ಸ್ ವಸತಿ ಸಮು ಚ್ಚಯದ 9ನೇ ಮಹಡಿಯಲ್ಲಿರುವ ಫ್ಲಾಟ್ ನಂಬರ್ 906ಕ್ಕೆ ತಲುಪುತ್ತಿದ್ದಂತೆ ಅಲ್ಲಿಂದ ಎರಡು ಹಣದ ಚೀಲ ಗಳನ್ನು ಕಿಟಕಿಯಿಂದ ಕೆಳಕ್ಕೆ ಎಸೆಯಲಾಗಿದೆ. ಕೆಳಗೆ ಬಿದ್ದಿದ್ದ ಹಣವನ್ನು ತೆಗೆದುಕೊಂಡು ಕಾರಿನಲ್ಲಿ ಪರಾರಿಯಾಗಲು ಯತ್ನಿಸಿದ ವ್ಯಕ್ತಿಯನ್ನು ಅಧಿಕಾರಿಗಳು ಬೆನ್ನಟ್ಟಿ ಹಿಡಿದಿದ್ದಾರೆ. ಆ ಚೀಲಗಳಲ್ಲಿ ಸುಮಾರು 25 ಲಕ್ಷ ರೂ. ನಗದು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿದುಬಂದಿದೆ.



ಐಟಿ ಉದ್ಯಮಿ ಎನ್ನಲಾದ ನಿತಿನ್ ಗೋಹಲ್‌ಗೆ ಸೇರಿದ ಕಟ್ಟಡದ ಮೇಲೆ ದಾಳಿ ಮಾಡಿದ ವೇಳೆ ಈ ಘಟನೆ ನಡೆದಿದೆ. ಇವರು, ಪಂಜಾಬ್ ಸಿಎಂ ಭಗವಂತ್ ಮಾನ್ ಅವರ ವಿಶೇಷ ಕರ್ತವ್ಯಾಧಿಕಾರಿ ರಾಜಬೀರ್ ಸಿಂಗ್ ಘುಮ್ಮನ್ ಅವರ ಆಪ್ತರೆಂದು ವಿರೋಧ ಪಕ್ಷದ ನಾಯಕ ಬಿಕ್ರಮ್ ಸಿಂಗ್ ಮಜಿಥಿಯಾ ಆರೋಪಿಸಿದ್ದಾರೆ. ಪಂಜಾಬ್ ಮತ್ತು ಚಂಡೀಗಢದ ಒಟ್ಟು 12 ಸ್ಥಳಗಳಲ್ಲಿ ನಡೆದ ಬೃಹತ್ ಕಾರ್ಯಾಚರಣೆ ಭಾಗವಾಗಿ ಈ ದಾಳಿ ನಡೆದಿದೆ.


ಬೌದ್ಧ ಸನ್ಯಾಸಿಯಾಗಿ ದೀಕ್ಷೆ ಪಡೆದ 'ಗಾಬಿ ರೋಬೋಟ್'?

ದಕ್ಷಿಣ ಕೊರಿಯಾ: ಹುಮನಾಯ್ಡ್ ರೋಬೋಟ್ ಈಗ ಸೋಲ್‌ನ ಪ್ರಸಿದ್ಧ ಬೌದ್ಧ ದೇವಾಲಯ ದಲ್ಲಿ ಸನ್ಯಾಸಿಯಾಗಿ ಆಯ್ಕೆಯಾಗಿದೆ. ಇಲ್ಲಿನ ಜೋಗ್ಯೆ ದೇವಾಲಯದಲ್ಲಿ ನಡೆದ ಬೌದ್ಧ ಸಮಾರಂಭದಲ್ಲಿ ಚೀನಾದ ಯುನಿಟ್ರೀ ಜಿ1 ಹುಮನಾಯ್ಡ್ ರೋಬೋಟ್ ಪ್ಲಾಟ್‌ಫಾರ್ಮ್‌ನಲ್ಲಿ ನಿರ್ಮಿಸಲಾದ ಮಾನವನಂತಹ ದೇಹ ರಚನೆಯನ್ನು ಹೊಂದಿರುವ 130 ಸೆಂಟಿ ಮೀಟರ್ ಎತ್ತರವಿರುವ 'ಗಾಬಿ' ಹೆಸರಿನ ಹುಮನಾಯ್ಡ್ ರೋಬೋಟ್, ಬೌದ್ಧ ಧರ್ಮಗುರುಗಳಂತೆಯೇ ಸಂಪ್ರ ದಾಯಿಕ ಬೂದು ಹಾಗೂ ಕಂದು ಬಣ್ಣದ ನಿಲುವಂಗಿ ಧರಿಸಿದ್ದು, ಹಿರಿಯ ಸನ್ಯಾಸಿಗಳ ಮುಂದೆ ನಿಂತು ದೀಕ್ಷೆ ಸ್ವೀಕರಿಸಿ, ಅದರ ಪ್ರಮಾಣ ಪತ್ರ ಪಡೆದುಕೊಂಡಿದೆ. ಇದಕ್ಕೂ ಮುನ್ನ ಅಲ್ಲಿನ ಹಿರಿಯ ಸನ್ಯಾಸಿಯೊಬ್ಬರು ಬೌದ್ಧಧರ್ಮಕ್ಕೆ ತನ್ನನ್ನು ತಾನು ಅರ್ಪಿಸಿಕೊಳ್ಳಲು ಸಿದ್ಧವಾಗಿದ್ದೀಯಾ ಎಂದು ಪ್ರಶ್ನಿಸಿದಾಗ ಗಾಬಿ, ಹೌದು, ನನ್ನನ್ನು ನಾನು ಬೌದ್ಧ ಧರ್ಮಕ್ಕಾಗಿ ಅರ್ಪಿಸಿಕೊಳ್ಳುತ್ತೇನೆ ಎಂದು ಉತ್ತರಿಸಿ ನೆರೆದಿ ದ್ದವರನ್ನು ಬೆರಗುಗೊಳಿಸಿದೆ. ಬಳಿಕ ಹಿರಿಯ ಧರ್ಮಗುರು ಗಳಿಗೆ ಕೈಮುಗಿದು ನಮಸ್ಕಾರ ಮಾಡುವ ಭಂಗಿಯಲ್ಲಿ ಈ ರೋಬೋಟ್ ನಿಂತಿದ್ದು, ಧರ್ಮಗುರುಗಳು ಅದರ ಕುತ್ತಿಗೆಗೆ 108 ಮಣಿಗಳ ಜಪಮಾಲೆ ಹಾಕಿ, ಸಂಪ್ರದಾಯಿಕ ಧೂಪದ ಬದಲಾಗಿ ಅದಕ್ಕೆ ಸಾಂಕೇತಿಕ ಸ್ಟಿಕರ್ ನೀಡಲಾಗಿದೆ.



ಅನಗತ್ಯ ಶಸ್ತ್ರಚಿಕಿತ್ಸೆ; ಸಂತ್ರಸ್ತೆಗೆ 50 ಲಕ್ಷ ಪರಿಹಾರ ನೀಡಲು ಸೂಚನೆ

ಹೈದರಾಬಾದ್: ಮಹಿಳಾ ರೋಗಿಯೊಬ್ಬರಿಗೆ ಅನಗತ್ಯ ವಾಗಿ ಬೆನ್ನುಮೂಳೆಯ ಶಸ್ತ್ರಚಿಕಿತ್ಸೆ ನಡೆಸಿ ವೈದ್ಯಕೀಯ ನಿರ್ಲಕ್ಷ್ಯ ತೋರಿದ ಹಿನ್ನೆಲೆ ಯಲ್ಲಿ ಸಂತ್ರಸ್ತೆಗೆ 50 ಲಕ್ಷ ರೂ. ಪರಿಹಾರ ನೀಡುವಂತೆ ಜಿಲ್ಲಾ ಗ್ರಾಹಕ ಆಯೋಗವು ಖಾಸಗಿ ಆಸ್ಪತ್ರೆಗೆ ನಿರ್ದೇಶನ ನೀಡಿದೆ. ಆಸ್ಪತ್ರೆ ಮತ್ತು ಬೆನ್ನುಮೂಳೆ ಚಿಕಿತ್ಸೆ ಮಾಡಿದ ವೈದ್ಯರು ಜಂಟಿಯಾಗಿ ಕಾನೂನು ವೆಚ್ಚಗಳಿಗಾಗಿ ಹೆಚ್ಚುವರಿ ಯಾಗಿ 20,000 ರೂ. ಪಾವತಿಸುವಂತೆ ಆದೇಶಿಸಿದೆ.



ತೀವ್ರ ಬೆನ್ನುನೋವಿನಿಂದ ಬಳಲುತ್ತಿದ್ದ ಉದಯಪುರದ ಮಹಿಳೆ 2019ರಲ್ಲಿ ಈ ಖಾಸಗಿ ಆಸ್ಪತ್ರೆಗೆ ಭೇಟಿ ನೀಡಿದ್ದರು. ರೋಗನಿರ್ಣಯ ಪರೀಕ್ಷೆಗಳಲ್ಲಿ ಅವರಿಗೆ ಎಲ್5–ಎಸ್1 ಗ್ರೇಡ್–1 ಸ್ಪಾಂಡಿಲೊಲಿಸ್ಥೆಸಿಸ್(ಸ್ಲಿಪ್ ಡಿಸ್ಕ್) ಸಮಸ್ಯೆ ಪತ್ತೆ ಯಾಗಿತ್ತು. ಶಸ್ತ್ರಚಿಕಿತ್ಸೆಯಿಂದ ಈ ಸಮಸ್ಯೆಯನ್ನು ಸಂಪೂರ್ಣ ವಾಗಿ ಗುಣಪಡಿಸಬಹುದು ಎಂದು ವೈದ್ಯರು ಭರವಸೆ ನೀಡಿ, ಸುಮಾರು 2 ಲಕ್ಷ ರೂಪಾಯಿ ವೆಚ್ಚದ ಶಸ್ತ್ರಚಿಕಿತ್ಸೆಗೆ ಸಲಹೆ ನೀಡಿದ್ದರು. ಹಾಗೆಯೇ ಮಹಿಳೆ 2019ರ ಮೇ 16 ರಂದು ಆಸ್ಪತ್ರೆಗೆ ದಾಖಲಾಗಿದ್ದು, ಮರುದಿನ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಆದರೆ, ಶಸ್ತ್ರಚಿಕಿತ್ಸೆಯ ನಂತರ ಚೇತರಿಸಿ ಕೊಳ್ಳುವ ಬದಲು ಅವರ ಆರೋಗ್ಯ ಸ್ಥಿತಿ ತೀವ್ರವಾಗಿ ಹದಗೆಟ್ಟಿತು. ತೀವ್ರ ಬೆನ್ನು ನೋವು, ಜ್ವರ, ಮೂತ್ರನಾಳದ ಸೋಂಕು ಇನ್ನಿತರ ತೊಂದರೆಗಳಾಗಿ ದಿನನಿತ್ಯದ ಚಟು ವಟಿಕೆಗೆ ಪರಾವಲಂಬಿಯಾಗಬೇಕಾಯಿತು. ಈ ಸಂಬಂಧ ಮಹಿಳೆ ಗ್ರಾಹಕರ ಆಯೋಗಕ್ಕೆ ದೂರು ಸಲ್ಲಿಸಿದ್ದರು.

ಕಾಫಿ ತೋಟಕ್ಕೆ ನುಗ್ಗಿ ದುಷ್ಕರ್ಮಿಗಳ ದಾಂಧಲೆ

2 ಸಾವಿರಕ್ಕೂ ಹೆಚ್ಚು ಕಾಫಿ ಗಿಡಗಳು, 250 ಕಾಳು ಮೆಣಸು ಬಳ್ಳಿಗಳು ಕಡಿದು ಪರಾರಿ

ಮಡಿಕೇರಿ, ಮೇ 7– ಅಕ್ರಮವಾಗಿ ತೋಟಕ್ಕೆ ಪ್ರವೇಶಿಸಿ 2 ಸಾವಿರಕ್ಕೂ ಅಧಿಕ ಕಾಫಿ ಗಿಡಗಳು ಹಾಗೂ 250 ಕಾಳು ಮೆಣಸು ಬಳ್ಳಿಗಳನ್ನು ದುಷ್ಕರ್ಮಿಗಳು ಕಡಿದು ಹಾಕಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಬಿರುನಾಣಿ ಸಮೀಪ ಕಳಕೂರು ಗ್ರಾಮದಲ್ಲಿ ನಡೆದಿದೆ.

ಇಲ್ಲಿನ ನಿವಾಸಿ ಕುಪ್ಪಣಮಾಡ ಗೌತಮ್ ಅವರಿಗೆ ಸೇರಿದ ತೋಟದಲ್ಲಿ ಇಂತಹ ಕೃತ್ಯ ಎಸಗಲಾಗಿದ್ದು, ಮಾಲೀಕರಿಗೆ ಲಕ್ಷಾಂತರ ರೂ. ನಷ್ಟವಾಗಿದೆ. ಘಟನೆ ಕುರಿತು ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ದುಷ್ಕರ್ಮಿಗಳ ಪತ್ತೆಗಾಗಿ ಶೋಧ ನಡೆಸಲಾಗುತ್ತಿದೆ.



ದುಷ್ಕರ್ಮಿಗಳ ದಾಳಿಯಲ್ಲಿ ನಾಶವಾಗಿರುವ ಕಾಫಿ ಗಿಡಗಳು.

ಕುಪ್ಪಣಮಾಡ ಗೌತಮ್ ಅವರು 4 ಎಕರೆ ಜಾಗದಲ್ಲಿ ಹೊಸದಾಗಿ ತೋಟ ಮಾಡಿದ್ದು, 7 ವರ್ಷ ಅವಧಿಯ ಕಾಫಿ ಗಿಡಗಳು ಹಾಗೂ ಕಾಳುಮೆಣಸು ಬಳ್ಳಿಗಳನ್ನು ಬೆಳೆಸಲಾಗಿತ್ತು. ಮಾತ್ರವಲ್ಲದೇ ತೋಟದ ಫಸಲು ರಕ್ಷಣೆಗಾಗಿ ಆಯಕಟ್ಟಿನ ಸ್ಥಳಗಳಲ್ಲಿ 2 ಅತ್ಯಾಧುನಿಕ ಸಿ.ಸಿ ಕ್ಯಾಮರಾಗಳನ್ನು ಕೂಡ ಅಳವಡಿಸಿದ್ದರು. ಬೆಳೆಗಾರ ಗೌತಮ್ ಅವರು ಕುಟುಂಬ ಸಹಿತ ಮೈಸೂರಿಗೆ ಮದುವೆಗೆ ಎಂದು ತೆರಳಿದ್ದ ಸಂದರ್ಭದಲ್ಲಿ ದುಷ್ಕರ್ಮಿಗಳು ಅಕ್ರಮವಾಗಿ ತೋಟಕ್ಕೆ ಪ್ರವೇಶಿಸಿ ಕಾಫಿ ಗಿಡಗಳು ಹಾಗೂ ಕರಿಮೆಣಸು ಬಳ್ಳಿಗಳನ್ನು ಕಡಿದಿರುವುದು ಕಂಡು ಬಂದಿದೆ. ಮಾತ್ರವಲ್ಲದೇ ಸ್ಥಳದಲ್ಲಿದ್ದ ಸಿ.ಸಿ. ಕ್ಯಾಮರಾಗಳನ್ನು ಕೂಡ ಕಿತ್ತೊಯ್ದಿದ್ದಾರೆ.

ಬಹಳಷ್ಟು ಕಾಫಿ ಗಿಡಗಳನ್ನು ಮತ್ತು ಕಾಳುಮೆಣಸು ಬಳ್ಳಿಗಳನ್ನು ನೆಲ ಸಮವಾಗಿ ಕತ್ತರಿಸಲಾಗಿದೆ. ಈ ಗಿಡಗಳು ಮತ್ತು ಬಳ್ಳಿಗಳು ಮತ್ತೆ ಚಿಗುರುವ ಯಾವುದೇ ಸಾಧ್ಯತೆ ಕಂಡು ಬರುತ್ತಿಲ್ಲ. ಇರುವುದರಿಂದ ಹೊಸದಾಗಿ ತೋಟ ಮಾಡಬೇಕಾದ ಅನಿವಾರ್ಯತೆ ಎದುರಾಗಿದ್ದು, ಬೆಳೆಗಾರ ಗೌತಮ್ ಅವರಿಗೆ ಲಕ್ಷಾಂತರ ರೂಪಾಯಿಗಳ ನಷ್ಟವಾಗಿದೆ. ಮಾಹಿತಿ ಅರಿತು ಹುದಿಕೇರಿ ಕಂದಾಯ ಪರಿವೀಕ್ಷಕ ಸಂತೋಷ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಘಟನಾ ಸ್ಥಳಕ್ಕೆ ಸ್ಥಳಕ್ಕೆ ಶ್ರೀಮಂಗಲ ಪೊಲೀಸ್ ಠಾಣಾಧಿಕಾರಿ ಎ.ಎಸ್.ರವೀಂದ್ರ ಹಾಗೂ ಸಿಬ್ಬಂದಿಗಳು ಆಗಮಿಸಿ ಪರಿಶೀಲನೆ ನಡೆಸಿದರು. ದೊಡ್ಡ ಪ್ರಮಾಣದಲ್ಲಿ ಕೃಷಿ ಫಸಲನ್ನು ನಾಶ ಮಾಡಿರುವ ಕಾರಣ ದುಷ್ಕರ್ಮಿಗಳ ಪತ್ತೆಗಾಗಿ ಶ್ವಾನ ದಳವನ್ನು ಕೂಡ ಸ್ಥಳಕ್ಕೆ ಕರೆಯಿಸಿ ಆರೋಪಿಗಳ ಸುಳಿವು ಪತ್ತೆಗಾಗಿ ಕ್ರಮ ಕೈಗೊಳ್ಳಲಾಯಿತು.

ಗ್ರಾಮಸ್ಥರ ಖಂಡನೆ: ಕಾಫಿ ಗಿಡಗಳು ಮತ್ತು ಕರಿಮೆಣಸು ಬಳ್ಳಿ ಕಡಿದ ಘಟನೆ ಅರಿತ ಗ್ರಾಮಸ್ಥರು ಸ್ಥಳಕ್ಕಾಗಮಿಸಿ ಬೇಸರ ವ್ಯಕ್ತಪಡಿಸಿದರಲ್ಲದೇ, ತೀವ್ರವಾಗಿ ಖಂಡಿಸಿದರು. ಈ ದುಷ್ಕೃತ್ಯವನ್ನು ಬೆರಳೆಣಿಕೆ ಮಂದಿ ಮಾಡಲು ಸಾಧ್ಯವಿಲ್ಲ. ಕನಿಷ್ಠ ಎಂಟರಿಂದ ಹತ್ತು ಜನರು ಭಾಗಿಯಾಗಿ ಕೃತ್ಯ ಎಸಗಿರುವ ಸಾಧ್ಯತೆ ಇದೆ. ಇಂತಹ ಹೀನ ಕೃತ್ಯದಲ್ಲಿ ಪಾಲ್ಗೊಂಡವರು ಹಾಗೂ ಕುಮ್ಮಕ್ಕು ನೀಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದರು. ಪೊಲೀಸ್ ಇಲಾಖೆ ಶೀಘ್ರದಲ್ಲೇ ದುಷ್ಕರ್ಮಿಗಳನ್ನು ಪತ್ತೆ ಹಚ್ಚಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದರು.

ಶ್ವಾನದಳ ಸಿಬ್ಬಂದಿ ಶಿವ, ಪ್ರದೀಪ್, ಗ್ರಾಮಸ್ಥರಾದ ಕರ್ತಮಾಡ ನಂದಾ, ಕುಪ್ಪಾಮಾಡ ಪ್ರೀತಮ್, ಕಾಳಿಮಾಡ ರಶಿಕ, ಕಳಕಂಡ ಜೀತು ಕುಶಾಲಪ್ಪ ಕುಪ್ಪಣಮಾಡ ಜೀವನ್, ಕಾಳಿ ಮಾಡ ಸಂಪಾ, ಅಣ್ಣಳ ಮಾಡ ಗಿರೀಶ್ ಸೇರಿದಂತೆ ಮತ್ತಿತರರಿದ್ದರು.

ಜಿಲ್ಲೆಯಲ್ಲಿ 'ಗೋಲಿಗೊಂದು ಗಿಡ'



ಸುದ್ದಿಗೋಷ್ಠಿಯಲ್ಲಿ ಸಮಿತಿಯ ಪದಾಧಿಕಾರಿಗಳು ಮಾತನಾಡುತ್ತಿರುವುದು.

ಮಡಿಕೇರಿ, ಮೇ 7– ಹಾಕಿ ಕ್ರೀಡಾ ಪ್ರೇಮಿಗಳನ್ನು ತಿಂಗಳ ಕಾಲ ರಂಜಿಸಿದ ನಾಪೋಕ್ಲುವಿನ ಚೇನಂಡ ಕಪ್ ಹಾಕಿ ಉತ್ಸವದ ವೇಳೆ 'ಗೋಲಿಗೊಂದು ಗಿಡ' ಎನ್ನುವ ಚಿಂತನೆಯೊಂದಿಗೆ ಹಾಕಿ ಉತ್ಸವ ಆಯೋಜನಾ ಸಮಿತಿ ಜಿಲ್ಲೆಯ ವಿವಿಧೆಡೆಗಳಲ್ಲಿ 2200ಕ್ಕೂ ಹೆಚ್ಚಿನ ವೃಕ್ಷಾರೋಪಣ ಮಾಡುವ ಮೂಲಕ ಹಸಿರ ಪರಿಸರ ಸಂರಕ್ಷಣೆಗೆ ವಿಶಿಷ್ಟವಾದ ಕೊಡುಗೆಯನ್ನು ನೀಡಿದೆ.

ಸುದ್ದಿಗೋಷ್ಠಿಯಲ್ಲಿ ಚೇನಂಡ ಕಪ್ ಹಾಕಿ ನಮ್ಮೆಯ ಆಯೋಜನಾ ಸಮಿತಿಯ ಪದಾಧಿಕಾರಿಗಳು ಉತ್ಸವದ ಯಶಸ್ವಿ ಆಯೋಜನೆಗೆ ಸಹಕರಿಸಿದ ಸರ್ವರಿಗೂ ಕೃತಜ್ಞತೆಗಳನ್ನು ಸಲ್ಲಿಸಿ ಮಾತನಾಡಿ, ಚೇನಂಡ ಕಪ್ ಹಾಕಿ ಉತ್ಸವದಲ್ಲಿ ಪ್ರದರ್ಶನ ಪಂದ್ಯಗಳನ್ನು ಒಳಗೊಂಡಂತೆ ಒಟ್ಟು 385 ಪಂದ್ಯಗಳು ನಡೆದು 1520 ಗೋಲುಗಳು ದಾಖಲಾಗಿದೆ. ಗೋಲಿಗೊಂದು ಗಿಡ ಎನ್ನುವ ನಮ್ಮ ಪರಿಕಲ್ಪನೆಯನ್ನು ಮೀರಿ ಹೆಚ್ಚಿನ ಪ್ರಮಾಣದ ಗಿಡಗಳನ್ನು ವಿವಿಧೆಡೆಗಳಲ್ಲಿ ನೆಟ್ಟು, ಅವುಗಳ ಪೋಷಣೆಗೂ ನಿಗಾ ವಹಿಸಲಾಗಿದೆ ಎಂದು ಮಾಹಿತಿ ನೀಡಿದರು.

ಚೇನಂಡ ಕುಟುಂಬಸ್ಥರ ಗೋಮಾಳ ಜಾಗದಲ್ಲಿ ನೆಟ್ಟ ಗಿಡಗಳು ಚೆನ್ನಾಗಿ ಬೆಳೆಯುತ್ತಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದ ಅವರು, ದಕ್ಷಿಣ ಕೊಡಗಿನ ಟಿ.ಶೆಟ್ಟಿಗೇರಿ ವಿಭಾಗದಲ್ಲು ವೃಕ್ಷಾರೋಪಣ ಮಾಡಲಾಗಿದೆ ಎಂದು ತಿಳಿಸಿದರು.

ಕಾಡು ಹಣ್ಣು ಗಿಡಗಳ ರಕ್ಷಣೆ: ಚೇನಂಡ ಕಪ್ ಹಾಕಿ ಉತ್ಸವ ಸಮಿತಿ ಹಸಿರ ಪರಿಸರಕ್ಕೆ ಒತ್ತು ನೀಡುವ ಗಿಡಗಳನ್ನು ನೆಡುವ ಕಾರ್ಯಕ್ರಮದೊಂದಿಗೆ, ಕಾಡು ಜಾತಿಯ ಹಣ್ಣು ಹಂಪಲು ಗಿಡಗಳ ಸಸ್ಯಾಭಿವೃದ್ಧಿ ಮಾಡಿ, ಮತ್ತೆ ಅರಣ್ಯ ಭಾಗಗಳಲ್ಲಿ ಅವುಗಳನ್ನು ಬೆಳೆಸುವ ಚಿಂತನೆಯನ್ನು ಹೊಂದಿರುವುದಾಗಿ ತಿಳಿಸಿದರು. ಜಿಲ್ಲೆಯ ಯಾವುದೇ ಭಾಗದಲ್ಲಿರುವವರು ಅಪರೂಪದ ಕಾಡು ಜಾತಿಯ ಹಣ್ಣು ಹಂಪಲು ಗಿಡಗಳನ್ನು ಹೊಂದಿದ್ದು ಆ ಬಗ್ಗೆ ಮಾಹಿತಿ ನೀಡಿದಲ್ಲಿ ಚೇನಂಡ ಹಾಕಿ ನಮ್ಮೆ ಸಮಿತಿ ಆ ಗಿಡಗಳ ಸಸ್ಯಾಭಿವೃದ್ಧಿಗೆ ಅಗತ್ಯ ಪ್ರಯತ್ನಗಳನ್ನು ಮಾಡಲಿದೆ ಎಂದು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಪದಾಧಿಕಾರಿಗಳು ಹಾಜರಿದ್ದರು.

ಕೆಪಿಎಸ್ ಶಾಲೆಯಲ್ಲಿ 6 ಟ್ಯಾಬ್, 1 ಲ್ಯಾಪ್‌ಟಾಪ್ ಕಳವು

ಮಡಿಕೇರಿ, ಮೆ 7– ನಾಪೋಕ್ಲುವಿನ ಕೆಪಿಎಸ್ ಪ್ರಾಥಮಿಕ ಶಾಲೆಯ ಕಿಟಕಿ ಗಾಜು ಒಡೆದು ಒಳ ನುಗ್ಗಿರುವ ಕಳ್ಳರು 6 ಟ್ಯಾಬ್‌ಗಳು ಹಾಗೂ 1 ಲ್ಯಾಪ್ ಟಾಪ್ ಸೇರಿದಂತೆ ತರಗತಿ ಕೊಠಡಿಗಳ ಕೀಗಳನ್ನು ಕಳವು ಮಾಡಿದ ಘಟನೆ ನಡೆದಿದೆ.

ಶಾಲೆಯ ಮುಖ್ಯ ಶಿಕ್ಷಕಿ ನಳಿನಿ ಬೆಳಗ್ಗೆ ಶಾಲೆಗೆ ಆಗಮಿಸಿದಾಗ ಅಧ್ಯಾಪಕರ ಕೊಠಡಿ ಹಿಂಬದಿಯಿಂದ ಕಿಟಕಿಯ ಗಾಜು ಒಡೆದು ನುಗ್ಗಿ ಕಳ್ಳರು ಕಳ್ಳತನ ಮಾಡಿರುವ ಘಟನೆ ಬೆಳಕಿಗೆ ಬಂದಿದೆ. ಈ ಕುರಿತು ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಮಹಜರು ನಡೆಸಿದರು. ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭ ಶಾಲೆಯ ಎಸ್‌ಡಿಎಂಸಿ ಉಪಾಧ್ಯಕ್ಷ ಉದಯಶಂಕರ್, ಕೆಪಿಎಸ್ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕ ಶಿವಣ್ಣ ಎಂ.ಎಸ್, ಸಹಶಿಕ್ಷಕಿ ಅನುಷಾ ಸಿ.ಜೆ ಉಪಸ್ಥಿತರಿದ್ದರು.

ಮೇ 13, ಲೋಕಾಯುಕ್ತದಿಂದ ದೂರು ಅರ್ಜಿ ಸ್ವೀಕಾರ

ಮಡಿಕೇರಿ, ಮೇ 7– ಮಡಿಕೇರಿ ಲೋಕಾಯುಕ್ತ ಅಧಿಕಾರಿಗಳು ಮೇ 13 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ಪೊನ್ನಂಪೇಟೆ ತಾಲೂಕು ಕಚೇರಿ ಸಭಾಂಗಣದಲ್ಲಿ ದೂರು ಅರ್ಜಿ ಸ್ವೀಕರಿಸಲಿದ್ದಾರೆ. ಹೆಚ್ಚಿನ ವಿವರಗಳಿಗೆ ಮಡಿಕೇರಿ ಲೋಕಾಯುಕ್ತ ಪೊಲೀಸ್ ಕಚೇರಿ, ಗೌಳಿಬೀದಿ, ದೂ.ಸಂ. 08272 –295297 ಅನ್ನು ಸಂಪರ್ಕಿ ಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಹಲ್ಲೆ ಪ್ರಕರಣ: ಆರೋಪಿಗಳ ಬಂಧನ

ನಾಪೋಕ್ಲು: ಬೇತು ಗ್ರಾಮದ ಆಟೋ ಚಾಲಕ ಝಕರಿಯ ಎಂಬುವರ ಮೇಲೆ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಇಲ್ಲಿಗೆ ಸಮೀಪದ ಬೇತು ಗ್ರಾಮದ ಆಟೋ ಚಾಲಕ (ಪತ್ರಕರ್ತ) ಝಕರಿಯ ಅವರ ಮೇಲೆ ಸೋಮವಾರ ಸಂಜೆ ಹಲ್ಲೆ ನಡೆಸಿ ಪರಾರಿಯಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ.

ಸ್ಥಳೀಯ ನಿವಾಸಿ ಮಹಮ್ಮದ್ ಪಿ.ಎಂ. ಎಂಬುವರ ಪುತ್ರ ನಾಫಿ(22), ಇರ್ಫಾನ್ ಪಾಶ ಎಂಬುವರ ಪುತ್ರ ರುಮಾನ್ (21), ಇಸ್ಮಾಯಿಲ್ ಎಂಬುವರ ಪುತ್ರ ಸಿದ್ದೀಕ್ (20) ಎಂಬುವರೇ ಬಂಧಿತರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳು ಬಳಸಿದ್ದ ಒಂದು ಕಾರನ್ನು ವಶಪಡಿಸಿಕೊಳ್ಳಲಾಗಿದೆ.

ಈ ಸಂಬಂಧ ಇನ್ನೋರ್ವ ಆರೋಪಿ ಮಹಮ್ಮದ್ ಆಲಿ ತಲೆಮರೆಸಿಕೊಂಡಿದ್ದು, ಆರೋಪಿಯ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

ಮುತ್ತಣ್ಣ ನಿಧನ



ನಾಪೋಕ್ಲು: ಇಲ್ಲಿಗೆ ಸಮೀಪದ ಕೊಳಕೇರಿ ಗ್ರಾಮದ ಬೊಮ್ಮಂಜಿಕೇರಿಯ ನಿವಾಸಿ ತಟ್ಟಂಡ ನಾಣಯ್ಯ ಅವರ ಪುತ್ರ ಮನು ಮುತ್ತಣ್ಣ (40)ಬುಧವಾರ ಅನಾರೋಗ್ಯದಿಂದ ನಿಧನರಾದರು. ಮೃತರ ಅಂತ್ಯಕ್ರಿಯೆ ಗುರುವಾರ ಸ್ವ ಗ್ರಾಮದಲ್ಲಿ ಜರುಗಿತು. ಮೃತರು ತಂದೆ ತಾಯಿ ಪತ್ನಿ ಹಾಗೂ ಎರಡು ಗಂಡು ಮಕ್ಕಳನ್ನು ಅಗಲಿದ್ದಾರೆ.

ರಾಜ್ಯ ಸರ್ಕಾರದ ದುರಾಡಳಿತದಿಂದ 2809 ರೈತರ ಆತ್ಮಹತ್ಯೆ

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಿಡಿ

ಪಾಂಡವಪುರ, ಮೇ 7(ಸಿ.ಎ.ಲೋಕೇಶ್)– ರಾಜ್ಯ ಕಾಂಗ್ರೆಸ್ ಸರ್ಕಾರದ ದುರಾಡಳಿತದಿಂದ 2809 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಿಡಿಕಾರಿದರು.

ಪಟ್ಟಣದ ಪಾಂಡವ ಕ್ರೀಡಾಂಗಣದ ಮುಂಭಾಗ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ನಡೆದ ಜನರೊಂದಿಗೆ ಜನತಾದಳ ಹಾಗೂ ಜೆಡಿಎಸ್ ಪಕ್ಷದ 25ನೇ ರಜತ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹಲವು ಭರವಸೆಗಳೊಂದಿಗೆ ಅಧಿಕಾರಕ್ಕೆ ಬಂದ ರಾಜ್ಯ ಸರ್ಕಾರ ತಮ್ಮ ದುರಾಡಳಿತದಿಂದ ಜನತೆಯ ವಿಶ್ವಾಸ ಕಳೆದುಕೊಂಡಿದೆ. ರೈತ ವಿರೋಧಿ ಆಡಳಿತದಿಂದ ರಾಜ್ಯದಲ್ಲಿ ಕಳೆದ 3 ವರ್ಷದಲ್ಲಿ 2809 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ 97ಕ್ಕೂ ಅಧಿಕ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾದ ಬಳಿಕ ನಿರುದ್ಯೋಗ ನಿವಾರಣೆಗೆ ಜಿಲ್ಲೆಗೆ ಕೈಗಾರಿಕೆ ತರಲು ಸಾಕಷ್ಟು ಪ್ರಯತ್ನ ನಡೆಸಿದರೂ ರಾಜ್ಯ ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರು ಕೊಟ್ಟ ಆಡಳಿತವನ್ನು ನಾಡಿನ ಜನತೆ ಇಂದಿಗೂ ಸ್ಮರಿಸುತ್ತಿದ್ದಾರೆ. ಅವರ ಕಾಲದ ಆಡಳಿತ ರಾಮರಾಜ್ಯವಾಗಿತ್ತು ಎಂಬುದಾಗಿ ನಾಡಿನ ಜನರು ಮಾತನಾಡುತ್ತಿದ್ದಾರೆ. ಹೆಚ್.ಡಿ.ದೇವೇಗೌಡರು ಮತ್ತು ಹೆಚ್.ಡಿ.ಕುಮಾರಸ್ವಾಮಿ ಅವರು ಸದಾ ನಾಡಿನ ಜನರ ಶ್ರೇಯೋವೃದ್ಧಿ ಬಗ್ಗೆ ಚಿಂತಿಸುವ ಹೃದಯವಂತಿಕೆ ಬೆಳೆಸಿಕೊಂಡಿದ್ದಾರೆ ಎಂದು ಬಣ್ಣಿಸಿದರು.



ಪಾಂಡವಪುರಕ್ಕೆ ಆಗಮಿಸಿದ ನಿಖಿಲ್ ಕುಮಾರಸ್ವಾಮಿ ಅವರಿಗೆ ಕಾರ್ಯಕರ್ತರು ಮೋಸಂಬಿ ಹಾರ ಹಾಕಿ ಸ್ವಾಗತಿಸಿದರು.

ಕನ್ನಡ ನಾಡಿನ ಅಸ್ಮಿತೆಗಾಗಿ ಹೆಚ್.ಡಿ.ದೇವೇಗೌಡರು ಕಟ್ಟಿ ಬೆಳೆಸಿದ ಜೆಡಿಎಸ್ ಪಕ್ಷ ಯಶಸ್ವಿಯಾಗಿ 25 ವರ್ಷಗಳನ್ನು ಪೂರೈಸಿದೆ. ಜೆಡಿಎಸ್ ಪಕ್ಷ ಕೇವಲ ರಾಜಕೀಯಕ್ಕೆ ಸೀಮಿತವಾಗದೆ ರೈತರು, ಅಲ್ಪಸಂಖ್ಯಾತರು, ದಲಿತರು, ಹಿಂದುಳಿದ ವರ್ಗದ ಜನರ ಹಿತ ಕಾಪಾಡಿದೆ. ದೂರದೃಷ್ಟಿ, ಬದ್ಧತೆಯಿಂದ ಕೆಲಸ ಮಾಡಿದೆ. ನಾಡು, ನುಡಿ, ನೆಲ, ಜಲದ ಸಮಸ್ಯೆ ವಿರುದ್ಧ ಹೋರಾಟ ನಡೆಸಿದೆ. ಹೆಚ್.ಡಿ.ದೇವೇಗೌಡರಿಗೆ 93ನೇ ಇಳಿ ವಯಸ್ಸಿನಲ್ಲೂ ಹೋರಾಟದ ಕಿಚ್ಚು ಕಡಿಮೆಯಾಗಿಲ್ಲ. ರಾಜ್ಯಸಭೆಯಲ್ಲಿ ರೈತರು, ನೀರಾವರಿ ಸಮಸ್ಯೆ ವಿಚಾರವಾಗಿ ಧ್ವನಿ ಎತ್ತುವ ಕೆಲಸ ಮಾಡುತ್ತಿದ್ದಾರೆ. ಜೆಡಿಎಸ್ ಪಕ್ಷ ಕೇವಲ ಹಳೇ ಮೈಸೂರಿಗೆ ಸೀಮಿತವಾಗಿಲ್ಲ. ನಾಡಿನ ಎಲ್ಲಾ ಭಾಗದ ಜನರ ವಿಶ್ವಾಸ ಗಳಿಸುವ ಕೆಲಸ ಮಾಡುತ್ತಿದೆ ಎಂದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ನಾನೊಬ್ಬ ಜೆಡಿಎಸ್ ಪಕ್ಷದ ಕಟ್ಟಾಳು. ಹೆಚ್.ಡಿ.ದೇವೇಗೌಡರ ಗರಡಿಯಲ್ಲಿ ಬೆಳೆದು ಬಂದವನು. ಅಧಿಕಾರ ಇರಲಿ, ಇಲ್ಲದಿರಲಿ ಕೊನೆವರೆಗೂ ಜನರ ಮಧ್ಯೆ ಇದ್ದು ಜನರ ಕಷ್ಟಗಳಿಗೆ ಸ್ಪಂದಿಸಿ ಕೆಲಸ ಮಾಡುತ್ತೇನೆ ಎಂದರು.

ನಿಖಿಲ್ ಕುಮಾರಸ್ವಾಮಿ ಅವರು ರಾಜ್ಯದೆಲ್ಲೆಡೆ ಸುತ್ತಾಡಿ ಪಕ್ಷ ಸಂಘಟಿಸುತ್ತಿದ್ದು, ಎಲ್ಲೆಡೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿವೆ. ಪಕ್ಕದ ತಮಿಳುನಾಡಿನಲ್ಲಿ ಚಿತ್ರನಟ ವಿಜಯ್ ಸೃಷ್ಟಿಸಿದ ಅಲೆ ಮಾದರಿ ಮುಂದಿನ ದಿನಗಳಲ್ಲಿ ನಿಖಿಲ್ ಕುಮಾರಸ್ವಾಮಿ ಅವರ ಪರ ಅಲೆ ಸೃಷ್ಟಿಯಾಗಲಿದೆ ಎಂದು ಬಣ್ಣಿಸಿದರು.

ಬೃಹತ್ ಮೆರವಣಿಗೆ: ಕಾರ್ಯಕ್ರಮ ಹಿನ್ನೆಲೆಯಲ್ಲಿ ಪಟ್ಟಣಕ್ಕೆ ಆಗಮಿಸಿದ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರನ್ನು ಪಟ್ಟಣದ ಮಂಡ್ಯ ಸರ್ಕಲ್‌ನಲ್ಲಿ ಬೃಹತ್ ಹೂ, ಹಣ್ಣು ಹಾಗೂ ಬೆಲ್ಲದ ಹಾರ ಹಾಕುವ ಮೂಲಕ ಸಾವಿರಾರು ಯುವಕರು, ಕಾರ್ಯಕರ್ತರು ತೆರದ ವಾಹನದ ಮೆರವಣಿಗೆಯಲ್ಲಿ ವೇದಿಕೆಗೆ ಕರೆ ತಂದರು. ಮೆರವಣಿಗೆಗೆ ಹಲವು ಕಲಾ ತಂಡಗಳು ಮೆರಗು ನೀಡಿದವು. ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲರಿಗೂ ಪಾಂಡವ ಕ್ರೀಡಾಂಗಣದ ಪಕ್ಕದಲ್ಲಿ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು.

ಸಮಾರಂಭದಲ್ಲಿ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಕೃಷ್ಣಾರೆಡ್ಡಿ, ಮಾಜಿ ಸಚಿವರಾದ ಡಿ.ಸಿ.ತಮ್ಮಣ್ಣ, ಸಾ.ರಾ.ಮಹೇಶ್, ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕರಾದ ಡಾ.ಕೆ.ಅನ್ನದಾನಿ, ಜಿ.ಬಿ.ಶಿವಕುಮಾರ್, ವಿಧಾನ ಪರಿಷತ್ ಸದಸ್ಯ ಮಂಜೇಗೌಡ, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಮನ್‌ಮುಲ್ ನಿರ್ದೇಶಕರಾದ ಸಿ.ಶಿವಕುಮಾರ್, ಬಿ.ಆರ್.ರಾಮಚಂದ್ರು, ಡಾಲುರವಿ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಯುವ ಘಟಕದ ಅಧ್ಯಕ್ಷ ರವಿಕುಮಾರ್, ಮಹಿಳಾ ಘಟಕದ ಅಧ್ಯಕ್ಷೆ ಮಂಜುಳ, ಎಸ್ಸಿ ಎಸ್ಟಿ ಘಟಕದ ಅಧ್ಯಕ್ಷ ಜಯರಾಮು, ಜೆಡಿಎಸ್ ತಾಲೂಕು ಅಧ್ಯಕ್ಷ ಎಸ್.ಎ. ಮಲ್ಲೇಶ್, ಮಹಿಳಾಧ್ಯಕ್ಷೆ ಅನುಪಮ ಯೋಗೇಶ್, ನಲ್ಲಿಗೆರೆ ಬಾಲು ಸೇರಿದಂತೆ ಹಲವರಿದ್ದರು.

ಅಧಿಕ ಮತಗಳಿಂದ ಸಿ.ಎಸ್.ಪುಟ್ಟರಾಜು ಗೆಲ್ಲಿಸಿ

ಹೆಚ್.ಡಿ.ದೇವೇಗೌಡರ ಗರಡಿಯಲ್ಲಿ ಬೆಳೆದಿರುವ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಕ್ಷೇತ್ರದ ಶಾಸಕರಾದ ಬಳಿಕ ಕ್ಷೇತ್ರದ ಚಿತ್ರಣವೇ ಬದಲಾಗಿದೆ. ಹೆಚ್.ಡಿ.ದೇವೇಗೌಡರೊಟ್ಟಿಗೆ ಕಾವೇರಿ ಚಳವಳಿ ಮೂಲಕ ರಾಜಕೀಯಕ್ಕೆ ಪ್ರವೇಶಿಸಿದ ಸಿ.ಎಸ್.ಪುಟ್ಟರಾಜು ಶಾಸಕ, ಸಚಿವರಾಗಿ ಕ್ಷೇತ್ರವನ್ನು ಮಾದರಿಯಾಗಿ ಅಭಿವೃದ್ಧಿ ಪಡಿಸಿದ್ದಾರೆ. ಸಣ್ಣ ನೀರಾವರಿ ಸಚಿವರಾಗಿ ಕ್ಷೇತ್ರದಲ್ಲಿ ಜಾರಿಗೊಳಿಸಿದ ನೀರಾವರಿ ಯೋಜನೆಗಳು ಜನರ ಮನಸ್ಸಲ್ಲಿ ನೆಲೆಯೂರಿದೆ. ಸಿ.ಎಸ್.ಪುಟ್ಟರಾಜು ಮತ್ತು ಹೆಚ್.ಡಿ.ದೇವೇಗೌಡರ ಕುಟುಂಬದ್ದು ಕೇವಲ ರಾಜಕೀಯ ಸಂಬಂಧವಲ್ಲ. ಅದರ ಹೊರತಾಗಿ ಗಟ್ಟಿಯಾಗಿ ನೆಲೆಯೂರಿಸುವ ಸಂಬಂಧವಾಗಿದೆ. ಈ ಸಂಬಂಧಕ್ಕೆ ಯಾವುದೇ ಬೆಲೆಕಟ್ಟಲು ಸಾಧ್ಯವಿಲ್ಲ. ಇಂತಹ ಒಬ್ಬ ಜನನಾಯಕರಾದ ಸಿ.ಎಸ್.ಪುಟ್ಟರಾಜು ಅವರನ್ನು ಮುಂದಿನ 2028ರ ಚುನಾವಣೆಯಲ್ಲಿ ಕ್ಷೇತ್ರದ ಮತದಾರರು ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸುವ ಮೂಲಕ ಮತ್ತೊಮ್ಮೆ ಸಚಿವರಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಬೇಕು.– ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ.

ಅರ್ಜಿ ಆಹ್ವಾನ

ಮಂಡ್ಯ: ಮದ್ದೂರು ತಾಲೂಕಿನ ಸೋಮನಹಳ್ಳಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ 2026–2027ನೇ ಶೈಕ್ಷಣಿಕ ಸಾಲಿಗೆ 100% ಉದ್ಯೋಗಾವಕಾಶವುಳ್ಳ ಡಿಪ್ಲೋಮಾ, ಇನ್‌ಟೂಲ್ ಅಂಡ್ ಡೈ ಮೇಕಿಂಗ್, ಡಿಪ್ಲೋಮಾ ಇನ್ ಎಲೆಕ್ಟ್ರಿಕಲ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಮತ್ತು ಡಿಪ್ಲೋಮಾ ಇನ್ ಆಟೋಮೇಷನ್ ಅಂಡ್ ರೋಬೋಟಿಕ್ಸ್ ಕೋರ್ಸ್‌ಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಮೇ 10 ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಎಸ್‌ಎಸ್‌ಎಲ್‌ಸಿ, ಐಟಿಐ, ಪಿಯುಸಿ ಉತ್ತೀರ್ಣರಾದವರು ಲ್ಯಾಟರಲ್ ಎಂಟ್ರಿ ಮೂಲಕ ದ್ವಿತೀಯ ವರ್ಷಕ್ಕೆ (2+1 ವರ್ಷ) ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗೆ ಪ್ರಾಂಶುಪಾಲ ಡಾ.ಕೆ.ಮದನ್ ಮೊ: 9964679968 ಅನ್ನು ಸಂಪರ್ಕಿಸಬಹುದು ಎಂದು ಮದ್ದೂರು ತಾಲೂಕಿನ ಸೋಮನಹಳ್ಳಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಬೇತಿ ಕೇಂದ್ರದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಕಸ್ಮಿಕ ಬೆಂಕಿ: ರಾಗಿ ಹುಲ್ಲಿನ ಮೆದೆ ಭಸ್ಮ

ನಾಗಮಂಗಲ, ಮೇ 7– ಆಕಸ್ಮಿಕ ಬೆಂಕಿಗೆ ರಾಗಿ ಹುಲ್ಲಿನ ಮೆದೆ ಸಂಪೂರ್ಣ ಭಸ್ಮವಾಗಿರುವ ಘಟನೆ ಗುರುವಾರ ಸಂಜೆ ಪಟ್ಟಣದಲ್ಲಿ ನಡೆದಿದೆ.

ಪಟ್ಟಣದ ಬ್ರಾಹ್ಮಣ ಸಮುದಾಯ ಭವನ ಬಳಿಯ ಚಂದ್ರಶೇಖರ್ ಅವರಿಗೆ ಸೇರಿದ ರಾಗಿ ಹುಲ್ಲಿನ ಮೆದೆ ಬೆಂಕಿಗೆ ಭಸ್ಮವಾಗಿದೆ. ಇದರಿಂದ ಸುಮಾರು 1.6 ಲಕ್ಷ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಸತತ 3 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಈ ವೇಳೆ ಪ್ರಭಾರ ಅಗ್ನಿಶಾಮಕ ಅಧಿಕಾರಿ ಮಂಜುನಾಥ್, ಪ್ರಮುಖ ಅಗ್ನಿಶಾಮಕ ಜಗದೀಶ್, ಅಗ್ನಿಶಾಮಕ ಪ್ರಜ್ವಲ್ ಉಪ್ಪಾರ, ಚಾಲಕ ಪ್ರಭುಲಿಂಗ ಜೋಗಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.



ಐದು ತಿಂಗಳಿಂದ ಬಾರದ ವೇತನ

ನೀರು ಸ್ಥಗಿತಗೊಳಿಸಿ ಪ್ರತಿಭಟನೆ

ಕೊಳ್ಳೇಗಾಲ ವಾಟರ್ ಮ್ಯಾನ್‌ಗಳ ಎಚ್ಚರಿಕೆ



ಕೊಳ್ಳೇಗಾಲದ ವಾಟರ್ ಮ್ಯಾನ್‌ಗಳು ಸಭೆ ನಡೆಸಿ ತಮಗೆ ಸಂಬಳ ನೀಡದಿದ್ದರೆ ನೀರು ನಿಲ್ಲಿಸುವುದಾಗಿ ಎಚ್ಚರಿಕೆ ನೀಡಿದರು.

ಕೊಳ್ಳೇಗಾಲ, ಮೇ 7– ನೀರು ಸರಬರಾಜು ಹೊರಗುತ್ತಿಗೆ ನೌಕರರಿಗೆ ಐದು ತಿಂಗಳಿಂದ ವೇತನ ಪಾವತಿಸದ ಹಿನ್ನೆಲೆಯಲ್ಲಿ ಬೇಸತ್ತು ಶೀಘ್ರದಲ್ಲೇ ನೀರು ಪೂರೈಕೆ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಲು ನಿರ್ಣಯ ಕೈಗೊಳ್ಳಲಾಗಿದೆ.

ಶೀಘ್ರದಲ್ಲೆ ಇನ್ನೆರಡು ದಿನದಲ್ಲಿ ವೇತನ ಮಂಜೂರು ಮಾಡದ್ದಿದರೆ ನೀರು ಸರಬರಾಜು ಸ್ಥಗಿತಗೊಳಿಸಲಾಗುವುದು ಎಂದು ಅಧ್ಯಕ್ಷ ಪುಟ್ಟಮಾದು ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದ ಡಾ.ರಾಜಕುಮಾರ್ ರಸ್ತೆಯ ನೀರು ಶುದ್ಧೀಕರಣ ಘಟಕದ ಮುಂದೆ ನೀರು ಸರಬರಾಜು ಹೊರಗುತ್ತಿಗೆ ನೌಕರರು ಸಭೆ ನಡೆಸಿ ಸರ್ವಾನುಮತದಿಂದ ಈ ತೀರ್ಮಾನ ಕೈಗೊಂಡಿರುವುದರಿಂದ ನಗರಸಭೆ ವ್ಯಾಪ್ತಿಯ ಜನರು ನಮ್ಮ ಜೊತೆ ಸಹಕರಿಸಬೇಕು. ಐದು ತಿಂಗಳಿಂದ ನಮಗೆ ವೇತನ ನೀಡಿಲ್ಲ. ಈ ಹಿನ್ನೆಲೆಯಲ್ಲಿ ನಾವು ಸಂಕಷ್ಟಕ್ಕಿಡಾಗಿದ್ದೇವೆ. ಪ್ರತಿಭಟನೆ ಅನಿವಾರ್ಯ ಎಂದರಲ್ಲದೆ ಕಳೆದ ಐದಾರು ತಿಂಗಳಿಂದ ನೀರು ಸರಬರಾಜು ಮಾಡುವ ಎಲ್ಲಾ ನೌಕರರಿಗೆ ವೇತನ ಕೇಳಿದರೂ ಪೌರಾಯುಕ್ತರು ಸ್ಪಂದಿಸುತ್ತಿಲ್ಲ. ಆದ್ದರಿಂದ ಶುಕ್ರವಾರದಿಂದ ನಗರಸಭೆ ವ್ಯಾಪ್ತಿಯಲ್ಲಿ ನೀರು ಸರಬರಾಜು ಮಾಡುವುದಿಲ್ಲ. ನಗರಸಭೆ ಆಡಳಿತಾಧಿಕಾರಿಗಳು ಜನಪ್ರತಿನಿಧಿಗಳು ಕೂಡಲೇ ಮಧ್ಯೆ ಪ್ರವೇಶಿಸಿ ಎಲ್ಲಾ ವಾಟರ್ ಮ್ಯಾನ್‌ಗಳಿಗೆ ಬಾಕಿ ವೇತನ ಕೊಡಿಸಬೇಕು ಹಾಗೂ ಮುಂದಿನ ದಿನಗಳಲ್ಲಿ ಪ್ರತಿ ತಿಂಗಳು ವೇತನ ಸಿಗುವಂತೆ ನೋಡಿಕೊಳ್ಳುವ ಮೂಲಕ ನಮ್ಮ ಸಂಕಷ್ಟಕ್ಕೆ ಸ್ಪಂದಿಸುವಂತಾಗಬೇಕು, ಇಲ್ಲವಾದಲ್ಲಿ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ನೀರು ಸರಬರಾಜು ಹೊರಗುತ್ತಿಗೆ ಪೌರನೌಕರರ ಸಂಘ, ಉಪಾಧ್ಯಕ್ಷ ಬಸವರಾಜು, ಖಜಾಂಚಿ ಸುರೇಶ್, ಸೋಮಣ್ಣ, ಕೃಷ್ಣಸ್ವಾಮಿ, ನವೀನ್, ಶ್ರೀನಿವಾಸ್, ಮಹದೇವ ಇನ್ನಿತರಿದ್ದರು.

ಗುಂಡ್ಲುಪೇಟೆ ಪುರಸಭೆ: ಪ್ರೋತ್ಸಾಹಧನ, ಪೋಷಣಾ ಭತ್ಯೆಗಾಗಿ ಅರ್ಜಿ ಆಹ್ವಾನ

ಚಾಮರಾಜನಗರ, ಮೇ 7– ಗುಂಡ್ಲುಪೇಟೆ ಪುರಸಭೆ ನಿಧಿಯಡಿ 2026–27ನೇ ಸಾಲಿನ ಶೇ. 24.10, ಶೇ.7.25 ಹಾಗೂ ಶೇ.5ರ ಯೋಜನೆಯ ಅನುದಾನದಲ್ಲಿ ಪದವಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಹಾಗೂ ವಿಶೇಷ ಚೇತನರಿಗೆ ಪೋಷಣಾ ಭತ್ಯೆ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದ ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಬಿಇ, ಎಂಬಿಬಿಎಸ್, ಬಿಡಿಎಸ್, ಬಿಎಸ್‌ಸಿ, ಪದವಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಮತ್ತು ವಿಶೇಷಚೇತನರಿಗೆ ನೀಡಲಾಗುವ ಪೋಷಣಾ ಭತ್ಯೆಗೆ ಪುರಸಭೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಅರ್ಹ ಬಡ ಕುಟುಂಬಗಳು ಅರ್ಜಿ ಸಲ್ಲಿಸಬಹುದು.

ಅರ್ಜಿದಾರರು 2 ಭಾವಚಿತ್ರ, ಅಂಕಪಟ್ಟಿ, ವರಮಾನ ಮತ್ತು ಜಾತಿ ಪ್ರಮಾಣ ಪತ್ರ ರೇಷನ್ ಕಾರ್ಡ್, ಕಾಲೇಜಿನಿಂದ ದೃಢೀಕರಣ ಪತ್ರ, ಬ್ಯಾಂಕ್ ಪಾಸ್ ಪುಸ್ತಕ ಜೆರಾಕ್ಸ್ ಪ್ರತಿ ಸಲ್ಲಿಸುವುದು.

ಮಹಿಳಾ ಹೊಲಿಗೆ ಉಚಿತ ತರಬೇತಿಗೆ ಅರ್ಜಿ ಆಹ್ವಾನ

ಚಾಮರಾಜನಗರ, ಮೇ 7– ಎಸ್.ಬಿ.ಐ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ವತಿಯಿಂದ ಗ್ರಾಮೀಣ ಭಾಗದ ನಿರುದ್ಯೋಗ ಯುವಕ, ಯುವತಿಯರಿಗೆ ಊಟ–ವಸತಿ ಗಳೊಂದಿಗೆ ಉಚಿತವಾಗಿ ಮಹಿಳಾ ಹೊಲಿಗೆ ತರಬೇತಿ ನೀಡಲಿದ್ದು, ಯುವಕ ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಮೇ 11 ರಂದು ತರಬೇತಿ ಪ್ರಾರಂಭವಾಗಲಿದ್ದು, 31 ದಿನಗಳ ಕಾಲ ತರಬೇತಿ ನೀಡಲಾಗುವುದು. ಅಭ್ಯರ್ಥಿಗಳು 18 ರಿಂದ 45 ವರ್ಷದೊಳಗಿನವರಾಗಿರಬೇಕು. ತರಬೇತಿಗೆ ಬರುವಾಗ ಆಧಾರ್ ಕಾರ್ಡ್, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ, ಬ್ಯಾಂಕ್ ಪಾಸ್ ಪುಸ್ತಕ, ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ನಕಲು ಪ್ರತಿ ಮತ್ತು 4 ಭಾವಚಿತ್ರಗಳನ್ನು ತರಬೇಕು.

ಸಮಾಜ ಕಲ್ಯಾಣ ಇಲಾಖೆಯ ಹಾಸ್ಟಲ್ ಕೃಷ್ಣಹ ಎಸ್.ಬಿ.ಐ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ 96060 98878, 8722483393, 7676291416 ಸಂಪರ್ಕಿಸುವಂತೆ ಕೋರಲಾಗಿದೆ.

ರೈತರ ಜಮೀನಿಗೆ ತೆರಳುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ

ಚಾಮರಾಜನಗರ, ಮೇ 7– ತಾಲೂಕಿನ ಪುಟ್ಟನಪುರ ಗ್ರಾಮದ ಸಮೀಪ ಕಾವೇರಿ ಜಲಾನಯನ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರದ ಅನುದಾನ 1.55 ಕೋಟಿ ರೂ. ವೆಚ್ಚದಲ್ಲಿ ಕಾಡಾವ್ಯಾಪ್ತಿಯ ವಿವಿಧ ಗ್ರಾಮಗಳ ರೈತರ ಜಮೀನುಗಳಿಗೆ ತೆರಳುವ ಅಚ್ಚುಕಟ್ಟು ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಇದೇ ವೇಳೆ ಅವರು ಮಾತನಾಡಿ, ಹೆಬ್ಬಸೂರು ಗ್ರಾಮದಿಂದ ಸೀರಹಳ್ಳದ ಮೂಲಕ ದೊಳ್ಳಪುರ, ಬ್ಯಾಡಮೂಡ್ಲು, ಸಿದ್ದಯ್ಯನಪುರ ಮತ್ತು ಹೊಂಗಲವಾಡಿ ಗ್ರಾಮಗಳ ಸಂಪರ್ಕ ಮಾಡುವ ಆಯಕಟ್ಟು ರಸ್ತೆ, ಚಂದುಕಟ್ಟೆ ಮೋಳೆಯಿಂದ ಗಣೇಶ ಅವರ ಜಮೀನು ಆಯಕಟ್ಟು ರಸ್ತೆ, ಪುಟ್ಟನಪುರ ಗ್ರಾಮ ರಂಗಸ್ವಾಮಿ ಗೌಡರ್ (ಮಣಿಗೌಡರ) ಜಮೀನಿನಿಂದ ಹೊಂಡರಬಾಳು ಕೆರೆ ಕೋಡಿವರೆಗೆ ಆಯಕಟ್ಟು ರಸ್ತೆ, ಸಿದ್ಧಯ್ಯನಪುರ–ಅಟ್ಟುಗೂಳಿಪುರ ರಸ್ತೆ ತನ್ನೂರು ಕೋಟೆ ವೆಂಕಟಯ್ಯನ ಮನೆಗೆ ಹಾಗೂ ಸಿದ್ದಯ್ಯನಪುರ ರಸ್ತೆಯಿಂದ ಕಲ್ಲಕಟ್ಟೆ ಹೊಳೆಗೆ ಹೋಗುವ ರಸ್ತೆ, ಅಮ್ಮನಪುರ ಗ್ರಾಮದ ರೇಚಯ್ಯರವರ ಜಮೀನಿನಿಂದ ಮಲ್ಲೇಶ್ ಜಮೀನಿನವರೆಗೆ, ಕುಂಬೇಶ್ವರ ಕಾಲೋನಿ ಗ್ರಾಮದಿಂದ ಸುವರ್ಣಾವತಿ ನದಿಗೆ ಹೋಗುವ ರಸ್ತೆಗಳನ್ನು ಕಾಡಾ ಅನುದಾನದಿಂದ ನಿರ್ಮಿಸಲಾಗುತ್ತಿದೆ. ಈ ಭಾಗದ ರೈತರು ಮುಂದೆ ನಿಂತು ಗುಣಮಟ್ಟದ ರಸ್ತೆ ನಿರ್ಮಿಸಿಕೊಳ್ಳುವಂತೆ ಸಲಹೆ ನೀಡಿದರು.



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಎಪಿಎಂಸಿ ಸದಸ್ಯ ಎ.ಎಸ್. ಪ್ರದೀಪ್, ರಾಮಸಮುದ್ರ ಪಾಪಯ್ಯ, ಅಯ್ಯನಪುರಶಿವಕುಮಾರ್, ನಾಗವಳ್ಳಿ ನಾಗಯ್ಯ, ಮಹದೇವಸ್ವಾಮಿ, ಅಶೋಕ್ ಎಇಇ ಗಣೇಶ್, ರೈತರು, ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

ಜೂ. 6, ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಐಕ್ಯತಾ ಸಮಾವೇಶ

ಚಾಮರಾಜನಗರ: ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಮನ್ವಯ ಸಮಿತಿಯು 6ನೇ ರಾಜ್ಯ ಮಟ್ಟದ ಐಕ್ಯತಾ ಬೃಹತ್ ಸಮಾವೇಶವನ್ನು ಜೂ. 6ರಂದು ಬೆಂಗಳೂರಿನಲ್ಲಿ ಆಯೋಜಿಸಿದೆ ಎಂದು ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ಎಸ್.ವಿಜಯ ಕುಮಾರ್ ತಿಳಿಸಿದರು.

ನಗರದ ನ್ಯಾಯಾಲಯದ ರಸ್ತೆಯಲ್ಲಿರುವ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಚೇರಿಯ ಸಭಾಂಗಣದಲ್ಲಿ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಮನ್ವಯ ಸಮಿತಿಯು ಐಕ್ಯತಾ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಮನ್ವಯ ಸಮಿತಿಯು 6ನೇ ರಾಜ್ಯ ಮಟ್ಟದ ಐಕ್ಯತಾ ಬೃಹತ್ ಸಮಾವೇಶ ಆಯೋಜಿಸಲಾಗಿದೆ ಎಂದರು.

ಐಕ್ಯತಾ ಸಮಾವೇಶವನ್ನು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಗೃಹ ಸಚಿವರಾದ ಜಿ.ಪರಮೇಶ್ವರ್ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಸಚಿವರಾದ ಸತೀಶ್ ಜಾರಕಿಹೊಳಿ, ಕೆ.ಎಚ್. ಮುನಿಯಪ್ಪ, ಶಿವರಾಜ್ ತಂಗಡಗಿ, ಪ್ರಿಯಾಂಕ ಖರ್ಗೆ, ಹೆಚ್.ಸಿ.ಮಹದೇವಪ್ಪ ಭಾಗವಹಿಸಲಿದ್ದಾರೆ.

ಸಮಾರೋಪ ಸಮಾರಂಭದಲ್ಲಿ ವಿರೋಧ ಪಕ್ಷದ ನಾಯಕರು ಭಾಗವಹಿಸಲಿದ್ದಾರೆ' ಎಂದರು. ವಿಚಾರ ಸಂಕಿರಣದಲ್ಲಿ ವಿವಿಧ ಇಲಾಖೆಯ ಐಎಎಸ್ ಅಧಿಕಾರಿಗಳು ವಿಚಾರ ಮಂಡಿಸಲಿದ್ದಾರೆ. ಅಂದು ದಿನ ಪೂರ್ತಿ ಕಾರ್ಯಕ್ರಮ ನಡೆಯುತ್ತದೆ ಎಂದು ಅವರು ವಿವರಿಸಿದರು.

ಗುರುಸ್ವಾಮಪ್ಪ ನಿಧನ

ಚಾಮರಾಜನಗರ, ಮೇ 7– ತಾಲೂಕಿನ ಹರವೆ ಗ್ರಾಮದ ನಿವಾಸಿ ಗೌಡಿಕೆ ಗುರುಸ್ವಾಮಪ್ಪ(95) ಅನಾರೋಗ್ಯದಿಂದ ನಿಧನರಾದರು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು.ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಸ್ವಗ್ರಾಮದ ತೋಟದ ಜಮೀನಿನಲ್ಲಿ ನೆರವೇರಿತು.



ರಾಧೆಯ ಗುಂಗಲ್ಲಿ ಗಣೇಶ್ 'ಬೃಂದಾವಿಹಾರಿ...'

ಕೃಷ್ಣಂ ಪ್ರಣಯಸಖಿ' ನಂತರ ಗೋಲ್ಡನ್‌ಸ್ಟಾರ್ ಗಣೇಶ್ ನಟಿಸಿರುವ 'ಬೃಂದಾವಿಹಾರಿ' ಚಿತ್ರದ ರಾಧಾ ರಾಧಾ ಹಾಡು ಇತ್ತೀಚೆಗೆ ತುಮಕೂರಲ್ಲಿ ಬಿಡುಗಡೆಯಾಯಿತು. ಸಮೃದ್ಧಿ ಮಂಜುನಾಥ್ ನಿರ್ಮಾಣದ ಈ ಚಿತ್ರಕ್ಕೆ ಶ್ರೀನಿವಾಸರಾಜು ಆ್ಯಕ್ಷನ್‌ಕಟ್ ಹೇಳಿದ್ದಾರೆ. ಡಾ॥ವಿ.ನಾಗೇಂದ್ರಪ್ರಸಾದ್ ಅವರ ಸಾಹಿತ್ಯ, ಹೇಶಮ್ ಅಬ್ದುಲ್ ವಹಾಬ್ ಅವರ ಸಂಗೀತ ಸಂಯೋಜನೆ ಇರುವ ಈ ಹಾಡಿಗೆ ಸಿದ್‌ಶ್ರೀರಾಮ್ ಹಾಗೂ ಚಿನ್ಮಯಿ ದನಿಯಾಗಿದ್ದಾರೆ. ನಾಯಕ ಗಣೇಶ್ ಮತ್ತು ದೇವಿಕಾಭಟ್ ಈ ಹಾಡಿಗೆ ಹೆಜ್ಜೆ ಹಾಕಿದ್ದಾರೆ,

ಗಣೇಶ್ ಮಾತನಾಡುತ್ತ ನಾನು ಚಿಕ್ಕವನಿದ್ದಾಗ ಆಗಾಗ ತುಮಕೂರಿಗೆ ಬರುತ್ತಿದ್ದೆ. ಈಗ ನನ್ನ ಚಿತ್ರದ ಹಾಡು ಇಲ್ಲೇ ಬಿಡುಗಡೆಯಾಗಿದ್ದು ಬಹಳ ಖುಷಿಯಾಗಿದೆ. ಚಿತ್ರರಂಗದಲ್ಲಿ ಕಲಾವಿದನಾಗಿ ಇಪ್ಪತ್ತು ವರ್ಷ ಪೂರೈಸಿದ್ದೇನೆ, ನನ್ನ ಈ ಯಶಸ್ಸನ್ನು ಅಭಿಮಾನಿಗಳಿಗೆ ಅರ್ಪಿಸುತ್ತೇನೆ. ಅವರಿಂದಲೇ ಇದು ಸಾಧ್ಯವಾಗಿದ್ದು. ಉದಯ ಟಿವಿಯ ಕಾಮಿಡಿ ಟೈಮ್ ಕಾರ್ಯಕ್ರಮವೇ ನನ್ನನ್ನು ಚಿತ್ರರಂಗಕ್ಕೆ ಕರೆತಂದಿದ್ದು. ಬೃಂದಾವಿಹಾರಿ ಚಿತ್ರದ ಮೊದಲಹಾಡು ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದೆ. ಈ ಹಾಡು ಕೂಡ ನಿಮಗೆ ಇಷ್ಟವಾಗುತ್ತದೆ ಎಂದರು. ನಿರ್ದೇಶಕ ಶ್ರೀನಿವಾಸರಾಜು ಮಾತನಾಡುತ್ತ ಬೃಂದಾವಿಹಾರಿ ಚಿತ್ರದಲ್ಲಿ ಏಳು ಹಾಡುಗಳಿವೆ. ಉಳಿದ ಹಾಡುಗಳನ್ನು ಸದ್ಯದಲ್ಲೇ ಬಿಡುಗಡೆ ಮಾಡಲಿದ್ದೇವೆ ಎಂದರು. ನಿರ್ಮಾಪಕ ಸಮೃದ್ಧಿ ಮಂಜುನಾಥ್ ಮಾತನಾಡುತ್ತ ಬೃಂದಾವಿಹಾರಿ ನಮ್ಮ ಬ್ಯಾನರ್‌ನ ನಾಲ್ಕನೇ ಚಿತ್ರ, ತುಂಬಾ ಚೆನ್ನಾಗಿ ಮೂಡಿಬರುತ್ತಿದೆ ಎಂದು ಹೇಳಿದರು.

ವಿರಾಟ್‌ಸಾಯಿ ಕ್ರಿಯೇಷನ್ಸ್ ಅರ್ಪಿಸುವ ಈ ಚಿತ್ರಕ್ಕೆ ಶ್ರೀನಿವಾಸರಾಜು ಕಥೆ, ಚಿತ್ರಕಥೆ ಬರೆದಿದ್ದಾರೆ. ಹೇಶಮ್ ಅಬ್ದುಲ್ ವಹಾಬ್ ಅವರ ಸಂಗೀತ ಹಾಗೂ ವೆಂಕಟ್‌ಪ್ರಸಾದ್ ಛಾಯಾಗ್ರಹಣವಿದ್ದು, ಗಣೇಶ್ ಜತೆ ದೇವಿಕಾಭಟ್ ಹಾಗೂ ಮಾಳವಿಕ ಶರ್ಮ ನಾಯಕಿಯರಾಗಿ ಅಭಿನಯಿಸಿದ್ದಾರೆ.



'ಮದನಿಕಾ' ಚಿತ್ರದ ಹಾಡಲ್ಲಿ ರಾಗಿಣಿ ಮದನಾರಿ

400 ವರ್ಷಗಳ ಹಿಂದೆ ನಡೆದ ಕಥೆಯೊಂದನ್ನು ಈಗಿನ ಜನರೇಶನ್‌ಗೆ ಲಿಂಕ್ ಮಾಡಿ ನಿರ್ದೇಶಕ ಬಿಎಸ್. ಸಂಜಯ್ ಅವರು 'ಮದನಿಕಾ' ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ತುಪ್ಪದಬೆಡಗಿ ರಾಗಿಣಿ ದ್ವಿವೇದಿ ಈ ಚಿತ್ರದಲ್ಲಿ ಮೊದಲಬಾರಿಗೆ ರಾಜ ಮಹಾರಾಜರ ಕಾಲದ ಮದನಾರಿಯಾಗಿ ಮಿಂಚಿದ್ದಾರೆ. ಇತ್ತೀಚೆಗೆ ಚಿತ್ರದ ಟ್ರೈಲರ್ ಬಿಡುಗಡೆಯಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ಸಂಜಯ್, ನಾನು ಹಾಗೂ ದೇವಾನಂದ್ ಸೇರಿ 400 ವರ್ಷಗಳ ಹಿಂದೆ ನಡೆದ ಕಥೆಯನ್ನು ಫ್ಲ್ಯಾಷ್‌ಬ್ಯಾಕ್ ಆಗಿಟ್ಟುಕೊಂಡು ಒಂದು ಅದ್ಭುತವಾದ ಪ್ರೇಮಕಥೆಯನ್ನು ರೆಡಿ ಮಾಡಿಕೊಂಡೆವು. ನನಗೆ ಗೊತ್ತಿಲ್ಲದಂತೆ ಈ ಸಿನಿಮಾ ಮಾಡುವಾಗ ಒಂದಷ್ಟು ಘಟನೆಗಳು ನಡೆದವು. 25ರಿಂದ 30 ದಿನಗಳ ಕಾಲ ಚಿತ್ರದ ಶೂಟಿಂಗ್ ಮಾಡಿದೆವು. ರಾಗಿಣಿ ಅವರು ಈ ಕಥೆಕೇಳಿ ಇಷ್ಟಪಟ್ಟು ಅದ್ಭುತವಾಗಿ ಪಾತ್ರ ನಿರ್ವಹಿಸಿದ್ದಾರೆ. ಅವರನ್ನು ಕ್ಲಾಸಿಕಲ್ ಕ್ವೀನ್ ಅನ್ನಬಹುದು. ಸಿನಿಮಾದಲ್ಲಿ ಹತ್ತು ಹಾಡುಗಳ ಜತೆ ಒಂದೊಳ್ಳೇ ಎಮೋಷನ್ಸ್ ಇದೆ, ಹಿಂದಿನ ಕಥೆಯಲ್ಲಿ ಹಳಗನ್ನಡ ಬಳಸಿದ್ದೇವೆ, ರಾಗಿಣಿ ಮದನಿಕಾ ಪಾತ್ರದಲ್ಲಿ ನಟಿಸಿದ್ದಾರೆ ಎಂದರು.

ರಾಗಿಣಿ ದ್ವಿವೇದಿ ಮಾತನಾಡಿ, ಈ ಸಿನಿಮಾ ಮೇಲೆ ನನಗೆ ತುಂಬಾ ನಿರೀಕ್ಷೆಯಿದೆ. ಸುಮಾರು ಎರಡೂವರೆ ವರ್ಷದ ಜರ್ನಿಯಿದು. ಈಗಿನ ಟೆಕ್ನಾಲಜಿ, ಮೇಕಿಂಗ್, ಮ್ಯೂಸಿಕ್ ಎಲ್ಲವೂ ಬದಲಾಗಿದೆ. ಇಷ್ಟೊಂದು ಬದಲಾವಣೆಯಾಗುತ್ತೆ ಅಂತ ನಾವೂ ಅಂದ್ಕೊಂಡಿರಲಿಲ್ಲ, ಆದರೆ ನಮ್ಮ ಭಾವನೆಗಳು ಮಾತ್ರ ಬದಲಾಗಿಲ್ಲ. ಮಿಕ್ಸ್ಡ್ ಎಮೋಶನ್ಸ್ ಈ ಸಿನಿಮಾದಲ್ಲಿದೆ. ಅದ್ಭುತವಾದ ಆಕ್ಷನ್ ಸೀಕ್ವೆನ್ಸ್, ಮ್ಯೂಸಿಕ್ ಎಲ್ಲವೂ ಈ ಚಿತ್ರದಲ್ಲಿದೆ ಎಂದು ಮದನಿಕಾ ವಿಶೇಷತೆಗಳನ್ನು ವಿವರಿಸಿದರು. ಧರ್ಮ ಕೀರ್ತಿರಾಜ್, ಹರೀಶ್‌ರಾಜ್, ಅಶ್ವಿನ್, ರಾಜ್ವಿ ಹೀಗೆ ಸಾಕಷ್ಟು ಕಲಾವಿದರು ಚಿತ್ರದಲ್ಲಿ ನಟಿಸಿದ್ದಾರೆ. ಜೂನ್‌ನಲ್ಲಿ ಸಿನಿಮಾ ರಿಲೀಸ್ ಮಾಡಲು ನಿರ್ಮಾಪಕ ಸಂಜಯ್ ಸಿದ್ದತೆ ಮಾಡಿಕೊಳ್ಳುತ್ತಿದ್ದಾರೆ.


ಸಂಕಷ್ಟದಲ್ಲೂ ಅರಳಿದ ಪ್ರೇಮಕಥೆ 'ಲಾಕ್‌ಡೌನ್'




ಕೋವಿಡ್‌ನಿಂದಾಗಿ ದೇಶಾದ್ಯಂತ ಲಾಕ್‌ಡೌನ್ ಆಗಿ ಕೆಲವರ ಜೀವನವನ್ನೇ ಕಸಿದುಕೊಂಡರೆ, ಮತ್ತೆ ಕೆಲವರಿಗೆ ಅದೇ ವರದಾನವಾಯಿತು, ಈ ವೇಳೆ ನಡೆದ ಒಂದಷ್ಟು ಘಟನೆಗಳ ಜತೆ ಪ್ರೇಮಕಥೆಯೊಂದನ್ನು 'ಲಾಕ್ ಡೌನ್' ಚಿತ್ರದ ಮೂಲಕ ನಿರ್ದೇಶಕ ಜಾವೇದ್ ತಿಪ್ಪೇನಹಳ್ಳಿ ಹೇಳಹೊರಟಿದ್ದಾರೆ. ಈಗಾಗಲೇ ಶೂಟಿಂಗ್, ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿಕೊಂಡಿರುವ ಈ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ಮಂಜು ಮುದ್ಗಲ್ ಅವರು ಈ ಚಿತ್ರವನ್ನು ನಿರ್ಮಿಸುವ ಜತೆಗೆ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ವಿಜಯ್ ವಿಘ್ನೇಶ್ ಚಿತ್ರದಲ್ಲಿ ನಾಯಕನಾಗಿದ್ದು, ದಾವಣಗೆರೆಯ ವಾಣಿಶ್ರೀ ಶ್ರೀನಿವಾಸ್ ನಾಯಕಿಯ ಪಾತ್ರ ನಿರ್ವಹಿಸಿದ್ದಾರೆ. ಇವರೊಂದಿಗೆ ಶ್ರಾವಣಿ, ಅಶ್ವಿನಿ ಮುದ್ಗಲ್, ಮಮತಾ ಹಾಗೂ ಗೋವಿಂದರಾಜು, ವೈಲಾ ನಟಿಸಿದ್ದಾರೆ.

ನಿರ್ದೇಶಕ ಜಾವೇದ್ ಮಾತನಾಡಿ ಲಾಕ್‌ಡೌನ್ ಹಲವರಿಗೆ ನೋವು ಕೊಟ್ಟರೆ, ಕೆಲವರಿಗೆ ನಲಿವನ್ನು ನೀಡಿದೆ. ಉತ್ತರ ಕರ್ನಾಟಕದ ಹಿನ್ನೆಲೆ ಇಟ್ಟುಕೊಂಡು ಈ ಕಥೆ ಬರೆದಾಗ ಅದನ್ನು ನಿರ್ಮಾಪಕರು ಒಪ್ಪಿದರು. ಚಿತ್ರದ ಟ್ಯಾಗ್‌ಲೈನ್ ವಿಷಾದ ಅಂಡ್ ರಂಜನೆ ಎಂದಿದೆ. ಬಳ್ಳಾರಿಯಲ್ಲಿ ನಡೆದ ಒಂದಷ್ಟು ಕಹಿ ಘಟನೆಗಳನ್ನು ಚಿತ್ರಕತೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಜತೆಗೆ ಯುವ ಪ್ರೇಮಿಗಳು ಹಾಗೂ ಮಧ್ಯವಯಸಿನ ದಂಪತಿಗಳ ನಡುವಿನ ಪ್ರೀತಿಯನ್ನು ಹಾಸ್ಯದ ಹಿನ್ನೆಲೆಯಲ್ಲಿ ಹೇಳಲು ಪ್ರಯತ್ನಿಸಿದ್ದೇವೆ. ಸನ್ನಿವೇಶಗಳು ವಾಸ್ತವ. ಆದರೆ ಕಥೆ ಕಾಲ್ಪನಿಕ. ಚಿತ್ರದಲ್ಲಿ ಉತ್ತರ ಕರ್ನಾಟಕದ ಭಾಷೆಯನ್ನು ಬಳಸಲಾಗಿದೆ. ಆಗ ನಡೆದ ಒಂದಷ್ಟು ವಿಷಯಗಳು ಜನರಿಗೆ ಗೊತ್ತಿಲ್ಲ. ಅದನ್ನೇ ನಮ್ಮ ಚಿತ್ರದಲ್ಲಿ ಹೇಳಿದ್ದೇವೆ ಎಂದರು.

ಚಿತ್ರದ ನಿರ್ಮಾಪಕ ಮಂಜು ಮುದ್ಗಲ್ ಮಾತನಾಡುತ್ತ ನಾನು ಆಕ್ಟರ್ ಆಗ ಬೇಕೆಂದು ಬಂದವನು. ಅವಕಾಶಕ್ಕಾಗಿ ಸಾಕಷ್ಟು ಅಲೆದಾಡಿ ಕೊನೆಗೆ ನಾನೇಏಕೆ ಚಿತ್ರ ಮಾಡಬಾರದು ಎಂದು ಧೈರ್ಯದಿಂದ ಬಂಡವಾಳ ಹೂಡಿದೆ, ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಈ ಚಿತ್ರ ಆರಂಭವಾಯಿತು, ನಾಯಕ-ನಾಯಕಿಯ ಯೂತ್ ಲವ್‌ಸ್ಟೋರಿ ಹಾಗೂ ಫ್ಯಾಮಿಲಿ ಲವ್‌ಸ್ಟೋರಿ ಹೀಗೆ ಎರಡು ಟ್ರ್ಯಾಕ್‌ನಲ್ಲಿ ಚಿತ್ರಕಥೆ ಸಾಗುತ್ತದೆ ಫ್ಯಾಮಿಲಿ ಕಥೆಯಲ್ಲಿ ನಾನು ನಟಿಸಿದ್ದೇನೆ. ಫ್ಯಾಕ್ಟರಿಯಲ್ಲಿ ಕೆಲಸಮಾಡಿ ದುಡಿದ ಹಣದಿಂದ ಈ ಚಿತ್ರ ಮಾಡಿದ್ದೇನೆ ಎಂದರು.



ಸಿನಿಪದಬಂಧ-625



ಉಮ್ಮತ್ತೂರು ಇಂದುಶೇಖರ್
ಮೊ.9880820462



ಎಡದಿಂದ ಬಲಕ್ಕೆ

1.	ಪ್ರೀತಿಯೊಂದಿಗೆ ಹಾಡಿನ ಆರಂಭವಿದೆ	5
6.	ಲೋಕವನ್ನು ಜಯಿಸಿದ ನಟ ಈಗ ನಮ್ಮೊಂದಿಗಿಲ್ಲ	5
7.	ಉತ್ತರಾಧಿಕಾರಿಗೆ ಹೀಗೊಂದು ಪದ	5
9.	ಜಗ್ಗೇಶ್‌ನಲ್ಲಿ ಒಂಬತ್ತು ಬಗೆಯ ಸ್ವಾದವಿದೆ	4
10.	ಹಣಬಲದೊಂದಿಗೆ ಬಂದ ಪ್ರಜಾಶಕ್ತಿ	4
14.	ಶಿವರಾಜ್ ಕುಮಾರ್ – ಸುಧಾರಾಣಿ ಅಭಿನಯದಲ್ಲಿ ಉರಿದ ಹಣತೆ	5
15.	ಸೂರ್ಯವರ್ಧನ್ ಅಭಿನಯದಿ ಬೆಲೆಬಾಳುವ ಶ್ರೀಗಂಧವಿದೆ	5
16.	_ _ _ _ _ ತಮಾಷೆ ನೋಡು	5

ಮೇಲಿನಿಂದ ಕೆಳಕ್ಕೆ

1.	ನವರಸ ನಾಯಕನ ಪ್ರೀತಿಯ ಪೀಠ	6
2.	ಡಾ.ರಾಜ್ ಕುಮಾರ್ – ಲೀಲಾವತಿ ಅಭಿನಯದ ಲಲಾಟ ಲಿಖಿತ	5
3.	ಶ್ರೀನಾಥ್ ಯಾರಿಗೂ ತಿಳಿಯದೆ ಇರುವ ಸ್ಥಳದಲ್ಲಿರಲು ಜಾನಕಿರಾಮ್ ನಿರ್ದೇಶಕ	5
4.	ತನಗೆ ಇಷ್ಟವಾದ ವರನನ್ನು ಆರಿಸಿಕೊಳ್ಳುವ ಪದ್ಧತಿಗೆ ರಾಜ್‌ಕುಮಾರ್ – ಭಾರತಿ ಅಭಿನಯವಿದೆ	4
5.	ಶ್ರೀನಾಥ್ – ಮಂಜುಳಾ ಕಂಡ ಸ್ವಪ್ನ ನಿಜವಾಗಿದೆ	6
8.	ಕುಮಾರ್ ಬಂಗಾರಪ್ಪ ಕೋಪದಿ ಬುಸುಗುಟ್ಟಿದ್ದಾನೆ	6
11.	ಕಾಶೀನಾಥ್, ಶ್ರೀಲತಾ, ಮಾಸ್ಟರ್ ಮಂಜುನಾಥ್ ಅಭಿನಯದ ಚಿತ್ರ	6
12.	ವಿಷ್ಣುವರ್ಧನ್ – ಆರತಿ ಅಭಿನಯಕ್ಕೆ ಗೀತಪ್ರಿಯ ನಿರ್ದೇಶಕ	5
13.	'_ _ _ _ _ ಕೈಗೆ ಸಿಗುವುದೇ ಹೇಳೇ ತಂಗಾಳಿ .... ',	5
14.	ಶ್ರೀನಾಥ್ – ಗೀತಾ ಅಭಿನಯದ 'ಆಮೇಲೆ' ಎನ್ನುವರ್ಥದ ಚಿತ್ರ	4

ಹೆಸರು ______
ವಿಳಾಸ ______
______
ದೂರವಾಣಿ ಸಂಖ್ಯೆ ______

ಸಿನಿ ಪದಬಂಧ 624ರ ಉತ್ತರ

ಅ	ರು	ಣ	ರಾ	ಗ		ತಾ				ಹ
ಮ				ರು		ಜ್		ಸ		ನಿ
ರ		ಕೋ	ದಂ	ಡ	ರಾ	ಮ		ನಿ		ಮೂ
ಭಾ				ಧ್ವ		ಹ	ರಿ	ಹ	ರ	ನ್
ರ		ಸಂ		ಜ		ಲ್		ಸ		
ತಿ	ರು	ಪ	ತಿ				ಹ	ನಿ	ಶ	ನಿ
		ತ್		ಗಿ		ಶೃಂ		ಹ		ಗೂ
ರಾ	ಜ	ಕು	ಮಾ	ರಿ		ಗಾ				ಢ
ಮ		ಮಾ		ಮ	ಧು	ರ	ಮೈ	ತ್ರಿ		ರ
ಕೃ		ರ್		ಲ್ಲಿ		ರಾ				ಹ
ಷ್ಣ				ಗೆ		ಜ	ನ್ಮ	ರ	ಹ	ಸ್ಯ

ವಿಜೇತರು: ತನ್ಮಯಿ ಜಿ., ಎಂಐಜಿ #477
ಶಾರದಾದೇವಿನಗರ, ಮೈಸೂರು-22

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಮಕ್ಕಳ ಸಾಹಸಗಾಥೆ 'ಚಿಕ್ಕವರು ಕೋಣರಲ್ಲ'



ಮಕ್ಕಳ ಸಾಹಸಗಾಥೆ ಹೇಳುವ ಮತ್ತೊಂದು ಚಿತ್ರ ತೆರೆಗೆ ಬರುತ್ತಿದೆ. ಅದರ ಹೆಸರು 'ಚಿಕ್ಕವರು ಕೋಣರಲ್ಲ'. ಸಾಮಾನ್ಯವಾಗಿ ದಡ್ಡಮಕ್ಕಳನ್ನು ಕೋಣ ಎಂದು ಕರೆಯುತ್ತಾರೆ. ಅದೇ ಮಕ್ಕಳು ಏನಾದರೊಂದು ಸಾಧನೆ ಮಾಡಿದಾಗ 'ಚಿಕ್ಕವರು ಕೋಣರಲ್ಲ' ಎನ್ನಲೇಬೇಕಾಗುತ್ತೆ! ಪ್ರಕಾಶ್ ಚಿನ್ನಪ್ಪ ಅವರು ಇಂಥದ್ದೊಂದು ಮಕ್ಕಳ ಸಾಹಸದ ಕಥೆಯನ್ನು ತೆರೆಗೆ ತರುತ್ತಿದ್ದಾರೆ, ತೆರೆಗೆ ಸಿದ್ದವಾಗಿರುವ ಈ ಚಿತ್ರದ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು,

ಹಿರಿಯ ಕಲಾವಿದರಾದ ರಮೇಶ್ ಭಟ್ ಹಾಗೂ ಸುಂದರರಾಜ್ ಅವರ ಜತೆ ನಟಿ ಅನಿತಾಭಟ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇವರ ಜತೆ ಬಾಲ ಕಲಾವಿದರಾದ ಸೆಹರಿ ರೆಡ್ಡಿ, ತಿಷ್ಯಾ, ಹನ್ಸಿಕಾ, ಶ್ರೀನಿವಾಸ ಮುಂತಾದವರು ನಟಿಸಿದ್ದಾರೆ.

ಈ ವೇಳೆ ನಿರ್ದೇಶಕ ಪ್ರಕಾಶ್ ಚಿನ್ನಪ್ಪ ಮಾತನಾಡಿ ಸಾಮಾನ್ಯವಾಗಿ 5ರಿಂದ 11ವರ್ಷದವರೆಗೆ ಮಕ್ಕಳಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತವೆ. ಆ ವಯಸಿನಲ್ಲಿ ಮಕ್ಕಳು ತುಂಬಾ ಬ್ರಿಲಿಯಂಟ್ ಆಗಿರ್ತಾರೆ. ಅವರು ಚಿಂತನೆ ಮಾಡುವ ರೀತಿ, ಆಲೋಚನೆಗಳೇ ವಿಭಿನ್ನವಾಗಿರುತ್ತವೆ, ಮುಂದಿನ 20 ವರ್ಷಗಳ ನಂತರ ಜಗತ್ತು ಯಾವ ರೀತಿ ಬದಲಾವಣೆಯಾಗಿರುತ್ತದೆ, ಗ್ಲೋಬಲ್ ವಾರ್ಮಿಂಗ್ ಆದಾಗ, ಮಕ್ಕಳು ತಮ್ಮ ಜಾಗವನ್ನು ಉಳಿಸಿಕೊಳ್ಳಲು ಹೇಗೆಲ್ಲ ಹೋರಾಡುತ್ತಾರೆ, ಇಬ್ಬರು ಹಿರಿಯ ಬ್ರದರ್ಸ್ ಮಧ್ಯೆ ನಡೆಯುವ ಸಂಘರ್ಷವನ್ನು ಮಕ್ಕಳು ಹೇಗೆ ಸರಿಪಡಿಸುತ್ತಾರೆ ಎಂಬುದನ್ನು ಈ ಚಿತ್ರದಲ್ಲಿ ಹೇಳುತ್ತಿದ್ದೇನೆ, ಸಾಗರ, ಸಿರ್ಸಿ ಹಾಗೂ ಬೆಂಗಳೂರಿನಲ್ಲಿ ಚಿತ್ರೀಕರಣ ನಡೆಸಿದ್ದೇವೆ, ಈ ಕಥೆ ಬರೆಯುವಾಗಲೇ ಹಿರಿಯರ ಪಾತ್ರಕ್ಕೆ ರಮೇಶ್‌ಭಟ್ ಹಾಗೂ ಸುಂದರರಾಜ್ ಅವರೇ ಬೇಕು ಅಂದುಕೊಂಡಿದ್ದೆ, ಜ್ಞಾನದ ಹಿಂದೆ ಬಿದ್ದರೆ ಏನಾಗುತ್ತೆ, ಹಣದ ಹಿಂದೆ ಹೋದರೆ ಏನಾಗುತ್ತೆ ಎನ್ನುವುದೇ ಈ ಚಿತ್ರದ ಕಾನ್ಸೆಪ್ಟ್, ಸದ್ಯದಲ್ಲೇ ರಿಲೀಸ್ ಮಾಡುವ ಪ್ಲಾನಿದೆ ಎಂದು ವಿವರಿಸಿದರು,

ಕ್ಯಾಮರಾ ವರ್ಕ್ ನಿಭಾಯಿಸಿರುವ ರಿಶಿಕೇಶ್ ಮಾತನಾಡುತ್ತ ಫ್ರೀಡಂ ಬಗ್ಗೆ, ಊರಿನ ಬಗ್ಗೆ ಅಲ್ಲದೆ ಎಜುಕೇಶನ್ ಸಿಸ್ಟಂ ಬಗ್ಗೆಯೂ ಚಿತ್ರದಲ್ಲಿ ಹೇಳಿದ್ದೇವೆ ಎಂದರು. ಸಂಗೀತ ನಿರ್ದೇಶಕ ವಿವಾನ್ ಸೂರ್ಯ ಮಾತನಾಡಿ ಚಿತ್ರದಲ್ಲಿ 4 ಹಾಡುಗಳಿವೆ ಎಂದರು.

ಮಕ್ಕಳ ಸ್ನೇಹ ಬಾಂಧವ್ಯದ 'ಮಕ್ಕಳ ಸೈನ್ಯ'



ಇತ್ತೀಚೆಗೆ ಮಕ್ಕಳ ಕಥೆ ಆಧರಿಸಿ ಒಂದಷ್ಟು ಚಿತ್ರಗಳು ನಿರ್ಮಾಣವಾಗುತ್ತಿವೆ. ಅಂಥ ಮತ್ತೊಂದು ಚಿತ್ರ ಮಕ್ಕಳ ಸೈನ್ಯ. ಸಂಕಲನಕಾರ ಎಸ್.ಕೆ.ಸುನೀಲ್‌ಕುಮಾರ್ ಅವರ ನಿರ್ದೇಶನದ ಪ್ರಥಮ ಚಿತ್ರ ಇದಾಗಿದ್ದು ಮೇ 22ಕ್ಕೆ ತೆರೆಗೆ ಬರುತ್ತಿದೆ.

ನಿರ್ದೇಶಕ ಸುನೀಲ್‌ಕುಮಾರ್ ಮಾತನಾಡಿ ಎಪ್ಪತ್ತರ ದಶಕದಲ್ಲಿ ತೆರೆ ಕಂಡಿದ್ದ ಸಿಂಹದ ಮರಿ ಸೈನ್ಯ ನಂತರ ಆ ರೀತಿಯ ಯಾವುದೇ ಮಕ್ಕಳ ಸಾಹಸದ ಚಿತ್ರ ಬಂದಿಲ್ಲ. ಅಂಥ ಕಥೆ ಈ ಚಿತ್ರದಲ್ಲಿದೆ. ಸ್ನೇಹ, ಸಾಹಸ, ತಂದೆ ಮಗಳ ಬಾಂಧವ್ಯ ಹಾಗೂ ಸನಾತನ–ಹೀಗೆ ನಾಲ್ಕು ಜಾನರ್‌ನಲ್ಲಿ ಚಿತ್ರಕಥೆ ಸಾಗುತ್ತದೆ. ಇದರಲ್ಲಿರುವ ಮಕ್ಕಳು ಮೊದಲಬಾರಿಗೆ ನಟಿಸಿದ್ದಾರೆಂದು ಹೇಳಲು ಸಾಧ್ಯವಿಲ್ಲ, ಅಷ್ಟು ಚೆನ್ನಾಗಿ ನಟಿಸಿದ್ದಾರೆ. ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆಯ ಅಕ್ಕಿ ಹೆಬ್ಬಾಳಿನಲ್ಲಿ ಚಿತ್ರೀಕರಣ ನಡೆದಿದೆ. ಹಿರಿಯ ಸಾಹಿತಿ ದೊಡ್ಡರಂಗೇಗೌಡ ಅವರು ಗೀತರಚನೆ ಮಾಡಿದ್ದಾರೆ. ಸನ್ನಿರಾಜ್ ಸಂಗೀತ ನೀಡಿದ್ದಾರೆ. ಮಕ್ಕಳ ಚಿತ್ರವಾದರೂ ಕಮರ್ಷಿಯಲ್ ಚಿತ್ರಗಳಿಗೂ ಕಡಿಮೆ ಇಲ್ಲದಂತೆ ಈ ಚಿತ್ರ ಮೂಡಿಬಂದಿದೆ. ಚಿತ್ರಕ್ಕೆ ನಾನೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದೇನೆ. ಮುನಿಸ್ವಾಮಿ ಅವರು ನಿರ್ಮಾಣ ಮಾಡಿದ್ದಾರೆ. ಸವಾಲಿಗೆ ಸವಾಲ್ ಎಂಬ ಅಡಿಬರಹ ಈ ಚಿತ್ರಕ್ಕಿದೆ ಎಂದರು. ನಿರ್ಮಾಪಕ ಮುನಿಸ್ವಾಮಿ ಹಾಗೂ ಚಿತ್ರದಲ್ಲಿ ನಟಿಸಿರುವ ಮಹಾಲಕ್ಷ್ಮಿ, ಗಗನ, ಸೋನಾಕ್ಷಿ, ಶಶಾಂಕ್, ರಾಬರ್ಟ್, ರುದ್ರಪ್ಪಇವರೆಲ್ಲ ತಮ್ಮ ತಮ್ಮ ಪಾತ್ರಗಳ ಕುರಿತಂತೆ ಮಾತನಾಡಿದರು.

ಚುಚ್ಚುಮದ್ದಿನಿಂದ ವ್ಯಕ್ತಿ ಸಾವು ಆರೋಪ; ಪ್ರತಿಭಟನೆ

ಕೆ.ಆರ್.ನಗರ, ಮೇ 7– ವೈದ್ಯರು ನೀಡಿದ ಚುಚ್ಚು ಮದ್ದಿನಿಂದ ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ಪಟ್ಟಣದಲ್ಲಿ ಗುರುವಾರ ನಡೆದಿದೆ.



ರಾಮಯ್ಯ

ಪಟ್ಟಣದ ಸಿ.ಎಂ.ರಸ್ತೆಯಲ್ಲಿರುವ ರಾಘವೇಂದ್ರ ಕ್ಲಿನಿಕ್‌ನಲ್ಲಿ ಈ ಘಟನೆ ನಡೆದಿದ್ದು, ವೈದ್ಯ ಡಾ.ಹೆಚ್.ಜಿ.ಶಂಕರ್ ನೀಡಿದ ಚುಚ್ಚುಮದ್ದಿನಿಂದ ಪಟ್ಟಣ ಸಮೀಪದ ಕಾಳೇನಹಳ್ಳಿ ಗ್ರಾಮದ ಪೌರ ಕಾರ್ಮಿಕರ ಕಾಲೋನಿ ನಿವಾಸಿ ರಾಮಯ್ಯ(65) ಸಾವನ್ನಪ್ಪಿದ್ದಾರೆ.

ವಿವರ: ಇಂದು ಬೆಳಗ್ಗೆ 10 ಗಂಟೆಗೆ ರಾಮಯ್ಯನ ಜೊತೆ ಕ್ಲಿನಿಕ್‌ಗೆ ಆಗಮಿಸಿದ ಪತ್ನಿ ಪಾಪಮ್ಮ ಅವರು ನನ್ನ ಪತಿಗೆ ತುಂಬಾ ಹೊಟ್ಟೆನೋವು ಇರುವುದರಿಂದ ಚಿಕಿತ್ಸೆ ನೀಡುವಂತೆ ಕೋರಿದ್ದಾರೆ. ಅಲ್ಲದೇ ರಾಮಯ್ಯನಿಗೆ ಮೊದಲೇ ಪಾರ್ಶ್ವವಾಯು ಹೊಡೆದಿದೆ. ಈ ಹಿಂದೆ ಪಡೆದಿದ್ದ ಚಿಕಿತ್ಸೆಯ ಔಷಧಿ ಚೀಟಿ ಮತ್ತು ಮಾತ್ರೆಗಳನ್ನು ಪರಿಶೀಲಿಸಿ ಚಿಕಿತ್ಸೆ ನೀಡುವಂತೆ ತಿಳಿಸಿದರೂ ವೈದ್ಯರು ಯಾವುದನ್ನು ಪರಿಶೀಲಿಸದೆ ಏಕಾಏಕಿ ಚುಚ್ಚುಮದ್ದು ನೀಡಿದ್ದರಿಂದ ಸಾವನ್ನಪ್ಪಿದ್ದಾರೆ



ಕ್ಲಿನಿಕ್ ಮುಂದೆ ಜಮಾಯಿಸಿರುವ ಪ್ರತಿಭಟನಾಕಾರರು.

ಎಂದು ರಾಮಯ್ಯನ ಸಂಬಂಧಿಕರು, ಪುತ್ರ, ಪುತ್ರಿ ಸೇರಿದಂತೆ ಗ್ರಾಮಸ್ಥರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ ವೈದ್ಯರ ವಿರುದ್ಧ ದೂರು ದಾಖಲಿಸಿ ಶಿಕ್ಷೆಗೆ ಗುರಿ ಪಡಿಸಬೇಕೆಂದು ಒತ್ತಾಯಿಸಿದರು.

ಇದೇ ವೇಳೆ ಆದಿಜಾಂಬವ ಸಂಘದ ಅಧ್ಯಕ್ಷ ಎಂ.ಲೋಕೇಶ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಸ್.ಮಹದೇವ್, ಪುರಸಭೆ ಮಾಜಿ ಅಧ್ಯಕ್ಷ ಡಿ.ಕಾಂತರಾಜು, ದಲಿತ ಮುಖಂಡರಾದ ಸಿ.ಶಂಕರ್, ಸುರೇಶ್, ರಮೇಶ್, ಮುರುಗೇಶ್, ಕುಮಾರ್, ಮಂಜುನಾಥ್, ಸಿದ್ದಯ್ಯ, ವಜ್ರೇಶ್, ನಂಜಯ್ಯ ನೂರಾರು ಮಂದಿ ಕ್ಲಿನಿಕ್ ಮುಂದೆ ಡಾ.ಬಿ.ಆರ್.ಅಂಬೇಡ್ಕರ್‌ರವರ ಭಾವ ಚಿತ್ರ ಇಟ್ಟು ಪ್ರತಿಭಟನೆ ನಡೆಸಿದರು.

> “ಪಟ್ಟಣದಲ್ಲಿ ಪರವಾನಗಿ ಇಲ್ಲದೆ ನಾಯಿ ಕೊಡೆಯಂತೆ ತಲೆ ಎತ್ತಿರುವ ಕ್ಲಿನಿಕ್‌ಗಳಲ್ಲಿ ಆಯುರ್ವೇದ ವೈದ್ಯರು ಎಂಬಿಬಿಎಸ್ ವೈದ್ಯರಂತೆ ಅಲೋಪತಿ ಚಿಕಿತ್ಸೆ ನೀಡುತ್ತಿದ್ದಾರೆ. ಇದರಿಂದ ಬಡವರು ಚಿಕಿತ್ಸೆ ಪಡೆಯುವುದೇ ಕಷ್ಟವಾಗಿದೆ. ಹಾಗಾಗಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಮೃತಪಟ್ಟ ವ್ಯಕ್ತಿ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು, ಚುಚ್ಚುಮದ್ದು ನೀಡಿದ ಆಯುರ್ವೇದ ವೈದ್ಯನನ್ನು ಕೂಡಲೇ ಬಂಧಿಸಬೇಕು.
>
> – ಎಂ.ಲೋಕೇಶ್, ಅಧ್ಯಕ್ಷ, ತಾಲೂಕು ಆದಿಜಾಂಬವ ಸಂಘ.

ಈ ಸಂದರ್ಭ ಮಾತನಾಡಿದ ಪ್ರತಿಭಟನಕಾರರು, ಮೃತ ರಾಮಯ್ಯ ಸಫಾಯಿ ಕರ್ಮಚಾರಿಯಾಗಿದ್ದು ತುಂಬಾ ಕಡು ಬಡವರಾಗಿರುವುದರಿಂದ ಈತನ ಅಂತ್ಯಕ್ರಿಯೆ ನಡೆಸಲು ಇತರರ ಸಹಾಯ ಪಡೆಯಬೇಕಾಗಿದೆ. ಆದ್ದರಿಂದ ಇವರ ಕುಟುಂಬಕ್ಕೆ ಸೂಕ್ತ ಪರಿಹಾರ ಕೊಡಿಸಬೇಕು. ಜೊತೆಗೆ ಚಿಕಿತ್ಸೆ ವೇಳೆ ನಿರ್ಲಕ್ಷ್ಯ ವಹಿಸಿದ ವೈದ್ಯರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕನಕದಾಸರ ಸಂದೇಶಗಳು ಇಂದಿಗೂ ಪ್ರಸ್ತುತ

ಕನಕ ಗುರುಪೀಠ ಕೆ.ಆರ್.ನಗರ ಶಾಖಾ ಮಠದ ಶ್ರೀಶಿವಾನಂದಪುರಿ ಸ್ವಾಮೀಜಿ

ತಿ.ನರಸೀಪುರ, ಮೇ 7– ಕನಕದಾಸರು ಸಮಾನತೆ ಮತ್ತು ಮಾನವೀಯತೆಯ ಮಹತ್ವ ಸಾರಿದ ಮಹಾನ್ ದಾರ್ಶನೀಕರು. ಕುಲ ಕುಲವೆಂದು ಹೊಡೆದಾಡದಿರಿ ಎಂಬ ಅವರ ಸಂದೇಶ ಇಂದಿಗೂ ಪ್ರಸ್ತುತ ಎಂದು ಕನಕ ಗುರುಪೀಠ ಕೆ.ಆರ್.ನಗರ ಶಾಖಾ ಮಠದ ಶ್ರೀಶಿವಾನಂದಪುರಿ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಕರೋಹಟ್ಟಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಕನಕ ಸಮುದಾಯ ಭವನ ಉದ್ಘಾಟನೆ ಹಾಗೂ ಶ್ರೀಭಕ್ತ ಕನಕದಾಸರ ನೂತನ ಪ್ರತಿಮೆ ಅನಾವರಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಈ ಕಾರ್ಯಕ್ರಮ ಇತಿಹಾಸ ಮತ್ತು ಸಂಸ್ಕೃತಿಯ ಮಹತ್ವ ನೆನಪಿಸುವ ಪವಿತ್ರ ಕ್ಷಣವಾಗಿದೆ. ಇಂತಹ ಕಾರ್ಯಕ್ರಮಗಳು ಕೇವಲ ಆಚರಣೆಯಾಗದೆ, ಮುಂದಿನ ಪೀಳಿಗೆಗೆ ಆದರ್ಶ ಮತ್ತು ಪ್ರೇರಣೆಯ ದೀಪವಾಗಬೇಕು. ಸಮಾಜದಲ್ಲಿ ಒಗ್ಗಟ್ಟು, ಪ್ರೀತಿ ಮತ್ತು ಧರ್ಮದ ಮಾರ್ಗದಲ್ಲಿ ಸಾಗುವಂತೆ ಅವರು ನೀಡಿದ ಬೋಧನೆಗಳು ಪ್ರತಿಯೊಬ್ಬರ ಬದುಕಿಗೆ ದಾರಿದೀಪವಾಗಿವೆ. ಕನಕ ಭವನವು ಆ ತತ್ವಗಳನ್ನು ಸಾರುವ ಪವಿತ್ರ ಕೇಂದ್ರವಾಗಬೇಕು ಎಂದರು.



ಕಾರ್ಯಕ್ರಮವನ್ನು ಶ್ರೀಶಿವಾನಂದಪುರಿ ಸ್ವಾಮೀಜಿ ಉದ್ಘಾಟಿಸಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರು ಕನ್ನಡ ನಾಡಿನ ಹೆಮ್ಮೆಯ ವೀರಪುತ್ರ. ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡಿದ ಅವರ ಸಾಹಸ ಇತಿಹಾಸದಲ್ಲಿ ಚಿರಸ್ಥಾಯಿಯಾಗಿದೆ. ಅವರ ಪ್ರತಿಮೆಯನ್ನು ಅನಾವರಣಗೊಳಿಸುವುದು ಕೇವಲ ಗೌರವವಲ್ಲ. ಯುವ ಪೀಳಿಗೆಗೆ ದೇಶಭಕ್ತಿ ಮತ್ತು ತ್ಯಾಗದ ಮೌಲ್ಯಗಳನ್ನು ನೆನಪಿಸುವ ಮಹತ್ವದ ಕಾರ್ಯವಾಗಿದೆ. ಇಂದು ಸಮಾಜದಲ್ಲಿ ಯುವಕರು ಉತ್ತಮ ದಾರಿಯಲ್ಲಿ ಸಾಗಬೇಕಾದ ಅಗತ್ಯ ಹೆಚ್ಚಾಗಿದೆ. ಆಧುನಿಕ ಜೀವನದ ಮಧ್ಯೆ ನಮ್ಮ ಸಂಸ್ಕೃತಿ, ಪರಂಪರೆ ಹಾಗೂ ಮಹನೀಯರ ಆದರ್ಶಗಳನ್ನು ಮರೆಯಬಾರದು. ಕನಕದಾಸರ ಭಕ್ತಿ ಮತ್ತು ರಾಯಣ್ಣರ ಶೌರ್ಯ ಯುವಕರ ಬದುಕಿಗೆ ಎರಡು ಕಣ್ಣುಗಳು. ಗ್ರಾಮಗಳಲ್ಲಿ ಇಂತಹ ಭವನಗಳು ನಿರ್ಮಾಣವಾದಾಗ ಸಮಾಜದ ಚಟುವಟಿಕೆಗಳು ಬೆಳೆಯುತ್ತವೆ. ಬಡ ಮಕ್ಕಳ ಶಿಕ್ಷಣ, ಧಾರ್ಮಿಕ ಪ್ರವಚನಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಸಮಾಜ ಸೇವೆ ನಡೆಯುವ ಕೇಂದ್ರವಾಗಿ ಈ ಕನಕ ಭವನ ರೂಪುಗೊಳ್ಳಬೇಕು. ಸಮಾಜದ ಎಲ್ಲಾ ವರ್ಗದ ಜನರು ಒಂದಾಗಿ ಕಾರ್ಯ ನಿರ್ವಹಿಸಿದಾಗ ಮಾತ್ರ ನಿಜವಾದ ಅಭಿವೃದ್ಧಿ ಸಾಧ್ಯ. ನಮ್ಮ ನಾಡಿನ ಸಂತರು, ಶರಣರು ಮತ್ತು ವೀರರು ನೀಡಿದ ಸಂದೇಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಪರೋಪಕಾರ, ಸೇವೆ, ಸತ್ಯ ಮತ್ತು ಧರ್ಮದ ಮಾರ್ಗದಲ್ಲಿ ನಡೆದಾಗ ಸಮಾಜ ಸುಖಿ ಮತ್ತು ಸಮೃದ್ಧವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕರೋಹಟ್ಟಿ ಮಠದ ಶ್ರೀಬಸವಲಿಂಗ ದೇಶಿಕೇಂದ್ರ ಸ್ವಾಮೀಜಿ, ಕುರುಬರ ಸಂಘದ ತಾಲೂಕು ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಜಿಪಂ ಮಾಜಿ ಸದಸ್ಯ ಎಂ.ಆರ್.ಸೋಮಣ್ಣ, ಕಾರ್ಯದರ್ಶಿ ಬಸವರಾಜು, ಗ್ರಾಪಂ ಮಾಜಿ ಅಧ್ಯಕ್ಷ ವಾಟಾಳ್ ನಾಗೇಶ್, ಜನಜಾಗೃತಿ ಜಿಲ್ಲಾಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ, ಪುಟ್ಟಸ್ವಾಮಿ, ನಾಗರಾಜು, ಶಿವಮೂರ್ತಿ, ಮಲ್ಲೇಶ್ ಗೌಡ, ಬಸವರಾಜು, ಮಲ್ಲಯ್ಯ, ಭಕ್ತ ಕನಕದಾಸ ಯುವಕ ಸಂಘದ ಪದಾಧಿಕಾರಿಗಳು ಮತ್ತು ಗ್ರಾಮಸ್ಥರು ಇದ್ದರು.

ಸಂವಿಧಾನ ಎಲ್ಲಾ ಜಾತಿ, ಧರ್ಮ, ಪ್ರತಿಯೊಬ್ಬರನ್ನು ರಕ್ಷಿಸಿದೆ

ಅಂಬೇಡ್ಕರ್ ರಾಜ್ಯ ಪ್ರಶಸ್ತಿ ಪುರಸ್ಕೃತ ಹರಿಹರಾನಂದಸ್ವಾಮಿ

ಹುಣಸೂರು, ಮೇ 7– ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನ ಎಲ್ಲಾ ಜಾತಿ, ಧರ್ಮ ಸೇರಿದಂತೆ ಪ್ರತಿಯೊಬ್ಬರಿಗೂ ರಕ್ಷಣೆ ನೀಡಿದೆ ಎಂದು ಅಂಬೇಡ್ಕರ್ ರಾಜ್ಯ ಪ್ರಶಸ್ತಿ ಪುರಸ್ಕೃತ ಹರಿಹರಾನಂದಸ್ವಾಮಿ ತಿಳಿಸಿದರು.

ತಾಲೂಕಿನ ರತ್ನಪುರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಸಂಘ, ಮಹಿಳಾ ಒಕ್ಕೂಟ, ಸ್ವಸಹಾಯ ಸಂಘಗಳು ಹಾಗೂ ಗ್ರಾಮಸ್ಥರಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಯುವಕ–ಯುವತಿಯರು ಅಂಬೇಡ್ಕರ್ ತತ್ವಾದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ದೇಶದ ಸಂವಿಧಾನ ಪ್ರೀತಿ, ಶಾಂತಿ, ಕರುಣೆ ಎಲ್ಲವನ್ನೂ ಒಳಗೊಂಡಿದೆ. ಎಲ್ಲದಕ್ಕೂ ಕಾನೂನುಗಳಿವೆ. ಆದರೆ ಇಂದಿನ ದಿನಗಳಲ್ಲಿ ಅಂಬೇಡ್ಕರ್ ಕೊಟ್ಟ ಮೀಸಲಾತಿ, ಸಂವಿಧಾನದಿಂದ ಅಧಿಕಾರಕ್ಕೆ ಬಂದು ಸಂವಿಧಾನದ ವಿರುದ್ಧ ಮಾತನಾಡುವುದು ಸರಿಯಲ್ಲ. ಬದುಕಲು ಆಸರೆಯಾದ ಸಂವಿಧಾನವನ್ನು ಜಾತಿ, ಧರ್ಮಗಳ ಹೆಸರಿನಲ್ಲಿ ವಿರೋಧಿಸುವುದಕ್ಕೂ ಮುನ್ನಾ ದೇಶದ ಪ್ರಧಾನಿಯಿಂದ ಹಿಡಿದು ರಾಜ್ಯದ ಮುಖ್ಯಮಂತ್ರಿ ಸೇರಿದಂತೆ ಎಲ್ಲಾ ವರ್ಗದ ಜನತೆ ತಿಳಿದುಕೊಳ್ಳಬೇಕು ಎಂದರು.

ಮಾಜಿ ಜಿಲ್ಲಾ ಪರಿಷತ್ ಸದಸ್ಯ ನಾಗರಾಜ್ ಮಲ್ಲಾಡಿ ಮಾತನಾಡಿ, ಮಹಿಳೆಯರಿಗೆ ಸಂವಿಧಾನದ ಮೂಲಕ ರಕ್ಷಣೆ ನೀಡಿದವರು ಅಂಬೇಡ್ಕರ್. ಅವರು ಮಹಿಳಾ ಹಕ್ಕುಗಳನ್ನು ರಕ್ಷಿಸಿದರು ಎಂದರು.



ರತ್ನಪುರಿಯಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ಗಣ್ಯರು ಉದ್ಘಾಟಿಸಿದರು.

ಮುಖ್ಯ ಭಾಷಣಕಾರ ನಾಗರಾಜ್ ಮಾತನಾಡಿ, ಪ್ರಸ್ತುತ ಯುವಕ–ಯುವತಿಯರಲ್ಲಿ ದೇಶ, ಸಮುದಾಯ, ಗ್ರಾಮಗಳ ಪ್ರಗತಿ ಹಾಗೂ ಸಮಸ್ಯೆಗಳ ಬಗ್ಗೆ ಅರಿವು ಇಲ್ಲದಂತಾಗಿದೆ. ದೇವಸ್ಥಾನಗಳ ಗಂಟೆಗಳಿಗಿಂತ ಶಾಲೆಯ ಗಂಟೆಗಳ ಬಗ್ಗೆ ಆಸಕ್ತಿ ಹೆಚ್ಚಾಗಬೇಕು. ಕೋಮುವಾದಿಗಳು ಅಂಬೇಡ್ಕರ್ ವಿಚಾರಗಳನ್ನು ವಿರೋಧಿಸುತ್ತಾರೆ. ಅಂಬೇಡ್ಕರ್, ಬುದ್ಧ, ಬಸವಣ್ಣ ಅವರ ವಿಚಾರಗಳನ್ನು ಯಾರಿಂದಲೂ ನಾಶ ಮಾಡಲು ಸಾಧ್ಯವಿಲ್ಲ ಎಂದರು.

ದಸಂಸ ಹಿರಿಯ ಹೋರಾಟಗಾರ ಪುಟ್ಟಸ್ವಾಮಿ, ಗ್ರಾಪಂ ಅಧ್ಯಕ್ಷ ನಾಗೇಶರಾವ್ ಮೇಗಾಣಿ, ಅಂಬೇಡ್ಕರ್ ಯುವಕರ ಸಂಘದ ಅಧ್ಯಕ್ಷ ವಿಜೇಂದ್ರ ಕುಮಾರ್, ಮಾಜಿ ಸದಸ್ಯ ಡೇವಿಡ್, ಸತ್ಕಾರ ಅಭಿವೃದ್ಧಿ ಸಂಸ್ಥೆ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ ಮಾತನಾಡಿದರು. ದಸಂಸ ಮುಖಂಡ ಬಿ.ವೈ.ಪ್ರಸನ್ನ, ಗ್ರಾಪಂ ಸದಸ್ಯರಾದ ಮನುಕುಮಾರ್, ರಾಮಭೋವಿ, ರತ್ನಮ್ಮ, ಕುಮಾರ್, ಬಿಳಿಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜು, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಸುದರ್ಶನ್ ಸಿಂಗ್, ಮುಖಂಡರಾದ ರಾಮಸ್ವಾಮಿ, ಮುರುಗೇಶ್, ಎಸ್.ಪಿ.ಚಾಂದ್, ಪಿಡಿಓ ಶ್ರೀಧರ್, ಗ್ರಾಮಸ್ಥರಿದ್ದರು.

ಪಿತ್ರಾರ್ಜಿತ ಜಮೀನು ಕಬಳಿಸಲು ಹುನ್ನಾರ

ನಂಜನಗೂಡು, ಮೇ 7– ನಮ್ಮ ಪಿತ್ರಾರ್ಜಿತ ಜಮೀನನ್ನು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಮತ್ತು ಬೆಂಬಲಿಗರು ರಾಜಕೀಯ ದರ್ಪ ತೋರಿ ನಮ್ಮಿಂದ ಕಸಿದುಕೊಳ್ಳಲು ಹುನ್ನಾರ ನಡೆಸುತ್ತಿದ್ದಾರೆ ಎಂದು ಶಂಕರಪುರ ಬಡಾವಣೆ ರೈತ ಪುಟ್ಟಸ್ವಾಮಿ ಆರೋಪಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವಿರಮ್ಮನಹಳ್ಳಿ ಸರ್ವೇ ನಂ.54/3ರಲ್ಲಿ 1.32 ಎಕರೆ ಜಮೀನಿದ್ದು, ಅದರಲ್ಲಿ ವಂಶ ಪಾರಂಪರ್ಯವಾಗಿ ಉಳುಮೆ ಮಾಡುತ್ತಾ ಬಂದಿದ್ದೇವೆ. 2008ರಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಮಹದೇವಪ್ಪ ಅವರ ಸಂಬಂಧಿಕರಾದ ಧರ್ಮೇಂದ್ರ ಎಂಬುವರು ಏಕಾಏಕಿ ನಮ್ಮ ಜಮೀನಿಗೆ ಬಂದು ಇದು ಹೆಚ್.ಸಿ.ಮಹದೇವಪ್ಪ ಅವರ ಜಮೀನಾಗಿದ್ದು ಇಲ್ಲಿ ನೀವು ಉಳಿಮೆ ಮಾಡಬಾರದು ಎಂದರು. ನಿಮಗೆ ಜಮೀನನ್ನು ಮಾರಿದ್ದು ಯಾರು ಎಂದು ಪ್ರಶ್ನಿಸಿ ನಾವು ನ್ಯಾಯಾಲಯದ ಮೊರೆ ಹೋಗಿದ್ದೇವು. 2010ರಲ್ಲಿ ನ್ಯಾಯಾಲಯ ನಮ್ಮಂತೆ ತೀರ್ಪು ನೀಡಿದ್ದು, ನಂತರ 2023ರಲ್ಲಿ ನ್ಯಾಯಾಲಯದ ಆದೇಶದಂತೆ ತಹಸೀಲ್ದಾರ್ ಅವರು ನಮ್ಮ ಹೆಸರಿಗೆ ಜಮೀನಿನ ಅರ್ಧಭಾಗ 36 ಗುಂಟೆ ಜಮೀನನ್ನು ಖಾತೆ ಮಾಡಿಕೊಟ್ಟಿದ್ದಾರೆ. ಆದರೂ ಸಚಿವರ ರಾಜಕೀಯ ಕುಮ್ಮಕ್ಕಿನಿಂದ ಅಧಿಕಾರಿಗಳು ನಮಗೆ ಯಾವ ನೋಟಿಸ್ ಸಹ ನೀಡದೆ ಅಪರ ಜಿಲ್ಲಾಧಿಕಾರಿಗಳು ನಮ್ಮ ಖಾತೆ ರದ್ದುಪಡಿಸಿದ್ದಾರೆ. ಪ್ರಸ್ತುತ ಜಮೀನಿನ ವಿವಾದ ನ್ಯಾಯಾಲಯದಲ್ಲಿದೆ. ಹೀಗಿದ್ದರೂ ಶಿವಪ್ರಸಾದ್ ಎಂಬುವರು ಮೇ 6 ರಂದು ಜೆಸಿಬಿ ಮೂಲಕ ಜಮೀನನ್ನು ಸಮತಟ್ಟು ಮತ್ತು ಸ್ವಚ್ಛಗೊಳಿಸುವ ಕೆಲಸ ಮಾಡಿದರು. ಈ ಬಗ್ಗೆ ಪ್ರಶ್ನಿಸಿದ್ದಕ್ಕೆ ಸಚಿವ ಹೆಚ್.ಸಿ.ಮಹದೇವಪ್ಪ ಅವರ ರಾಜಕೀಯ ಕುಮ್ಮಕ್ಕಿನಿಂದಾಗಿ ನಂಜನಗೂಡಿನ ಪಟ್ಟಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ರವೀಂದ್ರ ಮತ್ತು ಸಿಬ್ಬಂದಿ ನಮ್ಮ ಮೇಲೆ ದೌರ್ಜನ್ಯ ನಡೆಸಿ ನಮ್ಮನ್ನು ಬಲವಂತವಾಗಿ ಜಮೀನಿನಿಂದ ಹೊರಗೆ ಹಾಕಿ ದರ್ಪ ತೋರಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ನಮಗೆ ರಕ್ಷಣೆ ಕೊಟ್ಟು, ನಮ್ಮ ಜಮೀನನ್ನು ಉಳಿಸಿಕೊಡಬೇಕು. ಪೊಲೀಸರಿಂದ ರಕ್ಷಣೆ ಕೊಡಿಸಬೇಕು ಎಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ಯಶೋಧ, ಮನೋಜ್ ಇದ್ದರು.

ಶ್ರೀನಿವಾಸ್ ನಿಧನ

ಹುಣಸೂರು, ಮೇ 7– ನಗರದ ಕಾಫಿ ವರ್ಕ್ಸ್ ನಿವೃತ್ತ ನೌಕರ, ಕಲ್ಕುಣಿಕೆ ನಿವಾಸಿ ಶ್ರೀನಿವಾಸ್(65) ಬುಧವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಛಾಯಾಗ್ರಾಹಕ ಪ್ರಶಾಂತ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಕೆ.ಆರ್.ನಗರ ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ನಡೆಯಿತು.



ಸರೋಜಮ್ಮ

ಹುಣಸೂರು, ಮೇ 7– ನಗರದ ಕಲ್ಕುಣಿಕೆ ಹೌಸಿಂಗ್ ಬೋರ್ಡ್ ಕಾಲೋನಿ ನಿವಾಸಿ ವೆಂಕಟೇಶ್ ಅವರ ಪತ್ನಿ ಸರೋಜಮ್ಮ(79) ಬುಧವಾರ ರಾತ್ರಿ ನಿಧನರಾದರು.



ಮೃತರು ಪತಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ತಾಲೂಕು ಕಚೇರಿ ಪಕ್ಕದಲ್ಲಿರುವ ಚಿತಾಗಾರದಲ್ಲಿ ಗುರುವಾರ ಮಧ್ಯಾಹ್ನ ನಡೆಯಿತು.

ಮೂರನೇ ಪುಟದಿಂದ

ಏಕರೂಪ ನಾಗರಿಕ ಸಂಹಿತೆ ಜಾರಿ

ಶಾಶ್ವತ ಸಂತೋಷ ಕಾಣಬಹುದು. ಇದು ಸಮಾಜದಲ್ಲಿ ಜವಾಬ್ದಾರಿ ಸೃಷ್ಟಿಸುತ್ತದೆ. ಸಾಮರಸ್ಯವಿರುವ ಸಮಾಜದಲ್ಲಿ ಪ್ರತಿಯೊಬ್ಬರ ಕಲ್ಯಾಣ ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಪಾಶ್ಚಿಮಾತ್ಯ ಹಾಗೂ ಭಾರತದ ನಡುವಿನ ವ್ಯತ್ಯಾಸ: ಪಾಶ್ಚಿಮಾತ್ಯ ಹಾಗೂ ಭಾರತದ ನಡುವಿನ ಸಾಮಾಜಿಕ ಚಿಂತನೆಯ ವ್ಯತ್ಯಾಸವನ್ನು ಇದೇ ವೇಳೆ ಸಮಗ್ರವಾಗಿ ವಿವರಿಸಿದರು. ಪಾಶ್ಚಿಮಾತ್ಯರಲ್ಲಿ ಪರಸ್ಪರ ಲಾಭದ ಉದ್ದೇಶದಿಂದ ಒಟ್ಟಿಗೆ ಸೇರಲಿದ್ದಾರೆ. ಅದು ಸಾಮಾಜಿಕ ಒಪ್ಪಂದದ ಪರಿಕಲ್ಪನೆ ಆಧರಿಸಿದೆ. ತಮ್ಮ ಅಸ್ತಿತ್ವಕ್ಕಾಗಿ ಮತ್ತೊಬ್ಬರ ವಿರುದ್ಧ ಹೋರಾಟ ಮಾಡುವುದು ಅವರ ಪರಿಕಲ್ಪನೆಯಾಗಿದೆ. ಆ ಮೂಲಕ ಬಲಿಷ್ಠರಾಗಿ ಬದುಕುತ್ತಾರೆ ಎಂದು ಹೇಳಿದರು. ಪಾಶ್ಚಿಮಾತ್ಯರು, ತಮ್ಮ ಪರಿಶ್ರಮಕ್ಕಿಂತ ಇತರರ ಲಾಭದಲ್ಲಿ ಬದುಕಲು ಬಯಸುತ್ತಾರೆ. ಇದು ಒಂದು ರೀತಿಯ ಅವರ ಸ್ವಾರ್ಥವನ್ನು ಬಿಂಬಿಸುತ್ತದೆ ಎಂದು ಡಾ.ಮೋಹನ್ ಭಾಗವತ್ ಅರ್ಥೈಸಿದರು.

ಭಾರತಕ್ಕೆ ಬಂದ ಪಾಶ್ಚಿಮಾತ್ಯರು, ತಾವೇ ಮಾಡಿದ ಕಾನೂನನ್ನು ತಾವೇ ನಿರ್ಲಕ್ಷಿಸಿದರು. ತಾವು ರೂಪಿಸಿದ ಕಾನೂನು ನ್ಯಾಯ ಸಮ್ಮತವಲ್ಲ ಎಂಬುದು ಅವರಲ್ಲಿ ಮನದಟ್ಟಾಯಿತು ಎಂದು ಹೇಳಿದರು. ಆದರೆ, ಭಾರತದ ಸಮಾಜದಲ್ಲಿ ಸದೃಢರು, ದುರ್ಬಲರನ್ನ ಸಹಬಾಳ್ವೆಯಡಿ ಬದುಕಲು ಸಹಾಯ ಮಾಡುತ್ತಾರೆ. ಇತರರ ಒಳಿತಿಗಾಗಿ ಉದಾರತೆ ತೋರುತ್ತಾರೆ. ನಮ್ಮ ಭಾರತೀಯ ಸಮಾಜದಲ್ಲಿ ಬಡವರು ಹಾಗೂ ಅನಕ್ಷರಸ್ಥರ ದೈನಂದಿನ ಜೀವನದಲ್ಲಿ ಇಂತಹ ಮನೋಭಾವನೆ ಹಾಸುಹೊಕ್ಕಾಗಿದೆ ಎಂದು ಭಾರತೀಯರ ಸಾಮಾಜಿಕ ಚಿಂತನೆಯನ್ನು ಸೂಚ್ಯವಾಗಿ ವ್ಯಾಖ್ಯಾನಿಸಿದರು.

ಭಾರತೀಯ ಸಮಾಜದಲ್ಲಿ ಪರಸ್ಪರ ಹಂಚಿಕೊಳ್ಳುವ ಅನುಭವಗಳಿವೆ. ಸಾಮಾನ್ಯ ಪರಿಸರ ಹಾಗೂ ಏಕತೆಯ ಪ್ರಜ್ಞೆಯ ಮೂಲಕ ಶತ ಶತಮಾನಗಳಿಂದ ರೂಪುಗೊಂಡ ವಿಶಿಷ್ಟ ಸಮುದಾಯ ನಮ್ಮದು ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಭಾರತೀಯರು ಭಾತೃತ್ವ ಮತ್ತು ಪರಸ್ಪರ ಸಹಾಯದೊಂದಿಗೆ ನಾಗರಿಕತೆ ಕಟ್ಟಿದ್ದಾರೆ. ನಮ್ಮ ಸಮಾಜವು ಪರೋಪಕಾರಿ ಪರಿಕಲ್ಪನೆಯದಾಗಿದೆ. ಕರ್ತವ್ಯವೇ ಜೀವನದ ಪರಮ ಗುರಿಯೆಂದು ಭಾರತೀಯರು ಅರಿತಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಅತ್ಯಮೂಲ್ಯ ಜೀವನ ಪಾಠ: ಇದೇ ವೇಳೆ ಭಾರತದ ರಾಷ್ಟ್ರೀಯತೆಯ ಪರಿಕಲ್ಪನೆ ಬಗ್ಗೆ ಮಾತನಾಡಿದ ಡಾ.ಮೋಹನ್ ಭಾಗವತ್ ಅವರು, ಪಾಶ್ಚಿಮಾತ್ಯ ರಾಷ್ಟ್ರಗಳನ್ನು ರಾಜ್ಯ, ಸರ್ಕಾರ ಮತ್ತು ರಾಜಕೀಯ ಗಡಿಗಳಿಂದ ವ್ಯಾಖ್ಯಾನಿಸಲಾಗಿದೆ. ಆದರೆ ಭಾರತದಲ್ಲಿ ಭೂಮಿಯೇ ರಾಷ್ಟ್ರೀಯ ಗುರುತಿನ ಆಧಾರ ಎಂದರು. ಅಭಿವೃದ್ಧಿ ಎಂಬುದು ಒಂದು ವಸ್ತುವಲ್ಲ, ಅದು ಜ್ಞಾನ ಕೂಡ ಆಗಿದೆ. ಇದನ್ನು ನಮ್ಮಲ್ಲಿ ನಾವೇ ಕಂಡು ಕೊಳ್ಳಬೇಕು. ಅಂದರೆ ಮೇಲು–ಕೀಳು ಎಂಬ ತಾರತಮ್ಯವಿಲ್ಲದೆ, ಅಸಮಾನತೆ ದೂರ ಮಾಡಿ ಮನಸ್ಸನ್ನು ಸ್ವಚ್ಛಗೊಳಿಸಿಕೊಳ್ಳಬೇಕು. ಭೇದ–ಭಾವವಿಲ್ಲದ ಮುಕ್ತ ಮನಸ್ಸು ಹೊಂದಬೇಕು ಎಂದು ಸಲಹೆ ನೀಡಿದರು.

ಕೆಟ್ಟ ಸಂಪಾದನೆ ಬೇಡವೆಂಬ ಅಚಲ ನಿರ್ಧಾರ ಕೈಗೊಳ್ಳಬೇಕು. ನಮ್ಮ ಬೆಳವಣಿಗೆಯಲ್ಲಿ ಸ್ವಾರ್ಥ ಬಿಟ್ಟು, ಸದ್ಭಾವನೆ ಇರಬೇಕು. ನಮ್ಮ ದೇಶದಲ್ಲಿ ಆದಾಯ ಕಡಿಮೆ, ಜನರ ಬೇಡಿಕೆ ಹಾಗೂ ಅವಶ್ಯಕತೆ ಹೆಚ್ಚು ಎಂಬುವುದು ಸತ್ಯ. ಆದರೆ ಶ್ರೀಮಂತಿಕೆ ಹಾಗೂ ಅಭಿವೃದ್ಧಿ ಏಕ ವ್ಯಕ್ತಿಗೆ ಸೀಮಿತವಾಗದೆ ಸಾಮೂಹಿಕವಾಗಬೇಕು. ಆಗ ಸಮಾಜದಲ್ಲಿ ಆರೋಗ್ಯಕರ ವಾತಾವರಣ ಕಾಣಲು ಸಾಧ್ಯವಾಗುತ್ತದೆ ಎಂದರು.

ಸಮಾನತೆ, ಸದ್ಭಾವನೆ, ಏಕತೆ ಆಲೋಚನೆಯಿಂದ ಬರಬೇಕು. ಅಸಮಾನತೆ, ಅಸ್ಪೃಶ್ಯತೆ, ಮೇಲು–ಕೀಳು ಎಂಬ ತಾರತಮ್ಯವನ್ನು ದೂರ ಮಾಡಿ ನಾವೆಲ್ಲಾ ಒಂದು ಎಂಬ ಭಾವನೆ ಬರಬೇಕು ಎಂದು ಡಾ.ಮೋಹನ್ ಭಾಗವತ್ ಪುನರುಚ್ಚರಿಸಿದರು.

ಏಕತಾ ಭಾವನೆ ಅನಿವಾರ್ಯ: ವಿಭಿನ್ನತೆಯು ವ್ಯಕ್ತಿಗತವಾಗಿ ಎಲ್ಲರಲ್ಲೂ ಇದೆ. ಇದು ನಮ್ಮ ನಡುವಿನ ಅಂತರಕ್ಕೆ ಕಾರಣವಾಗಬಹುದು. ಈ ಹಿನ್ನೆಲೆಯಲ್ಲಿ ಸಮಾನತೆ ಮೂಡಿಸಲು ಮನಸ್ಸಿನಲ್ಲಿ ಭೇದ–ಭಾವದ ಕಲ್ಮಶ ಮುಕ್ತಗೊಳಿಸಬೇಕು. ಮತ್ತೊಬ್ಬರಿಗೆ ತೊಂದರೆ ಕೊಡದೆ ಎಲ್ಲರೂ ನಮ್ಮವರೇ ಎಂಬ ಏಕತಾ ಭಾವನೆ ಮೂಡಬೇಕು ಎಂದು ಒತ್ತಿ ಹೇಳಿದರು.



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠದಲ್ಲಿ ಗುರುವಾರ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಸುವರ್ಣ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ 15ನೇ ವಿಶೇಷ ಉಪನ್ಯಾಸ ಕಾರ್ಯಕ್ರಮಕ್ಕೆ ಆಗಮಿಸಿದ ಆರ್‌ಎಸ್‌ಎಸ್ ಮುಖ್ಯಸ್ಥ ಡಾ.ಮೋಹನ್ ಭಾಗವತ್ ಅವರಿಗೆ ಸಾಂಪ್ರದಾಯಿಕ ಪೂರ್ಣಕುಂಭ ಸ್ವಾಗತ ಕೋರಲಾಯಿತು.

ಧರ್ಮವು ಮಾನವನ ಸರ್ವಾಂಗೀಣ ಪ್ರಗತಿಯ ಅಡಿಪಾಯವಾಗಿದ್ದು, ಸೌಹಾರ್ದತೆಯು ಹಿತವಾದ ಸಂಗೀತದಂತೆ ಸುಶ್ರಾವ್ಯವಾಗಿರಬೇಕು. ಯಾವುದೇ ಕಾರಣಕ್ಕೂ ಎಂತಹ ಸಮಯದಲ್ಲೂ ಸಂಯಮ ಕಳೆದುಕೊಳ್ಳಬಾರದು. ಇಲ್ಲದಿದ್ದರೆ ಏಕತಾ ಭಾವನೆ ಹಾಗೂ ಸಮಭಾವದ ಸೌಹಾರ್ದತೆ ಮೂಡುವುದಿಲ್ಲ ಎಂದು ಪ್ರತಿಪಾದಿಸಿದರು. ದಯೆ ಇದ್ದ ಕಡೆ ಧರ್ಮವಿರುತ್ತದೆ. ಆಶ್ರಯ ಅರಸಿ ಬಂದ ಹಕ್ಕಿಯನ್ನು ರಕ್ಷಿಸಲು ತನ್ನನ್ನೇ ಅರ್ಪಿಸಿಕೊಂಡ ಸಿಬಿ ಚಕ್ರವರ್ತಿಯ ತ್ಯಾಗ, ದಯೆ ನಮಗೆ ಮಾದರಿಯಾಗಬೇಕು. ಈ ತ್ಯಾಗ, ಕರುಣೆ, ದಯೆ ಸೌಹಾರ್ದತೆಯಲ್ಲಿದೆ ಎಂಬ ಕಟು ಸತ್ಯವನ್ನು ಅರಿಯಬೇಕು ಎಂದು ಕಿವಿಮಾತು ಹೇಳಿದರು.

ಅಭಿವೃದ್ಧಿಯು ದೇಹ, ಮನಸ್ಸು, ಬುದ್ಧಿ ಶಕ್ತಿ ಹಾಗೂ ಆತ್ಮದ ಬೆಳವಣಿಗೆಯನ್ನ ಒಳಗೊಂಡಿರಬೇಕು. ಸಂಪನ್ಮೂಲ ಹಂಚಿಕೊಳ್ಳಬೇಕು. ಪ್ರಜಾಪ್ರಭುತ್ವ ಯಶಸ್ವಿಯಾಗಲು ಏಕತೆ ಪ್ರತಿಬಿಂಬಿತವಾಗಬೇಕು. ಸಾಮಾಜಿಕ ಸಾಮರಸ್ಯ ಕಾಪಾಡಿಕೊಳ್ಳಲು ಗುಣಮಟ್ಟದ ಭಾವನೆ ರೂಢಿಸಿಕೊಳ್ಳಬೇಕು. ಜಾತಿ, ಭಾಷೆ, ಧಾರ್ಮಿಕ ಅಡೆ–ತಡೆಗಳನ್ನು ಮೀರಿದ ಸಂಬಂಧ ಬೆಳೆಸಬೇಕು ಎಂದು ಡಾ.ಮೋಹನ್ ಭಾಗವತ್ ಸಲಹೆ ನೀಡಿದರು.

ಸತ್ಯಸಾಯಿ ಆಶ್ರಮದ ಮಧುಸೂದನ ಸಾಯಿ ಅವರ 14ನೇ ಉಪನ್ಯಾಸದ 'ಆತ್ಮನೊ ಮೋಕ್ಷಂ ಜಗತ್ ಹಿತಾಯಚ' ಕೃತಿಯನ್ನು ಇದೇ ವೇಳೆ ಬಿಡುಗಡೆ ಮಾಡಿದರು. ಮೈಸೂರು ಸಂಪ್ರದಾಯದಂತೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಡಾ.ಮೋಹನ್ ಭಾಗವತ್ ಅವರಿಗೆ ಮೈಸೂರು ಪೇಟ ತೊಡಿಸಿ, ಸನ್ಮಾನಿಸಿದರು. ಅಲ್ಲದೆ ಫಲ ತಾಂಬೂಲದೊಂದಿಗೆ ಆನೆಯ ಮೂರ್ತಿಯನ್ನು ನೆನಪಿನ ಕಾಣಿಕೆಯಾಗಿ ನೀಡಿದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಸಂಶೋಧನಾ ಅಕಾಡೆಮಿಯ ಪ್ರೊ ಛಾನ್ಸಿಲರ್ ಪ್ರೊ.ಬಿ.ಸುರೇಶ್ ಸ್ವಾಗತಿಸಿದರು. ಗಾಯಕಿಯರಾದ ಕೆ.ಜಿ.ವಿನುತ, ಅಮೂಲ್ಯ ಪ್ರಾರ್ಥನೆ ಮಾಡಿದರು.







ಮೈಸೂರಿನ ಸುತ್ತೂರು ಶಾಖಾ ಮಠದಲ್ಲಿ ಗುರುವಾರ ನಡೆದ ಉಪನ್ಯಾಸ ಕಾರ್ಯಕ್ರಮದ ವೇಳೆ ಡಾ.ಮೋಹನ್ ಭಾಗವತ್ ಅವರು ಮೈಸೂರಿನ ಆರ್‌ಎಸ್‌ಎಸ್ ಹಿರಿಯ ಮುಖಂಡರಾದ ವೆಂಕಟರಾಮ್ ಅವರ ಕುಶಲೋಪರಿ (ಎಡ ಚಿತ್ರ) ನಡೆಸಿದರು. ಇದೇ ವೇಳೆ ಮಾಜಿ ಸಂಸದ ಪ್ರತಾಪ್ ಸಿಂಹ (ಮಧ್ಯಚಿತ್ರ), ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ಸಂದೇಶ್ ಸ್ವಾಮಿ ಇತರರು ಡಾ. ಮೋಹನ್ ಭಾಗವತ್ ಅವರನ್ನು ಸ್ವಾಗತಿಸಿ, ಅಭಿನಂದನೆ ಸಲ್ಲಿಸಿದರು.

ಪತ್ನಿಗೆ ಜೀವನಾಂಶ ನಿರಾಕರಿಸಲು ಸಾಧ್ಯವಿಲ್ಲ!

ಫ್ಯಾಮಿಲಿ ಕೋರ್ಟ್‌ಗೆ ಸೂಚಿಸಿದೆ. ಬೆಂಗಳೂರಿನ 24 ವರ್ಷದ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ವಿಲೇವಾರಿ ಮಾಡುವ ಮೂಲಕ ನ್ಯಾಯಮೂರ್ತಿ ಡಾ. ಕೆ.ಮನ್ಮಥ ರಾವ್ ಅವರು ಈ ಆದೇಶ ಹೊರಡಿಸಿದ್ದಾರೆ. ಸೆಪ್ಟೆಂಬರ್ 17, 2025ರಂದು ನಗರದ ಕುಟುಂಬ ನ್ಯಾಯಾಲಯದ VI ಹೆಚ್ಚುವರಿ ಪ್ರಧಾನ ನ್ಯಾಯಾಧೀಶರು ನೀಡಿದ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಈ ಹಿಂದಿನ ಆದೇಶವನ್ನು ಬದಿಗಿಟ್ಟು, ಸಂಬಂಧಪಟ್ಟ ಆಸ್ತಿ ಮತ್ತು ಹೊಣೆಗಾರಿಕೆಗಳ ಅಫಿಡವಿಟ್ ಮತ್ತು ಸೂಕ್ತ ಆದೇಶಗಳನ್ನು ನೀಡಲು ಕುಟುಂಬ ನ್ಯಾಯಾಲಯಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ. ಹಿಂದೂ ವಿವಾಹ ಕಾಯ್ದೆಯ ಸೆಕ್ಷನ್ 24ರ ಅಡಿಯಲ್ಲಿ ಪತ್ನಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದಾರೆ, ತಿಂಗಳಿಗೆ 50,000 ರೂ. ಮಧ್ಯಂತರ ಜೀವನಾಂಶ ಮತ್ತು 1 ಲಕ್ಷ ರೂ. ವ್ಯಾಜ್ಯ ವೆಚ್ಚ ಕೋರಿದ್ದರು, ಆದರೆ ಇದಕ್ಕೆ ಪತಿ ಆಕ್ಷೇಪಣೆ ಸಲ್ಲಿಸಿದರು. ಹೀಗಾಗಿ ಕೌಟುಂಬಿಕ ನ್ಯಾಯಾಲಯವು ಆಕೆಯ ಅರ್ಜಿಯನ್ನು ವಜಾಗೊಳಿಸಿತು, ಆಕೆ ತನ್ನ ಪತಿಯೊಂದಿಗೆ ಕೇವಲ 6–7 ತಿಂಗಳುಗಳ ಕಾಲ ಮಾತ್ರ ಸಂಸಾರ ಮಾಡಿದ್ದಾಳೆ. ಹೀಗಾಗಿ ಯಾವುದೇ ಮಧ್ಯಂತರ ನಿರ್ವಹಣೆ ಮತ್ತು ಮೊಕದ್ದಮೆ ವೆಚ್ಚ ಪಡೆಯಲು ಅರ್ಹಳಲ್ಲ ಎಂದು ಹೇಳಿ, ಈ ವಿಷಯವನ್ನು ಸಾಕ್ಷ್ಯಕ್ಕಾಗಿ ಮುಂದೂಡಿತ್ತು.

ಆಕೆ ಬಿಕಾಂ ಓದುತ್ತಿದ್ದಾಳೆ ಮತ್ತು ನಿರುದ್ಯೋಗಿಯಾಗಿದ್ದಾಳೆ, ಆದರೆ ಪತಿ ದುಬೈನಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದು ತಿಂಗಳಿಗೆ 8 ಲಕ್ಷ ರೂ ಆದಾಯ ಗಳಿಸುತ್ತಿದ್ದಾರೆ ಎಂದು ಮಹಿಳೆಯ ವಕೀಲರು ಅರ್ಜಿ ಸಲ್ಲಿಸಿದರು.

ಮಹಿಳೆ ತಾನು ಬಿಕಾಂ ಓದುತ್ತಿದ್ದೇನೆ ಮತ್ತು ಉದ್ಯೋಗದಲ್ಲಿಲ್ಲ ಎಂದು ಸುಳ್ಳು ಹೇಳಿದ್ದಾಳೆ ಎಂದು ಪತಿಯ ವಕೀಲರು ವಾದಿಸಿದ್ದರು. ವಾಸ್ತವವಾಗಿ, ಅವರು ಆರ್ಥಿಕವಾಗಿ ಸ್ಥಿರವಾಗಿದ್ದಾರೆ ಎಂದು ವಕೀಲರು ಸಲ್ಲಿಸಿದರು. ದುಬೈನಲ್ಲಿ ಬಂದು ತನ್ನೊಂದಿಗೆ ವಾಸಿಸುವಂತೆ ಪತಿ ಪದೇ ಪದೇ ವಿನಂತಿಸಿದರೂ, ಪತ್ನಿ ನಿರಾಕರಿಸಿದರು. ಹೀಗಾಗಿ ಅರ್ಜಿಯನ್ನು ವಜಾಗೊಳಿಸಬೇಕು ಎಂದು ಅವರು ನ್ಯಾಯಾಲಯದಲ್ಲಿ ಪ್ರಾರ್ಥಿಸಿದರು. ಸೆಕ್ಷನ್ 24ರ ನಿಬಂಧನೆಗಳ ಪ್ರಾಥಮಿಕ ಉದ್ದೇಶವೆಂದರೆ ಹಕ್ಕುದಾರ ಸಂಗಾತಿಗೆ ಆರ್ಥಿಕ ಬೆಂಬಲ ನೀಡುವುದು, ಅವರು ತಮ್ಮನ್ನು ತಾವು ನಿರ್ವಹಿಸಲು ಮತ್ತು ಕಾನೂನು ಪ್ರಕ್ರಿಯೆಗಳನ್ನು ನಡೆಸಲು ಅನುವು ಮಾಡಿಕೊಡಬೇಕು ಎಂದು ನ್ಯಾಯಾಲಯ ಹೇಳಿದೆ.

ರಾಜ್ಯದ ಜನ!!!

ದಾಖಲೆ ಮದ್ಯ ಮಾರಾಟಕ್ಕೆ ಕಾರಣ!: ಕರ್ನಾಟಕದ ಗಡಿಗೆ ಹೊಂದಿಕೊಂಡಿರುವ ಕೇರಳ ಮತ್ತು ತಮಿಳುನಾಡು ವಿಧಾನ ಸಭೆಗೆ ಏಪ್ರಿಲ್‌ನಲ್ಲಿ ನಡೆದ ಚುನಾವಣೆಯಿಂದ ರಾಜ್ಯದಲ್ಲಿ ಮದ್ಯ ಮಾರಾಟ ಹೆಚ್ಚಳವಾಗಿರುಹುದು ಎನ್ನಲಾಗಿದೆ ಮತದಾನಕ್ಕೂ ಮುನ್ನ ಈ ರಾಜ್ಯಗಳಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿತ್ತು. ಆದ್ದರಿಂದ ಕೇರಳ, ತಮಿಳುನಾಡಿಗೆ ಹೊಂದಿಕೊಂಡ ರಾಜ್ಯದ ಗಡಿ ಭಾಗಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮದ್ಯ ಮಾರಾಟವಾಗಿದೆ. ಅಷ್ಟೇ ಅಲ್ಲದೇ ರಾಜ್ಯದ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನ ಸಭಾ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯೂ ಮದ್ಯ ಮಾರಾಟ ಹೆಚ್ಚಳವಾಗಲು ಕಾರಣವಾಗಿರುಹುದು ಎನ್ನಲಾಗುತ್ತಿದೆ

ಮತದಾನ ಹಕ್ಕೂ ನಿರಾಕರಣೆ!?

ಇದರಿಂದ ವಿಧಾನಸಭಾಧ್ಯಕ್ಷರ ಮೇಲಿನ ಒತ್ತಡ ಕಡಿಮೆಯಾಗಲಿದೆ. ಶಾಸಕರಿಗೆ ಬಾಧ್ಯತೆಯ ನಿರ್ದೇಶನ ನೀಡುವಲ್ಲಿ ಪಕ್ಷದ ವಿಪ್ ಮತ್ತು ವಿಧಾನಮಂಡಲ ಪಕ್ಷದ ಮುಖ್ಯ ವಿಪ್‌ಗಳ ಅಧಿಕಾರದ ಬಗ್ಗೆ ಸ್ಪಷ್ಟತೆ ತರಬೇಕೆಂಬ ವಿಚಾರವನ್ನೂ ಸಮಿತಿ ಪರಿಶೀಲಿಸುತ್ತಿದೆ. ಅನರ್ಹತಾ ಅರ್ಜಿಗಳ ತೀರ್ಮಾನದಲ್ಲಿ ಆಗುತ್ತಿರುವ ವಿಳಂಬವನ್ನು ತಪ್ಪಿಸಲು, ಪಕ್ಷಾಂತರ ಮಾಡಿದ ಸದಸ್ಯರ ವಿರುದ್ಧದ ಅರ್ಜಿಗಳನ್ನು ತೀರ್ಮಾನಿಸಲು ಕಾನೂನುಬದ್ಧ ಸಮಯ ಮಿತಿಯನ್ನು ನಿಗದಿಪಡಿಸುವ ಸಾಧ್ಯತೆಯನ್ನೂ ಸಮಿತಿ ಪರಿಶೀಲಿಸುತ್ತಿದೆ. ಈ ಪ್ರಕ್ರಿಯೆ ವರ್ಷಗಳ ಕಾಲ ಸಾಗುತ್ತದೆ. ಇದನ್ನು ಮೂರರಿಂದ ಆರು ತಿಂಗಳೊಳಗೆ ಮುಗಿಸುವಂತೆ ನಿಗದಿ ಮಾಡಲು ಆಶಿಸುತ್ತಿದ್ದೇವೆ ಎಂದು ಯು ಟಿ ಖಾದರ್ ಹೇಳಿದರು.

ಮೈಸೂರಲ್ಲಿ ಸಭೆ: ಉತ್ತರ ಪ್ರದೇಶ ವಿಧಾನಸಭಾಧ್ಯಕ್ಷರ ನೇತೃತ್ವದ ನಿಯಮಗಳು ಮತ್ತು ವಿಧಾನಗಳು ಕುರಿತ ಮತ್ತೊಂದು ಸಮಿತಿ ಮೇ 12 ಮತ್ತು 13ರಂದು ಮೈಸೂರಿನಲ್ಲಿ ಸಭೆ ನಡೆಸಲಿದೆ. ವಿವಿಧ ರಾಜ್ಯ ವಿಧಾನಸಭೆಗಳಲ್ಲಿ ಏಕರೂಪ ನಿಯಮಗಳನ್ನು ಜಾರಿಗೊಳಿಸುವ ಸಾಧ್ಯತೆಗಳನ್ನು ಈ ಸಮಿತಿ ಪರಿಶೀಲಿಸಲಿದೆ. ಈ ಸಮಿತಿಯಲ್ಲಿ ಹಿಮಾಚಲ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ನಾಗಾಲ್ಯಾಂಡ್ ಮತ್ತು ದೆಹಲಿ ವಿಧಾನಸಭಾಧ್ಯಕ್ಷರು ಸದಸ್ಯರಾಗಿದ್ದಾರೆ. ಪ್ರತಿ ರಾಜ್ಯದಲ್ಲೂ ವಿಭಿನ್ನ ನಿಯಮಗಳು ಮತ್ತು ವಿಧಾನಗಳಿದ್ದರೂ, ಸುಮಾರು 80 ಶೇಕಡಾ ನಿಯಮಗಳು ಒಂದೇ ರೀತಿಯವಾಗಿವೆ. ಉತ್ತಮ ಪದ್ಧತಿಗಳನ್ನು ಪರಿಶೀಲಿಸಿ ಸಾಮಾನ್ಯ ನಿಯಮಗಳು ಮತ್ತು ವಿಧಾನಗಳನ್ನು ಶಿಫಾರಸು ಮಾಡುತ್ತೇವೆ ಆ ವರದಿಯನ್ನು ಆರು ತಿಂಗಳೊಳಗೆ ಸಲ್ಲಿಸಲಾಗುವುದು ಎಂದು ಯು.ಟಿ.ಖಾದರ್ ತಿಳಿಸಿದರು.

600 ಹಾಸಿಗೆಗಳ ಸಾಮರ್ಥ್ಯಕ್ಕೆ ಏರಿಕೆ

ಅವುಗಳ ಆವಾಸ ಸ್ಥಾನಗಳ ಬಗ್ಗೆ ಪ್ರವಾಸಿಗರಿಗೆ ಮಾಹಿತಿ ಹಾಗೂ ರೋಮಾಂಚಕ ಅನುಭವ ನೀಡುವ ತಂತ್ರಜ್ಞಾನ ಬಳಕೆ ಮಾಡ ಲಾಗುತ್ತದೆ. ವನ್ಯಜೀವಿಗಳನ್ನು ಹತ್ತಿರ ದಿಂದ ನೋಡುವ ಅನುಭವ, ಸಂವೇದನಾ ಸಂಕೇತಗಳು, ತಂತ್ರಜ್ಞಾನ ಆಧಾರಿತ ಮಾಹಿತಿ ಫಲಕಗಳು, ವಿಷಯಾಧಾರಿತ ವಿನ್ಯಾಸ, ಕಥೆ ಶೈಲಿಯಲ್ಲಿ ವನ್ಯಜೀವಿ ಪರಿಸರ ಚಿತ್ರಿಸುವುದು. ಸಂದರ್ಶಕರಲ್ಲಿ ವನ್ಯಜೀವಿ ಸಂರಕ್ಷಣೆ ಅರಿವು ಮೂಡಿಸುವ ಎಲ್‌ಇಡಿ ಪರದೆ ಮತ್ತು ಮಾರ್ಗಸೂಚಿಗಳನ್ನು 80 ಕೋಟಿ ರೂ. ವೆಚ್ಚದಲ್ಲಿ ಅಳವಡಿಸಲಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ ದೇವಾಲಯದ ಮೂರನೇ ಹಂತದ ಕಾಮಗಾರಿಗಳನ್ನು 604.65 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು. ದೊಡ್ಡಬಳ್ಳಾಪುರದ ಘಾಟಿ ಸುಬ್ರಹ್ಮಣ್ಯ ದೇವಾಲಯದಲ್ಲಿ 23.76 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗೆ ಸಂಪುಟ ಸಮ್ಮತಿಸಿದೆ. ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿ ನಗರಕ್ಕೆ ಬಸವಸಾಗರ ಜಲಾಶಯದಿಂದ ಕುಡಿಯುವ ನೀರು ಕಲ್ಪಿಸುವ 132.50 ಕೋಟಿ ರೂ. ವೆಚ್ಚದ ಕಾಮಗಾರಿಗೆ ಸಂಪುಟ ಅನುಮೋದನೆ ನೀಡಿದೆ.

31 ಮಂದಿ ಸಚಿವರಾಗಿ ಪ್ರಮಾಣ ಸ್ವೀಕಾರ

ಈ ಐತಿಹಾಸಿಕ ಕ್ಷಣಕ್ಕೆ ಪ್ರಧಾನಿ ನರೇಂದ್ರ ಮೋದಿ , ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ನಿತೀಶ್ ಕುಮಾರ್ ಸಾಕ್ಷಿಯಾದರು. ಎನ್‌ಡಿಎ ಮೈತ್ರಿಕೂಟದ ಪ್ರಮುಖ ನಾಯಕರೆಲ್ಲರೂ ಒಂದೇ ವೇದಿಕೆಯಲ್ಲಿ ಕಾಣಿಸಿಕೊಳ್ಳುವ ಮೂಲಕ ಮುಂಬರುವ ಚುನಾವಣೆಗೆ ತಮ್ಮ ಒಗ್ಗಟ್ಟಿನ ಸಂದೇಶ ರವಾನಿಸಿದರು. ನೂತನ ಸಂಪುಟದಲ್ಲಿ ಅನುಭವ ಮತ್ತು ಯುವ ಉತ್ಸಾಹಕ್ಕೆ ಆದ್ಯತೆ ನೀಡಲಾಗಿದೆ. ನಿಶಾಂತ್ ಕುಮಾರ್ ಸಂಪುಟ ಸೇರಿರುವುದು ಬಿಹಾರ ರಾಜಕೀಯದಲ್ಲಿ ಹೊಸ ಚರ್ಚೆಗೆ ಕಾರಣವಾಗಿದೆ.

ಸಿಎಂ, ಡಿಸಿಎಂ ದೆಹಲಿಗೆ

ಪುನರ್ ರಚನೆಗೆ ಅವಕಾಶ ಮಾಡಿಕೊಡುವುದರ ಮೂಲಕ ಗೊಂದಲಗಳಿಗೆ ಇತಿಶ್ರೀ ಹಾಡಿ ಎಂದು ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಅವರಿಗೆ ಮನವಿ ಮಾಡಿಕೊಳ್ಳಲಿದ್ದಾರೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ. ಸಿದ್ದರಾಮಯ್ಯ ಅಧಿಕಾರ ಉಳಿಸಿಕೊಳ್ಳಲು ಒಂದೆಡೆ ಕಸರತ್ತು ನಡೆಸಿದರೆ, ಮತ್ತೊಂದೆಡೆ ಶಿವಕುಮಾರ್ ತಮಗೆ ಈ ತಿಂಗಳಲ್ಲೇ ಅಧಿಕಾರ ಹಸ್ತಾಂತರ ಆಗಲಿದೆ ಎಂಬ ವಿಶ್ವಾಸದಲ್ಲಿ ಇದ್ದಾರೆ.

ಕೇರಳಂನಲ್ಲಿ ಸರ್ಕಾರ ರಚನೆ ಆಗುತ್ತಿದ್ದಂತೆ ತಮ್ಮನ್ನು ಹಾಗೂ ಮುಖ್ಯಮಂತ್ರಿ ಅವರನ್ನು ಮೇ 9 ಇಲ್ಲವೇ 14ರಂದು ದೆಹಲಿಗೆ ಬರುವಂತೆ ವರಿಷ್ಠರು ಸೂಚಿಸಲಿದ್ದಾರೆ ಎಂಬುದಾಗಿ ಶಿವಕುಮಾರ್ ತಮ್ಮ ಆಪ್ತ ವಲಯದಲ್ಲಿ ಹೇಳಿಕೊಂಡಿದ್ದಾರೆ. ಮೇ 20ರೊಳಗೆ ಕರ್ನಾಟಕ ಕಾಂಗ್ರೆಸ್‌ನಲ್ಲಿನ ಗೊಂದಲ ಬಗೆಹರಿಸಿ ತಮಗೆ ಮುಖ್ಯಮಂತ್ರಿ ಸ್ಥಾನವನ್ನು ವರಿಷ್ಠರು ದೊರಕಿಸಿಕೊಡಲಿದ್ದಾರೆ ಎಂಬ ಆಶಾಭಾವನೆ ಹೊಂದಿದ್ದಾರೆ.

ಮೈಸೂರು ಮಿತ್ರ

118 ಶಾಸಕರ ಸಹಿಯುಳ್ಳ ಪತ್ರದೊಂದಿಗೆ ಬನ್ನಿ...

ಚೆನ್ನೈ, ಮೇ 7– ತಮಿಳುನಾಡು ಚುನಾವಣೆಯಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ಟಿವಿಕೆ ಸರ್ಕಾರ ರಚಿಸಲು ಅಗತ್ಯ ಸಂಖ್ಯಾಬಲ ಹೊಂದಿದೆ ಎಂಬುದನ್ನ ಮನವರಿಕೆ ಮಾಡಲು ನಟ ವಿಜಯ್ ಹೆಣಗಾಡುತ್ತಿದ್ದಾರೆ. ಇಂದು ಬೆಳಗ್ಗೆ ಲೋಕಭವನದಲ್ಲಿ ರಾಜ್ಯಪಾಲ ಆರ್.ವಿ.ಅರ್ಲೇಕರ್ ಅವರನ್ನ ವಿಜಯ್ ಭೇಟಿಯಾಗಿ, ಪದಗ್ರಹಣಕ್ಕೆ ಅವಕಾಶ ಕೇಳಿದ್ದಾರೆ. ಮೊದಲು ಪ್ರಮಾಣವಚನ ಸ್ವೀಕರಿಸಿ, ಬಳಿಕ ಬಹುಮತ ಸಾಬೀತುಪಡಿಸುವುದಾಗಿ ಹೇಳಿದ್ದಾರೆ. ಆದರೆ, ವಿಜಯ್ ಅವರ ವಾದ ಒಪ್ಪದ ಗವರ್ನರ್ 118 ಶಾಸಕರ ಸಹಿಯೊಂದಿಗೆ ಬನ್ನಿ ಎಂದು ಹೇಳಿ, 2ನೇ ದಿನವೂ ವಾಪಸ್ ಕಳಿಸಿದ್ದಾರೆ.

ಕಾನೂನು ಏನು ಹೇಳುತ್ತೆ?: ರಾಜ್ಯಪಾಲರು ಬಹುಮತ ಪಡೆದ ಪಕ್ಷಕ್ಕೆ ಮೊದಲು ಸರ್ಕಾರ ರಚನೆಗೆ ಅವಕಾಶ ನೀಡಬೇಕು. ಒಂದು ವೇಳೆ ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ಬರದಿದ್ದರೆ, ಅತೀ ದೊಡ್ಡ ಪಕ್ಷಕ್ಕೆ ಸರ್ಕಾರ ರಚನೆಗೆ ಆಹ್ವಾನ ನೀಡಬಹುದು. ನಂತರ ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸಲು ಅವಕಾಶ ನೀಡಬಹುದು. ಇದು ರಾಜ್ಯಪಾಲರ ವಿವೇಚನಾ ಅಧಿಕಾರ.

ಎಸ್.ಆರ್.ಬೊಮ್ಮಾಯಿ V/s ಕೇಂದ್ರ ಸರ್ಕಾರ ಪ್ರಕರಣದಲ್ಲಿ ಬಹುಮತದ ಪರೀಕ್ಷೆ ರಾಜಭವನದಲ್ಲಿ ಅಲ್ಲ, ವಿಧಾನ ಸಭೆಯಲ್ಲಿ ನಡೆಯಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ರಾಮೇಶ್ವರ್ ಪ್ರಸಾದ್ V/s ಕೇಂದ್ರ ಸರ್ಕಾರ ಪ್ರಕರಣದಲ್ಲಿ ರಾಜ್ಯಪಾಲರು ಊಹೆಗಳ ಆಧಾರದಲ್ಲಿ ಸರ್ಕಾರ ರಚನೆ ತಡೆಯಬಾರದು ಎಂದು ಕೋರ್ಟ್ ಹೇಳಿದೆ. ಶಿವರಾಜ್ ಸಿಂಗ್ ಚೌಹಾನ್ V/s ಮಧ್ಯಪ್ರದೇಶ ಸ್ಪೀಕರ್ ಪ್ರಕರಣದಲ್ಲಿ ಸಂಖ್ಯಾಬಲದ ಅನುಮಾನ ಇದ್ದರೆ ಸದನದಲ್ಲಿ ತ್ವರಿತ ಪರೀಕ್ಷೆ ಅಗತ್ಯ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಮತ್ತೊಮ್ಮೆ ವಿಜಯ್‌ಗೆ ರಾಜ್ಯಪಾಲರ ಸಲಹೆ

ಹೀಗಾಗಿ ಅತಿದೊಡ್ಡ ಪಕ್ಷವಾಗಿರುವುದೇ ಸರ್ಕಾರ ರಚನೆಗೆ ಖಚಿತ ಹಕ್ಕು ಅಲ್ಲ. ಆದರೆ, ಸರ್ಕಾರ ರಚನೆಗೆ ಮೊದಲ ಅವಕಾಶ ಕೇಳುವ ಬಲವಾದ ರಾಜಕೀಯ–ಸಂವಿಧಾನಾತ್ಮಕ ಹಕ್ಕು ಇದೆ. ರಾಜ್ಯಪಾಲರು ತಟಸ್ಥವಾಗಿ ಬಹುಮತ ಪರಿಶೀಲಿಸಬೇಕು ಅಂತಿಮವಾಗಿ ವಿಧಾನಸಭೆಯಲ್ಲಿ ಬಲ ಪರೀಕ್ಷೆ ಮೂಲಕವೇ ಆಗಬೇಕು ಎಂದು ಕಾನೂನು ಹೇಳುತ್ತದೆ.

ಕಾನೂನು ಸಲಹೆ ಪಡೆದ ಬಳಿಕ ರಾಜ್ಯಪಾಲರು ಸರ್ಕಾರ ರಚನೆಗೆ ಅನುಮತಿ ನೀಡಬಹುದು. ಒಂದು ವೇಳೆ ಅನುಮತಿ ನೀಡದಿದ್ದರೆ ವಿಜಯ್ ಸುಪ್ರೀಂಕೋರ್ಟ್ ಅಥವಾ ಹೈಕೋರ್ಟ್ ಮೊರೆ ಹೋಗಬಹುದು. ಬಹುಮತ ಸಾಬೀತುಪಡಿಸಲು ಅವಕಾಶ ನಿರಾಕರಣೆ ಅಥವಾ ಸರ್ಕಾರ ರಚನೆಗೆ ಅವಕಾಶ ನೀಡದಿರುವುದನ್ನು ಪ್ರಶ್ನೆ ಮಾಡಬಹುದು. ಈ ಹಿನ್ನಲೆ ವಿಜಯ್ ಕಾನೂನು ತಂಡ ಪರಿಶೀಲನೆ ಮಾಡುತ್ತಿದೆ. ಹೀಗಾಗಿ ತಮಿಳುನಾಡು ರಾಜಕೀಯ ಒಂದೆರಡು ದಿನಗಳಲ್ಲಿ ಕೋರ್ಟ್ ಮೆಟ್ಟಿಲೇರಿದರೂ ಅಚ್ಚರಿ ಇಲ್ಲ.

ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ, ಇಂದು ವಿಜಯ್ ತಮಿಳುನಾಡು ಸಿಎಂ ಆಗಿ ಪ್ರಮಾಣ ಸ್ವೀಕರಿಸಬೇಕಿತ್ತು. ಆದರೆ ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ಸಿಗದ ಕಾರಣ ಕಾನೂನು ಸಲಹೆ ಪಡೆದು ಮುಂದಿನ ತೀರ್ಮಾನ ಕೈಗೊಳ್ಳಲು ತಮಿಳುನಾಡು ರಾಜ್ಯಪಾಲರು ಮುಂದಾಗಿದ್ದಾರೆ.

ಡಿಎಂಕೆ ಹಾಗೂ ಎಐಎಡಿಎಂಕೆ ಪಕ್ಷಗಳು ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸುವುದು ದೂರದ ಮಾತು ಎನ್ನಲಾಗುತ್ತಿದೆ. ಎರಡೂ ಪಕ್ಷಗಳು ಒಟ್ಟಿಗೆ ಸೇರಿದರೂ ಮ್ಯಾಜಿಕ್ ನಂಬರ್ ಸುಲಭವಲ್ಲ. ಇತರೆ ಪಕ್ಷಗಳ ಬೆಂಬಲ ಬೇಕಾಗುತ್ತದೆ. ಜನರ ತೀರ್ಪು ಧಿಕ್ಕರಿಸಿ ಸರ್ಕಾರ



ರಚಿಸುವುದು ಸರಿಯಲ್ಲ ಎಂದು ಎರಡೂ ಪಕ್ಷದ ನಾಯಕರು ಭಾವಿಸಿದ್ದಾರೆ. ಸ್ಟಾಲಿನ್ ಕೂಡ ಇದೇ ಮಾತು ಹೇಳಿದ್ದಾರೆ.

234 ಸದಸ್ಯ ಬಲದ ತಮಿಳುನಾಡು ವಿಧಾನಸಭೆಯಲ್ಲಿ ಟಿವಿಕೆ 108 ಸ್ಥಾನಗಳನ್ನ ಗೆದ್ದಿದೆ. ಬಹುಮತಕ್ಕೆ ಇನ್ನೂ 10 ಸ್ಥಾನಗಳ ಕೊರತೆಯಿದೆ. ವಿಜಯ್ ಅವರು ಚುನಾವಣೆಯಲ್ಲಿ ಗೆದ್ದ 2 ಕ್ಷೇತ್ರಗಳ ಪೈಕಿ ಒಂದನ್ನ ಬಿಟ್ಟುಕೊಡಲು ಸಜ್ಜಾಗಿರುವುದರಿಂದ, ಪಕ್ಷದ ಪರಿಣಾಮಕಾರಿ ಸಂಖ್ಯೆ 107ಕ್ಕೆ ಇಳಿಯಲಿದೆ. ವಿಜಯ್ ತಿರುಚಿರಾಪಳ್ಳಿ ಪೂರ್ವ ಮತ್ತು ಪೆರಂಬೂರು ಎರಡೂ ಕ್ಷೇತ್ರಗಳಿಂದ ಗೆಲುವು ಸಾಧಿಸಿದ್ದಾರೆ.

ಕಾಂಗ್ರೆಸ್‌ನ 5 ಶಾಸಕರ ಬೆಂಬಲ ಸಿಕ್ಕಿರುವುದರಿಂದ ಒಟ್ಟು ಸ್ಥಾನಗಳ ಸಂಖ್ಯೆ 112 ಆಗಲಿದೆ, ಇನ್ನೂ 6 ಸ್ಥಾನಗಳು ಬಹುಮತಕ್ಕೆ ಬೇಕಿದ್ದು, ವಿಜಯ್ ಮೌಖಿಕ ಬೆಂಬಲ ನೀಡಿದ್ದಾರೆಂದು ಹೇಳಿದ್ದಾರೆ. ಆದರೆ ಬೆಂಬಲ ಪತ್ರವನ್ನು ಪ್ರಸ್ತುತಪಡಿಸುವಂತೆ ರಾಜ್ಯಪಾಲರು ಹೇಳಿದ್ದರಿಂದ ವಿಜಯ್ ಮತ್ತೊಂದು ಸುತ್ತಿನ ಕಸರತ್ತು ನಡೆಸಬೇಕಾಗಿದೆ.

ಟಿವಿಕೆ ಬೆಂಬಲಕ್ಕೆ ನಿಂತ ಸಿಪಿಐ: ಇನ್ನೂ ತಮಿಳುನಾಡಿನ ರಾಜಕೀಯದಲ್ಲಿ ಮತ್ತೊಂದು ಕ್ಷಿಪ್ರ ಬೆಳವಣಿಗೆ ನಡೆದಿದೆ. ವಿಜಯ್‌ಗೆ ವಿಶ್ವಾಸ ಮತ ಯಾಚನೆಗೆ ಅವಕಾಶ ಕೊಡುವಂತೆ ಕೋರಿ ಡಿಎಂಕೆ ಅಂಗ ಪಕ್ಷ ಸಿಪಿಐ ರಾಜ್ಯಪಾಲರಿಗೆ ಪತ್ರ ಬರೆದಿದೆ. 2 ಸ್ಥಾನ ಗೆದ್ದಿರುವ ವಿಸಿಕೆ ಪಕ್ಷ ಕೂಡಾ ವಿಜಯ್ ವಿಚಾರದಲ್ಲಿ ಸಾಫ್ಟ್ ಕಾರ್ನರ್ ತೋರಿದೆ.

ವಿಜಯ್ ಸರ್ಕಾರ ರಚಿಸಲಿ; ಜನಾದೇಶಕ್ಕೆ ಗೌರವ ಕೊಡೋಣ

ರಾಜಕೀಯ ಮುತ್ಸದ್ದಿತನ ಮೆರೆದ ಎಂ.ಕೆ.ಸ್ಟಾಲಿನ್

ಚೆನ್ನೈ, ಮೇ 7–ತಮಿಳುನಾಡು ರಾಜಕೀಯದ ದೈತ್ಯ ಶಕ್ತಿ ಎಂ.ಕೆ. ಸ್ಟಾಲಿನ್ ಅವರು ತೆಗೆದುಕೊಂಡಿರುವ ಒಂದು ದಿಟ್ಟ ನಿರ್ಧಾರ, ರಾಜ್ಯದಲ್ಲಿ ಎದುರಾಗಿದ್ದ ಸಾಂವಿಧಾನಿಕ ಬಿಕ್ಕಟ್ಟನ್ನು ಕ್ಷಣಾರ್ಧದಲ್ಲಿ ತಿಳಿಗೊಳಿಸಿದೆ. ಬಹುಮತದ ಕೊರತೆಯಿಂದ ಸರ್ಕಾರ ರಚಿಸಲು ಪರದಾಡುತ್ತಿದ್ದ ನಟ ವಿಜಯ್ ಅವರ ತಮಿಳುಗ ವೆಟ್ರಿ ಕಳಗಂ (ಟಿವಿಕೆ) ಗೆ ಸ್ಟಾಲಿನ್ ಅಭಯ ನೀಡಿದ್ದು, ವಿಜಯ್ ಸರ್ಕಾರ ರಚಿಸಲಿ ಎಂದು ಹೇಳುವ ಮೂಲಕ ಎಲ್ಲರನ್ನೂ ಆಶ್ಚರ್ಯಚಕಿತಗೊಳಿಸಿದ್ದಾರೆ.

ಬಹುಮತಕ್ಕೆ 11 ಸ್ಥಾನಗಳ ಕೊರತೆಯಿದ್ದರೂ, ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದ ಟಿವಿಕೆಗೆ ಡಿಎಂಕೆ ಮುಖ್ಯಸ್ಥ ಸ್ಟಾಲಿನ್ ಬೆಂಬಲ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಯಾವುದೇ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗುವುದು ನಮಗೆ ಇಷ್ಟವಿಲ್ಲ. ಜನರ ತೀರ್ಪನ್ನು ಗೌರವಿಸಿ ವಿಜಯ್ ಅವರು ಸರ್ಕಾರ ರಚಿಸಲಿ ಎಂದು ಸ್ಪಷ್ಟಪಡಿಸಿದರು.

ಬುಧವಾರ ರಾತ್ರಿಯವರೆಗೆ ಡಿಎಂಕೆ ಮತ್ತು ಎಐಎಡಿಎಂಕೆ ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸಬಹುದು ಎಂಬ ಲೆಕ್ಕಾಚಾರಗಳಿದ್ದವು. ಆದರೆ ಸ್ಟಾಲಿನ್ ಅವರ ಈ ನಡೆಯು ಆ ಎಲ್ಲಾ ಊಹಾಪೋಹಗಳಿಗೆ ತೆರೆ ಎಳೆದಿದೆ.

ವಿಜಯ್ ಸರ್ಕಾರಕ್ಕೆ ಸ್ಟಾಲಿನ್ ಕಿವಿಮಾತು: ಸ್ಟಾಲಿನ್, ತಮ್ಮ ಆಡಳಿತ ಅವಧಿಯಲ್ಲಿ ಜಾರಿಗೆ ತಂದಿದ್ದ ಜನಪ್ರಿಯ ಯೋಜನೆಗಳನ್ನು ಹೊಸ ಸರ್ಕಾರವು ಮುಂದುವರಿಸಬೇಕೆಂದು ಆಶಿಸಿದ್ದಾರೆ: ಶಾಲಾ ಮಕ್ಕಳ ಹಸಿವು ನೀಗಿಸುವ ಈ ಯೋಜನೆ ನಿಲ್ಲಬಾರದು, ಮಹಿಳೆಯರಿಗೆ ನೀಡಲಾಗುತ್ತಿರುವ 1,000 ರೂ. ಮಾಸಿಕ ಆರ್ಥಿಕ ನೆರವಿನ ಯೋಜನೆಯನ್ನು ಉಳಿಸಿಕೊಳ್ಳಬೇಕು.

ವಿಜಯ್ ಅವರು ತಮ್ಮ ಪ್ರಣಾಳಿಕೆಯಲ್ಲಿ ಮಹಿಳೆಯರಿಗೆ 2,500 ರೂ. ನೀಡುವುದಾಗಿ ಭರವಸೆ ನೀಡಿರುವ ಕುರಿತು ಪ್ರತಿಕ್ರಿಯಿಸಿದ ಸ್ಟಾಲಿನ್, ಇಷ್ಟು ದೊಡ್ಡ ಮೊತ್ತವನ್ನು ನೀಡುವುದು ಆರ್ಥಿಕವಾಗಿ ಸವಾಲಿನ ಕೆಲಸ. ಆದರೆ ಕನಿಷ್ಠ ಈಗಿರುವ 1,000 ರೂ. ಯೋಜನೆಯನ್ನಾದರೂ ಹೊಸ ಸರ್ಕಾರ ಮುಂದುವರಿಸಲಿ ಎಂದು ಸಲಹೆ ನೀಡಿದರು.

ಸ್ಟಾಲಿನ್ ಅವರ ಈ ಬಹಿರಂಗ ಬೆಂಬಲದ ನಂತರ, ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಅವರಿಗೆ ವಿಜಯ್ ಅವರ ಸಂಖ್ಯಾಬಲದ ಬಗ್ಗೆ ಇದ್ದ ಆತಂಕ ದೂರವಾದಂತಾಗಿದೆ. ಡಿಎಂಕೆ ಬೆಂಬಲ ಸೂಚಿಸಿರುವುದರಿಂದ, ವಿಜಯ್ ಅವರು ಶೀಘ್ರದಲ್ಲೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲು ರಾಜಭವನದಿಂದ ಅಧಿಕೃತ ಆಮಂತ್ರಣ ಬರುವ ಸಾಧ್ಯತೆ ದಟ್ಟವಾಗಿದೆ.

ತಮಿಳುನಾಡಿನ ಇತಿಹಾಸದಲ್ಲಿ ಬದ್ಧ ರಾಜಕೀಯ ವೈರಿಗಳ ನಡುವೆ ಇಂತಹದೊಂದು ಸಾಂವಿಧಾನಿಕ ಸೌಹಾರ್ದತೆ ಕಂಡುಬಂದಿರುವುದು ರಾಜಕೀಯ ಮುತ್ಸದ್ದಿತನಕ್ಕೆ ಸಾಕ್ಷಿಯಾಗಿದೆ.


ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕರ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಡಕಾಯಿಟ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಪೆಟ್ರಿಯೋಟ್ (ಮ)	4 ಪ್ರದರ್ಶನಗಳು
ಸಂಗಂ	
ಕರ (ತ)	4 ಪ್ರದರ್ಶನಗಳು
ಲಿಡೋ	
ಮಾಣಿಕ್ಯ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪುನೀತ್ ನಿವಾಸ (ಕ)	4 ಪ್ರದರ್ಶನಗಳು

10 ಸಾವಿರ ಉಚಿತ ಟಿಕೆಟ್ ಕೇಳಿದ್ದಕ್ಕೆ

ಬೆಂಗಳೂರಿನಿಂದ ಅಹಮದಾಬಾದ್‌ಗೆ ಐಪಿಎಲ್ ಫೈನಲ್ ಶಿಫ್ಟ್

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಐಪಿಎಲ್ 2026ರ ಫೈನಲ್ ಪಂದ್ಯವನ್ನು ಅಹಮದಾಬಾದ್‌ಗೆ ಸ್ಥಳಾಂತರಿಸಲು 10 ಸಾವಿರ ಹೆಚ್ಚುವರಿ ಉಚಿತ ಟಿಕೆಟ್‌ಗಳ ಬೇಡಿಕೆಯೇ ಮುಖ್ಯ ಕಾರಣ ಎಂದು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ತಿಳಿಸಿದ್ದಾರೆ.



ದೇವಜಿತ್

ಸೈಕಿಯಾ ಅವರ ಪ್ರಕಾರ, ಐಪಿಎಲ್ ಶಿಷ್ಟಾಚಾರದ ಅನ್ವಯ ಕೇವಲ ಶೇ. 15ರಷ್ಟು ಉಚಿತ ಟಿಕೆಟ್‌ಗಳನ್ನು ಮಾತ್ರ ಆತಿಥೇಯ ಸಂಸ್ಥೆಗೆ ನೀಡಲು ಅವಕಾಶವಿದೆ ಆದರೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಇದಕ್ಕಿಂತ ಹೆಚ್ಚುವರಿಯಾಗಿ ಸುಮಾರು 10 ಸಾವಿರ ಟಿಕೆಟ್‌ಗಳನ್ನು ನೀಡುವಂತೆ ಪಟ್ಟು ಹಿಡಿದಿತ್ತು ಎಂದು ಹೇಳಿದರು.

ಮೇ 2ರಂದು ಕೆಎಸ್‌ಸಿಎ ಕಳುಹಿಸಿದ ಇಮೇಲ್ ನೋಡಿ ನಾವು ಶಾಕ್‌ಗೆ ಒಳಗಾದೆವು. ಆ ಇಮೇಲ್‌ನಲ್ಲಿ ಶಾಸಕರು, ವಿಧಾನ ಪರಿಷತ್ ಸದಸ್ಯರು ಮತ್ತು ಕರ್ನಾಟಕ ಸರ್ಕಾರಕ್ಕಾಗಿ (700 ಟಿಕೆಟ್‌ಗಳು) ದೊಡ್ಡ ಪ್ರಮಾಣದ ಉಚಿತ ಟಿಕೆಟ್‌ಗಳನ್ನು ಕೇಳಲಾಗಿತ್ತು ಎಂದು ತಿಳಿಸಿದರು.

ಇಷ್ಟು ದೊಡ್ಡ ಪ್ರಮಾಣದ ಉಚಿತ ಟಿಕೆಟ್‌ಗಳನ್ನು ನೀಡಲು ಸಾಧ್ಯವಾಗದ ಕಾರಣ ಮತ್ತು ಚಿನ್ನಸ್ವಾಮಿ ಕ್ರೀಡಾಂಗಣದ ಕಡಿಮೆ ಆಸನ ಸಾಮರ್ಥ್ಯದಿಂದಾಗಿ (36 ಸಾವಿರ) ಬಿಸಿಸಿಐ ಫೈನಲ್ ಪಂದ್ಯವನ್ನು ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂಗೆ (1.30 ಲಕ್ಷ ಸಾಮರ್ಥ್ಯ) ಸ್ಥಳಾಂತರ ಮಾಡಿದೆ.

ಒಂದು ವೇಳೆ ನಾವು ಇಷ್ಟು ದೊಡ್ಡ ಪ್ರಮಾಣದ ಉಚಿತ ಟಿಕೆಟ್‌ಗಳನ್ನು ನೀಡಿದ್ದರೆ, ಸಾಮಾನ್ಯ ಜನರಿಗೆ ಕೇವಲ ಕೆಲವು ಸಾವಿರ ಟಿಕೆಟ್‌ಗಳು ಮಾತ್ರ ಉಳಿಯುತ್ತಿದ್ದವು. ಇದು ಸುಪ್ರೀಂ ಕೋರ್ಟ್ ನಿರ್ದೇಶನಗಳ ನೇರ ಉಲ್ಲಂಘನೆಯಾಗುತ್ತಿತ್ತು ಎಂದು ಸೈಕಿಯಾ ಎಚ್ಚರಿಸಿದ್ದಾರೆ. ಲೀಗ್ ಪಂದ್ಯಗಳಲ್ಲಿ ಕೆಲವು ರಿಯಾಯಿತಿ ಕೊಡಬಹುದು. ಆದರೆ ಪ್ಲೇ–ಆಫ್ ಮತ್ತು ಫೈನಲ್ ಪಂದ್ಯಗಳು ಸಂಪೂರ್ಣವಾಗಿ ಬಿಸಿಸಿಐ ನಿಯಂತ್ರಣದಲ್ಲಿರುತ್ತವೆ. ಅಲ್ಲಿ ಯಾವುದೇ ಶಿಷ್ಟಾಚಾರದ ಉಲ್ಲಂಘನೆಗೆ ಅವಕಾಶವಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನಲ್ಲಿ ಫ್ಯಾಮಿಲಿ ಪೂಲ್, ಐದು ಹೊಸ ರೈಡ್





ಮೈಸೂರು, ಮೇ 7– ನಗರದ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನಲ್ಲಿ 5 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ 5 ಸಾವಿರ ಚದರ ಅಡಿ ವಿಸ್ತೀರ್ಣದ ಶೂನ್ಯ ಆಳದ ಫ್ಯಾಮಿಲಿ ಪೂಲ್ ಹಾಗೂ ಮಕ್ಕಳಿಗಾಗಿ ಐದು ಹೊಸ ರೈಡ್‌ಗಳು ಮುಕ್ತಗೊಂಡಿದ್ದು, ಮೂರು ತಲೆಮಾರುಗಳ ಕುಟುಂಬ ಸದಸ್ಯರು ಒಂದೇ ಸ್ಥಳದಲ್ಲಿ ಮನರಂಜನೆ ಪಡೆಯಬಹುದಾಗಿದೆ.

ಈ ಹೊಸ ಆಕರ್ಷಣೆಗಳನ್ನು ಏಪ್ರಿಲ್‌ನಲ್ಲಿ ಸಾಫ್ಟ್ ಲಾಂಚ್ ಮಾಡಲಾಗಿದ್ದು, ಮುಂದಿನ ಜೂನ್‌ವರೆಗೆ ಬೇಸಿಗೆ ರಜೆ ಅವದಿಯಲ್ಲಿ ಸುಮಾರು 2.5 ಲಕ್ಷ ಮಂದಿ ಭೇಟಿ ನೀಡುವ ನಿರೀಕ್ಷೆಯಿದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

'ಮ್ಯಾಜಿಕಲ್ ಪೂಲ್' ಹೆಸರಿನ ಈ ಪೂಲ್ 2,000 ಚದರ ಅಡಿ ವಿಸ್ತೀರ್ಣದ ಅರ್ಧವೃತ್ತಾಕಾರದ ಕೇಂದ್ರಭಾಗ ಹೊಂದಿದ್ದು, ಇದರ ಆಳ ಕೇವಲ 10 ಇಂಚುಗಳಷ್ಟಿದೆ. ಜಾರಿ ಬೀಳದ ಆಂಟಿ–ಸ್ಕಿಡ್ ಗ್ಲಾಸ್ ಟೈಲ್ಸ್ ಅಳವಡಿಸಲಾಗಿದೆ. ಈ ಪೂಲ್‌ನಲ್ಲಿ ಈಜುವುದಕ್ಕಲ್ಲದೆ ಚಿಕ್ಕ ಮಕ್ಕಳಾದಿಯಾಗಿ ಕುಟುಂಬದವರೆಲ್ಲಾ ಸುರಕ್ಷಿತವಾಗಿ ಒಟ್ಟಿಗೆ ನೀರಿನಲ್ಲಿ ಆಟವಾಡಲು ನಿರ್ಮಿಸಲಾಗಿದೆ.

ಮುಖ್ಯ ಪೂಲ್ ಸುತ್ತಮುತ್ತ ವಾಟರ್ ಮಶ್ರೂಮ್‌ಗಳು, ವಾಟರ್ ಗನ್‌ಗಳು, ಹೂಲಾ ಹೂಪ್ಸ್, ಫ್ಲೋರ್ ಫೌಂಟೇನ್‌ಗಳು, ಡಿಪ್ಪಿಂಗ್ ಕೋನ್ಸ್ ಹಾಗೂ ಟಿಪ್ಪಿಂಗ್ ಬಕೆಟ್‌ಗಳಂತಹ ವೈಶಿಷ್ಟ್ಯಗಳನ್ನು ಅಳವಡಿಸಲಾಗಿದೆ. ಕೇರಳ ಮೂಲದ ಕಲಾವಿದ ಮಾಸ್ಟರ್ ಸಾಮುಲ್ ಮತ್ತು ತಂಡವು ಎರಡು ತಿಂಗಳಿಗೂ ಹೆಚ್ಚು ಕಾಲ ಶ್ರಮಿಸಿ ಕೋಟೆ ಮಾದರಿ ಹಿನ್ನೆಲೆಯನ್ನು ನಿರ್ಮಿಸಿದೆ. ಮುಂಬೈ ಮೂಲದ ಘಟಕದಿಂದ ಪೂಲ್ ಉಪಕರಣಗಳನ್ನು ತರಿಸಲಾಗಿದೆ. ಗ್ಲಾಸ್ ಮೀಡಿಯಾ ಫಿಲ್ಟ್ರೇಷನ್ ವ್ಯವಸ್ಥೆ ಮೂಲಕ ಪ್ರತಿ 45 ನಿಮಿಷಗಳಿಗೊಮ್ಮೆ ನೀರನ್ನು ಮರುಬಳಕೆ ಮಾಡಲಾಗುತ್ತದೆ. ಇಬ್ಬರು ತರಬೇತಿ ಪಡೆದ ಲೈಫ್‌ಗಾರ್ಡ್‌ಗಳು ಹಾಗೂ ಇಬ್ಬರು ಸಹಾಯಕ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ.

ಪೂಲ್ ಜೊತೆಗೆ ಜಂಪಿಂಗ್ ಕ್ಲೌಡ್, ಮ್ಯಾಜಿಕ್ ಸೈಕಲ್, ರೋಟೇಟಿಂಗ್ ಬೀ, ಕ್ರೇಜಿ ಕಾರ್ ಮತ್ತು ಸಫಾರಿ ಕಿಂಗ್ ಎಂಬ ಐದು ಹೊಸ ರೈಡ್‌ಗಳನ್ನೂ ಆರಂಭಿಸಲಾಗಿದೆ. ಇವುಗಳಲ್ಲಿ ನಾಲ್ಕು ರೈಡ್‌ಗಳು 3 ರಿಂದ 9 ವರ್ಷದ ಮಕ್ಕಳಿಗಾಗಿ ವಿನ್ಯಾಸಗೊಳಿಸಿದ್ದು, ಜಂಪಿಂಗ್ ಕ್ಲೌಡ್ ಎಲ್ಲ ವಯೋಮಾನದವರಿಗೂ ಮುಕ್ತವಾಗಿದೆ. ಈ ರೈಡ್‌ಗಳನ್ನು ವಿದೇಶಗಳಿಂದ ಆಮದು ಮಾಡಲಾಗಿದ್ದು, ಪ್ರತಿಯೊಂದು ರೈಡ್‌ನಲ್ಲೂ ಸೇಫ್ಟಿ ಬೆಲ್ಟ್ ಹಾಗೂ ಸ್ವಯಂಚಾಲಿತ ಸುರಕ್ಷತಾ ವ್ಯವಸ್ಥೆ ಅಳವಡಿಸಲಾಗಿದೆ ಆಕರ್ಷಣೆಗಳ ಸಮೂಹವಾಗಿರುವ ಮೈಸೂರಿನ ಜಿಆರ್‌ಎಸ್‌ನಲ್ಲಿ ಅಪ್‌ಡೌನ್, ಸ್ನೋ ಪಾರ್ಕ್ ಹಾಗೂ ಸೆಲ್ಫಿ ಫ್ಯಾಕ್ಟರಿ ಸೇರಿವೆ. https://grs.fun/ನಲ್ಲೂ ಟಿಕೆಟ್ ಲಭ್ಯವಿವೆ ಎಂದು ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನ ನಿರ್ದೇಶಕ ಅಶ್ವಿನ್ ಡಾಂಗೆ ತಿಳಿಸಿದ್ದಾರೆ.

ಟಿವಿಕೆ ಸರ್ಕಾರ ರಚನೆ ತಡೆಯುವುದು ಸರಿಯಲ್ಲ

ತಮಿಳುನಾಡು ರಾಜ್ಯಪಾಲರ ನಡೆ ಬಗ್ಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಅಸಮಾಧಾನ

ಬೆಂಗಳೂರು, ಮೇ 7– ತಮಿಳುನಾಡಿನಲ್ಲಿ ಸರ್ಕಾರ ರಚನೆ ವಿಚಾರವಾಗಿ ಅಲ್ಲಿನ ರಾಜ್ಯಪಾಲರ ನಡೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಖಂಡಿಸಿದ್ದಾರೆ.



ವಿಧಾನಸೌಧದಲ್ಲಿ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ವಿಜಯ್ ಅವರು ಸರ್ಕಾರ ರಚನೆ ಮಾಡಿ, ಬಹುಮತ ಸಾಬೀತುಪಡಿಸುವುದನ್ನು ತಡೆಯಲು ತಮಿಳುನಾಡಿನ ಗೌರವಾನ್ವಿತ ರಾಜ್ಯಪಾಲರಿಗೆ ಯಾವುದೇ ರೀತಿಯ ಅಧಿಕಾರವಿಲ್ಲ. ರಾಜ್ಯಪಾಲರ ಈ ನಡೆ ಸರಿಯಲ್ಲ ಎಂದು ಹೇಳಿದರು.

ತಮಿಳುನಾಡು ರಾಜ್ಯಪಾಲರು ಸರ್ಕಾರ ರಚನೆಗೆ ಅವಕಾಶ ನೀಡಬೇಕು. ಕರ್ನಾಟಕದಲ್ಲಿ ಯಡಿಯೂರಪ್ಪ ಅವರಿಗೆ ರಾಜ್ಯಪಾಲರು ಅನುಮತಿ ನೀಡಿದ್ದರು. ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳಿಸಿದ ಪಕ್ಷಕ್ಕೆ ಸರ್ಕಾರ ರಚಿಸಲು ಈ ಹಿಂದೆಯೂ ಅನುಮತಿ ನೀಡಲಾಗಿದೆ. ರಾಷ್ಟ್ರಪತಿಗಳಾಗಿದ್ದ ನಾರಾಯಣನ್, ಅಬ್ದುಲ್ ಕಲಾಂ ಈ ರೀತಿ ಮಾಡಿದ್ದರು. ವಾಜಪೇಯಿ ಅವರಿಗೂ ಇದೇ ರೀತಿ ಸರ್ಕಾರ ರಚಿಸಲು ಅನುಮತಿ ನೀಡಿದ ನಂತರ ಸದನದಲ್ಲಿ ಬಹುಮತ ಸಾಬೀತಿಗೆ ಅವಕಾಶ ನೀಡಲಾಗಿತ್ತು. ಆದರೆ ಈಗ ಟಿವಿಕೆಗೆ ಅವಕಾಶ ನೀಡದಿರುವುದು ತಪ್ಪು ಎಂದರು.


ಮೊದಲು ಸರ್ಕಾರ ರಚನೆಗೆ ಅನುಮತಿ ನೀಡಿ, ಬಹುಮತ ಸಾಬೀತಿಗೆ ಅವಕಾಶ ನೀಡಬೇಕು. ರಾಜ್ಯಪಾಲರು ರಾಜ್ಯದ ಜನರ ಭಾವನೆಗಳಿಗೆ ಬೆಲೆ ಕೊಡಬೇಕು. ಇದು ಪ್ರಜಾಪ್ರಭುತ್ವ. ಒಂದು ಮತದಿಂದ ಬಹುಮತ ಬರಬಹುದು ಅಥವಾ ಕಳೆದುಕೊಳ್ಳಬಹುದು. ವಾಜಪೇಯಿ ಅವರಿಗೆ ಇದೇ ರೀತಿ ಆಗಿರಲಿಲ್ಲವೇ? ಒಂದೊಮ್ಮೆ ಬಹುಮತ ಸಾಬೀತುಪಡಿಸುವಲ್ಲಿ ವಿಫಲರಾದರೆ ಮುಂದಿನ ಆಯ್ಕೆ ನೋಡಬಹುದು ಎಂದು ಹೇಳಿದರು.

ಸಚಿವರಾದ ಸತೀಶ್ ಜಾರಕಿಹೊಳಿ ಹಾಗೂ ಲಕ್ಷ್ಮೀ ಹೆಬ್ಬಾಳ್ಕರ್ ಭೇಟಿ ಬಗ್ಗೆ ಪ್ರತಿಕ್ರಿಯಿಸಿ, ಬೆಳಗಾವಿ ಜಿಲ್ಲೆಯ ಒಂದಷ್ಟು ನೀರಾವರಿ ಯೋಜನೆಗಳ ಬಗ್ಗೆ ಚರ್ಚೆ ನಡೆಸಲು ಭೇಟಿ ಮಾಡಿದ್ದರು ಎಂದರು.

ಅಭಿಮಾನೋತ್ಸವದಲ್ಲಿ ಬಿಎಸ್‌ವೈ ಬದುಕಿನ ಪುಟಗಳ ಅನಾವರಣ

ನಾಳೆ ಎರಡು ಪುಸ್ತಕಗಳ ಲೋಕಾರ್ಪಣೆ

ಬೆಂಗಳೂರು, ಮೇ 7– ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷರಾದ ಮೈಸೂರಿನ ಆರ್.ರಘು ಕೌಟಿಲ್ಯ ಅವರ ಪರಿಕಲ್ಪನೆ ಹಾಗೂ ಡಾ. ರೇವಯ್ಯ ಒಡೆಯರ್ ಅವರ ಸಂಪಾದಕತ್ವದಲ್ಲಿ ಮಾಜಿ ಮುಖ್ಯ ಮಂತ್ರಿ ಬಿ.ಎಸ್.ಯಡಿಯೂರಪ್ಪ ನವರ ಕುರಿತಾದ ಎರಡು ಪುಸ್ತಕಗಳು ಬಿಡುಗಡೆಗೆ ಸಿದ್ಧವಾಗಿವೆ.



ಯಡಿಯೂರಪ್ಪ



ರಘು ಕೌಟಿಲ್ಯ

ಬಿ.ಎಸ್.ಯಡಿಯೂರಪ್ಪನವರ 50 ವರ್ಷಗಳ ಸಾರ್ವಜನಿಕ ಜೀವನದ ರೋಚಕ ಪಯಣವನ್ನು ಸ್ಮರಿಸುವ ಉದ್ದೇಶದೊಂದಿಗೆ ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ 'ಬಿಎಸ್‌ವೈ ಅಭಿಮಾನೋತ್ಸವ' ಸಮಾರಂಭದಲ್ಲಿ ಅವರ ಜೀವನ ಚರಿತ್ರೆ 'ಕೆಂದಾವರೆ–ಕಮಲ ಅರಳಿದ ಕಥೆ' ಹಾಗೂ ವಿಧಾನ ಮಂಡಲದ ಉಭಯ ಸದನದಲ್ಲಿ ಮಾಡಿದ ಭಾಷಣಗಳ ಸಂಗ್ರಹ 'ಸದನ ಶಿಕಾರಿ–ಯಡಿಯೂರಪ್ಪನವರ ಗುಡುಗಿನ ನುಡಿಗಳು' ಪುಸ್ತಕ ಗಳನ್ನು ಕೇಂದ್ರ ಗೃಹಸಚಿವ ಅಮಿತ್ ಷಾ ಲೋಕಾರ್ಪಣೆಗೊಳಿಸಲಿದ್ದಾರೆ.

ಯಡಿಯೂರಪ್ಪನವರು ಹೇಳಿಕೊಂಡಿರುವ ಬಾಲ್ಯದಿಂದ ಈವರೆಗಿನ ಪ್ರಮುಖ ಸಂಗತಿಗಳನ್ನು ಬರಹಗಾರ ಆರ್.ರಘು 'ಕೆಂದಾವರೆ–ಕಮಲ ಅರಳಿದ ಕಥೆ' ಪುಸ್ತಕದಲ್ಲಿ ದಾಖಲಿಸಿದ್ದಾರೆ. 'ಸದನ ಶಿಕಾರಿ–ಯಡಿಯೂರಪ್ಪನವರ ಗುಡುಗಿನ ನುಡಿಗಳು' ಪುಸ್ತಕದಲ್ಲಿ ರೋಚಕ ಸದನ ಸಂಗತಿಗಳಿವೆ. 'ಯಡಿಯೂರಪ್ಪ ಗುಡುಗಿದರೆ ವಿಧಾನ ಸೌಧ ನಡುಗುತ್ತದೆ' ಎಂಬುದಕ್ಕೆ ಈ ಪುಸ್ತಕದಲ್ಲಿ ಸಾಕಷ್ಟು ನಿದರ್ಶನಗಳು ಅಡಕವಾಗಿವೆ. ವಿರೋಧ ಪಕ್ಷದಲ್ಲಿರಲಿ ಆಡಳಿದ ಪಕ್ಷದಲ್ಲಿರಲಿ ಬಿಎಸ್‌ವೈ ಅವರು ಜನಪರ ಹಾಗೂ ರೈತಪರ ವಿಚಾರಗಳು ಸೇರಿದಂತೆ ನಾಡಿನ ಹಿತದೃಷ್ಟಿಯಿಂದ ಸದನದಲ್ಲೂ ಹೋರಾಟಕ್ಕಿಳಿದು ಗುಡುಗಿರುವ ಕ್ಷಣಗಳನ್ನು ಸ್ಮರಿಸಲಾಗಿದೆ.

ಐದು ದಶಕಗಳ ಸುದೀರ್ಘ ಅವಧಿಯಲ್ಲಿ ವಿಧಾನ ಮಂಡಲದಲ್ಲಿ ಮಾತನಾಡಿರುವ ದಾಖಲೆಗಳು ಸುಮಾರು 15000 ಪುಟಗಳನ್ನು ಮೀರಲಿದ್ದು, ಇದನ್ನು ಪರಿಷ್ಕರಿಸಿ ಹತ್ತು ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆ ಇದೆ. ಇದರ ಮೊದಲ ಸಂಪುಟವನ್ನು ಕೇಂದ್ರ ಗೃಹ ಸಚಿವ ಅಮಿತ್ ಷಾ ಬಿಡುಗಡೆಗೊಳಿಸುತ್ತಿದ್ದಾರೆ.

ಕೃಷ್ಣಾರ್ಪಣಮಸ್ತು ನೃತ್ಯ ಕಾರ್ಯಕ್ರಮ

ಮೈಸೂರು, ಮೇ 7– ಕೇರಳದ ಕಾಸರಗೋಡಿನಲ್ಲಿರುವ ಬೇಕಲ್ ಗೋಕುಲಮ್ ಗೋಶಾಲ ಪರಂಪರ ವಿದ್ಯಾಪೀಠದವರು ನಡೆಸುತ್ತಿರುವ 2026ರ ವೈಶಾಖ ನಟನಂ ರಾಷ್ಟ್ರೀಯ ನೃತ್ಯ ಉತ್ಸವದಲ್ಲಿ ಕರ್ನಾಟಕ ಕಲಾಶ್ರೀ ಡಾ. ಕೆ ಕುಮಾರ್ ಅವರ ಪುತ್ರಿಯರು ಹಾಗೂ ಕಲೆಮನೆ ಸಹೋದರಿಯರಾದ ಕುಮಾರಿ ಲೇಖಾ ಕೆ.ಎಂ, ಕುಮಾರಿ ನಿಧಿ ಕೆ.ಎಂ, ಜೊತೆಗೆ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ಮೈಸೂರಿನ ವಿದ್ಯಾರ್ಥಿನಿಯರಿಂದ ಕೃಷ್ಣಾರ್ಪಣಾಮಸ್ತು ನೃತ್ಯ ಕಾರ್ಯಕ್ರಮವನ್ನು ಮೇ 9 ರಂದು ಸಂಜೆ 8.30 ರಿಂದ ರಾತ್ರಿ 10 ಗಂಟೆವರೆಗೆ ಧೇನು ಮಂಟಪದಲ್ಲಿ ಶನಿವಾರ ಏರ್ಪಡಿಸಲಾಗಿದೆ.

ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪನವರಿಗೆ ಅಂತರರಾಷ್ಟ್ರೀಯ ಗೌರವ



ಮೈಸೂರು, ಮೇ 7– ಖ್ಯಾತ ವಿಜ್ಞಾನಿ, ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಅವರಿಗೆ ರಿಸರ್ಚ್ ಡಾಟ್ ಕಾಮ್ ಸಂಸ್ಥೆಯಿಂದ ಅಂತರರಾಷ್ಟ್ರೀಯ ಮಟ್ಟದ ಗೌರವ ಲಭಿಸಿದೆ.

ಸಂಸ್ಥೆಯು 2026ನೇ ಸಾಲಿನ 'ಬೆಸ್ಟ್ ಸೈಂಟಿಸ್ಟ್ಸ್ ಇನ್ ಕೆಮಿಸ್ಟ್ರಿ' ಪಟ್ಟಿ ಪ್ರಕಟಿಸಿದ್ದು, ಪ್ರೊ.ರಂಗಪ್ಪನವರು ಭಾರತದಲ್ಲಿ 135 ಹಾಗೂ ಜಾಗತಿಕ ಮಟ್ಟದಲ್ಲಿ 8803ನೇ ಸ್ಥಾನ ಪಡೆದಿದ್ದಾರೆ.

ಈ ರ್‍ಯಾಂಕಿಂಗ್ ಅನ್ನು ಡಿ–ಇಂಡೆಕ್ಸ್ ಆಧಾರದಲ್ಲಿ ನಿರ್ಧರಿಸಲಾಗಿದ್ದು, ರಸಾಯನಶಾಸ್ತ್ರ ಕ್ಷೇತ್ರದಲ್ಲಿನ ಸಂಶೋಧನಾ ಲೇಖನ ಹಾಗೂ ಉಲ್ಲೇಖಗಳ ಮೌಲ್ಯಗಳನ್ನು ಪರಿಗಣಿಸಲಾಗಿದೆ. ರಸಾಯನಶಾಸ್ತ್ರ ವಿಭಾಗದಲ್ಲಿ ಕನಿಷ್ಠ 40 ಡಿ–ಇಂಡೆಕ್ಸ್ ಹೊಂದಿರುವ ಪ್ರಮುಖ ವಿಜ್ಞಾನಿಗಳನ್ನು ಮಾತ್ರ ಈ ಪಟ್ಟಿಗೆ ಆಯ್ಕೆ ಮಾಡಲಾಗಿದೆ.

ಲಕ್ನೋ ವಿರುದ್ಧ ಮಂಡಿಯೂರಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು



ಆಕರ್ಷಕ ಶತಕ ಸಿಡಿಸಿದ ಮಿಚೆಲ್ ಮಾರ್ಷ್

ಲಕ್ನೋ, ಮೇ 7(ವಿವಿಹೆಚ್)– ಮಿಚೆಲ್ ಮಾರ್ಷ್ ಆಕರ್ಷಕ ಶತಕ, ಪ್ರಿನ್ಸ್ ಯಾದವ್ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ಲಕ್ನೋ ಸೂಪರ್ ಜೈಂಟ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು 9 ರನ್‌ಗಳಿಂದ ಸೋಲಿಸಿತು.

ಇಲ್ಲಿನ ಏಕನಾ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಐಪಿಎಲ್–2026ರ 50ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ 19 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 209 ರನ್ ಗಳಿಸಿತು. ಪಂದ್ಯ ನಡೆಯುತ್ತಿದ್ದ ವೇಳೆ ಮಳೆ ಅಡ್ಡಿಪಡಿಸಿತು. ಇದರಿಂದಾಗಿ 19 ಓವರ್‌ಗಳಿಗೆ ಪಂದ್ಯ ನಿಗದಿಪಡಿಸಲಾಯಿತು. ಹಾಗೂ ಡಿಎಲ್‌ಎಸ್ ನಿಯಮದ ಪ್ರಕಾರ ಆರ್‌ಸಿಬಿಗೆ 19 ಓವರ್‌ಗಳಲ್ಲಿ 213 ರನ್‌ಗಳ ಬೃಹತ್ ಗುರಿ ನೀಡಲಾಯಿತು. ಈ ಮೊತ್ತ ಬೆನ್ನತ್ತಿದ ಆರ್‌ಸಿಬಿ 19 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 203 ರನ್ ಗಳಿಸಲಷ್ಟೆ ಶಕ್ತವಾಯಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ತಂಡಕ್ಕೆ ಆರಂಭಿಕ ಬ್ಯಾಟರ್ ಮಿಚೆಲ್ ಮಾರ್ಷ್ ಭರ್ಜರಿ ಆರಂಭ ಒದಗಿಸಿಕೊಟ್ಟರು. ಆರ್‌ಸಿಬಿ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಅವರು ಕೇವಲ 49 ಎಸೆತಗಳಲ್ಲಿಯೇ ಶತಕ ಪೂರೈಸಿದರು. ತಾವಾಡಿದ 56 ಎಸೆತಗಳಲ್ಲಿ 9 ಬೌಂಡರಿ ಹಾಗೂ 9 ಸಿಕ್ಸರ್ ಒಳಗೊಂಡಂತೆ 111ರನ್ ಚಚ್ಚಿದರು. ಅರ್ಷಿನ್ ಕುಲ್ಕರ್ಣಿ 17(24), ನಿಕೋಲಸ್ ಪೂರನ್ 38(23) ರನ್ ಗಳಿಸಿದರು.

ಕೊನೆಯಲ್ಲಿ ಅಬ್ಬರಿಸಿದ ನಾಯಕ ರಿಷಬ್ ಪಂತ್ 10 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಸಹಿತ ಅಜೇಯ 32ರನ್ ಕಲೆಹಾಕಿದರು. ಐಡೆನ್ ಮಾರ್ಕ್ರಂ 1(1)ರನ್ ಗಳಿಸಿ ಸ್ಕ್ರೀಜ್‌ನಲ್ಲಿದ್ದರು. ಆರ್‌ಸಿಬಿ ಪರ ಜೋಶ್ ಹೆಜಲ್ವುಡ್, ಕೃನಾಲ್ ಪಾಂಡ್ಯ ಹಾಗೂ ರಸಿಕ್ ಸಲಾಂ ದರ್ ತಲಾ ಒಂದೊಂದು ವಿಕೆಟ್ ಪಡೆದರು.

ಲಕ್ನೋ ನೀಡಿದ ಬೃಹತ್ ಮೊತ್ತ ಬೆನ್ನತ್ತಿದ ಆರ್‌ಸಿಬಿಗೆ ಆರಂಭಿಕ ಆಘಾತವಾಯಿತು. ಆರಂಭಿಕ ಬ್ಯಾಟರ್ ವಿರಾಟ್ ಕೊಹ್ಲಿ ಡಕ್‌ಔಟ್, ಜಾಕೋಬ್ ಬೆಥೆಲ್ 4(5) ಬೇಗನೇ ವಿಕೆಟ್ ಒಪ್ಪಿಸಿ ಹೊರನಡೆದರು. ಈ ವೇಳೆ ಒಂದಾದ ದೇವ್‌ದತ್ ಪಡಿಕ್ಕಲ್ ಹಾಗೂ ನಾಯಕ ರಜತ್ ಪಾಟೀದರ್ ಸಮಯೋಚಿತ ಆಟವಾಡುವ ಮೂಲಕ ತಂಡಕ್ಕೆ ನೆರವಾದರು.

ದೇವ್‌ದತ್ ಪಡಿಕ್ಕಲ್ 34(25) ರನ್ ಗಳಿಸಿ ಔಟಾದರು. ಕೇವಲ 1(3) ರನ್ ಗಳಿಸಿ ಜಿತೇಶ್ ಶರ್ಮಾ ಬಂದಷ್ಟೆ ವೇಗವಾಗಿ ಪೆವಿಲಿಯನ್ ಸೇರಿದರು. ಇತ್ತ ನಾಯಕ ಪಾಟೀದರ್ 31 ಎಸೆತಗಳಲ್ಲಿ 3 ಬೌಂಡರಿ, 6 ಸಿಕ್ಸರ್ ಸಹಿತ 61 ರನ್ ಕಲೆಹಾಕಿದರು. ಬಳಿಕ ಬಂದ ಟಿಮ್ ಡೇವಿಡ್ ಕೇವಲ 17 ಎಸೆತಗಳಲ್ಲಿ 4 ಬೌಂಡರಿ, 3 ಸಿಕ್ಸರ್ ಸಹಿತ 41 ರನ್ ಚಚ್ಚಿದರು.

ಕೃನಾಲ್ ಪಾಂಡ್ಯ 16 ಎಸೆತಗಳಲ್ಲಿ ಅಜೇಯ 28 ರನ್, ರೊಮಾರಿಯೊ ಶೇಫರ್ಡ್ ಅಜೇಯ 23(15) ಗಳಿಸಿ ಕೊನೆಯಲ್ಲಿ ಅಬ್ಬರಿಸಿದರೂ ಪಂದ್ಯವನ್ನು ಗೆಲ್ಲಿಸಿಕೊಡಲಾಗಲಿಲ್ಲ.

ಶ್ರೀರಾಂಪುರ ಮೂರನೇ ಹಂತದಲ್ಲಿ ಮೂಲ ಸೌಕರ್ಯ ಮರೀಚಿಕೆ

ಚರಂಡಿ, ಬೀದಿ ದೀಪ, ಸ್ವಚ್ಛತೆ ಇಲ್ಲದೆ ಹೈರಾಣು; ನಿವಾಸಿಗಳ ಆರೋಪ

ಮೈಸೂರು, ಮೇ 7(ವಿವಿಹೆಚ್)– ಮೂಲ ಸೌಕರ್ಯಗಳಿಲ್ಲದೆ ನಿತ್ಯ ನರಕ ಯಾತನೆ ಅನುಭವಿಸುತ್ತಿರುವುದಾಗಿ ಮೈಸೂರಿನ ಶ್ರೀರಾಂಪುರ ಮೂರನೇ ಹಂತದ ನಿವಾಸಿಗಳು ಅಲವತ್ತುಕೊಂಡಿದ್ದಾರೆ.

ಮನೆಯಂಗಳಕ್ಕೆ ಕೊಳಚೆ ನೀರು ನುಗ್ಗುತ್ತಿದೆ. ಮ್ಯಾನ್ ಹೋಲ್ ಚೇಂಬರ್‌ಗೆ ಹಾನಿಯಾಗಿ ಮಲಿನ ನೀರು ರಸ್ತೆಯಲ್ಲೆಲ್ಲಾ ಹರಿಯುತ್ತಿದೆ. ಚರಂಡಿಯಲ್ಲಿ ಕಸ ತುಂಬಿ ಸೊಳ್ಳೆಗಳ ಕಾಟ ವಿಪರೀತವಾಗಿದೆ. ಗಿಡ–ಗಂಟಿಗಳು ಆಳೆತ್ತರಕ್ಕೆ ಬೆಳೆದಿದ್ದು, ಬೀದಿ ದೀಪಗಳು ಉರಿಯುವುದೇ ಇಲ್ಲ. ಅಭಿವೃದ್ಧಿ ಘೋಷಣೆಗಷ್ಟೇ ಸೀಮಿತವಾಗಿದ್ದು, ಸಮಸ್ಯೆಗಳು ದಿನೇ ದಿನೆ ಬಿಗಡಾಯಿಸುತ್ತಿವೆ. ಮಳೆ ಬಂದಾಗ ಪರಿಸ್ಥಿತಿ ಇನ್ನಷ್ಟು ಭಯಾನಕವಾಗುತ್ತದೆ ಎಂದು ಜನ ಆಕ್ರೋಶ ವ್ಯಕ್ತಪಡಿಸಿದರು.

ಈ ಬಗ್ಗೆ ಸ್ಥಳೀಯ ನಿವಾಸಿ ಅಮೂಲ್ಯ



ಕೆಲ ದಿನಗಳ ಹಿಂದೆ ಸುರಿದ ಮಳೆಗೆ ಶ್ರೀರಾಂಪುರ 3ನೇ ಹಂತದ ರಸ್ತೆ ಕೆರೆಯಂತಾಗಿತ್ತು.

ಮಾತನಾಡಿ, ಚರಂಡಿಗಳಲ್ಲಿ ತ್ಯಾಜ್ಯ ತುಂಬಿರುವುದರಿಂದ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗಿದೆ. ಸಂಜೆಯಾಗುತ್ತಿದ್ದಂತೆ ಸೊಳ್ಳೆಗಳ ಕಾಟಕ್ಕೆ ನಿವಾಸಿಗಳು ತತ್ತರಿಸುವ ದುಃಸ್ಥಿತಿ ನಿರ್ಮಾಣವಾಗಿದೆ. ಡೆಂಗ್ಯೂ, ಮಲೇರಿಯಾದಂತಹ ಕಾಯಿಲೆಗಳು ಹರಡುವ ಭೀತಿ ಸೃಷ್ಟಿಯಾಗಿದೆ. ಈಗಾಗಲೇ ಅನೇಕ ಮಕ್ಕಳು, ವೃದ್ಧರು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದು ತಿಳಿಸಿದರು.


> ಪಾಲಿಕೆಗೆ ನಿಗದಿತ ಸಮಯದಲ್ಲಿ ತೆರಿಗೆ ಪಾವತಿ ಮಾಡುತ್ತಿದ್ದೇವೆ. ಆದರೂ ನಮಗೆ ಮೂಲಸೌಕರ್ಯ ಕಲ್ಪಿಸುವಲ್ಲಿ ಪಾಲಿಕೆ ನಿರ್ಲಕ್ಷ್ಯ ಧೋರಣೆ ತಳೆದಿದೆ. ಸಾರ್ವಜನಿಕರೆಂದರೆ ಅಧಿಕಾರಿಗಳಿಗೆ ಯಾಕಿಷ್ಟು ಅಸಡ್ಡೆ ಎಂದು ನಮಗಂತೂ ತಿಳಿಯುತ್ತಿಲ್ಲ.
> -ಕಿಶೋರ್, ಸ್ಥಳೀಯ

ಬಡಾವಣೆಯ ಅನೇಕ ರಸ್ತೆಗಳಲ್ಲಿ ಬೀದಿ ದೀಪ ಬೆಳಗುವುದೇ ಇಲ್ಲ. ಕತ್ತಲಲ್ಲಿ ಓಡಾಡುವುದಕ್ಕೆ ಭಯ. ಸರಗಳ್ಳರು ದಾಳಿ ನಡೆಸುವ ಆತಂಕ. ಸ್ವಚ್ಛತೆ ಮರೀಚಿಕೆಯಾಗಿದ್ದು, ವಿಷಜಂತುಗಳ ಭೀತಿ ಹೆಚ್ಚಿದೆ. ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಪರಿಹಾರ ದೊರಕಿಲ್ಲ ಎಂದು ಆರೋಪಿಸಿದ್ದಾರೆ.

ವಿದ್ಯುತ್ ಭೂಗತ (ಯುಜಿ) ಕೇಬಲ್ ಅಳವಡಿಸುವ ವೇಳೆ ಮ್ಯಾನ್ ಹೋಲ್ ಚೇಂಬರ್‌ಗೆ ಹಾನಿಯಾಗಿದೆ. ಪರಿಣಾಮ ಮಲ ತ್ಯಾಜ್ಯ ಉಕ್ಕಿ ರಸ್ತೆಯಲ್ಲಿ ಹರಿಯುತ್ತಿದೆ. ಕಾರ್ಪೋರೇಟರ್‌ಗಳ ಅವಧಿ ಮುಗಿದು ಮೂರು ವರ್ಷಗಳಾಗಿವೆ. ಪಾಲಿಕೆ ಅಧಿಕಾರಿಗಳು ನಮ್ಮ ಸಮಸ್ಯೆಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಬಡಾವಣೆ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಶಾಸಕ ಟಿ.ಎಸ್.ಶ್ರೀವತ್ಸ ಅವರಿಗೆ ಮನವಿ ಮಾಡಿದ್ದೇವೆ. ಯುಜಿಡಿ, ಬೀದಿ ದೀಪ ಸಮಸ್ಯೆಗಳನ್ನು ತಿಂಗಳಾಂತ್ಯದಲ್ಲಿ ಪರಿಹರಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ಹೇಳಿದರು.

ರಾಮಕೃಷ್ಣನಗರ ವಾರ್ಡ್ 58ರ ನಾಗರಿಕರ ಎಲ್ಲಾ ಸಮಸ್ಯೆ ಶೀಘ್ರ ಪರಿಹಾರ

- ಅಧಿಕಾರಿಗಳ ಸಮ್ಮುಖದಲ್ಲಿ ಶಾಸಕ ಜಿ.ಟಿ.ದೇವೇಗೌಡರ ಭರವಸೆ
- ವಾರ್ಡ್‌ನ ಜನಸಂಪರ್ಕ ಸಭೆಯಲ್ಲಿ ನಾಗರಿಕರ ನಾನಾ ಸಮಸ್ಯೆ ಅನಾವರಣ
- ಅಧಿಕಾರಿಗಳ ಮೂಲಕವೇ ಜನತೆಯಲ್ಲಿ ವಿಶ್ವಾಸ ಮೂಡಿಸಿದ ಜಿಟಿಡಿ
- ರಸ್ತೆ, ಯುಜಿಡಿ ಸಮಸ್ಯೆ ಪರಿಹಾರಕ್ಕೆ ಸರ್ಕಾರಕ್ಕೆ 500 ಕೋಟಿ ರೂ. ಪ್ರಸ್ತಾವನೆ



ಜನಸಂಪರ್ಕ ಸಭೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ನಾಗರಿಕರ ಸಮಸ್ಯೆಗಳನ್ನು ಆಲಿಸಿದರು.

ಮೈಸೂರು,ಮೇ 7(ಪಿಎಂ)– ವಿವಿಧ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಕಾರ್ಯ ನಿರ್ವಹಿಸುವ ಮೂಲಕ ನಾಗರಿಕರ ಸಮಸ್ಯೆಗಳನ್ನು ಕಾಲಮಿತಿಯೊಳಗೆ ಬಗೆಹರಿಸಬೇಕು. ಈ ಸಂಬಂಧ ಕೆಳ ಹಂತದ ಅಧಿಕಾರಿಗಳು ಕೈಗೊಂಡಿರುವ ಕ್ರಮಗಳ ಬಗ್ಗೆ ಮೇಲಾಧಿಕಾರಿಗಳು ಮೇಲ್ವಿಚಾರಣೆ ಮಾಡಬೇಕು ಎಂದು ಅಧಿಕಾರಿಗಳಿಗೆ ಮಾಜಿ ಸಚಿವರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಸೂಚನೆ ನೀಡಿದರು.

ಮೈಸೂರಿನ ರಾಮಕೃಷ್ಣನಗರ ಹೆಚ್ ಬ್ಲಾಕ್‌ನ ಸಾಲುಮರದ ತಿಮ್ಮಕ್ಕ ಪಾರ್ಕ್‌ನಲ್ಲಿ ಗುರುವಾರ ಹಮ್ಮಿಕೊಂಡಿದ್ದ ರಾಮಕೃಷ್ಣನಗರ ವಾರ್ಡ್ ನಂಬರ್ 58ರ ಜನ ಸಂಪರ್ಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಾರ್ಡಿನ ನಾಗರಿಕರ ಸಮಸ್ಯೆಗಳನ್ನು ಆಲಿಸಿದ ಶಾಸಕರು, ಅಧಿಕಾರಿಗಳು ನಾಗರಿಕರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ನಿರ್ದೇಶನ ನೀಡಿದರು.

ಇದಕ್ಕೂ ಮುನ್ನ ಮಾತನಾಡಿದ ರಾಮಕೃಷ್ಣನಗರದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ನಟರಾಜ್, ಬಡಾವಣೆಯಲ್ಲಿ ಯುಜಿಡಿ ಸಮಸ್ಯೆ ಇದೆ. ಸುಮಾರು 35 ವರ್ಷಗಳ ಹಿಂದೆ ಯುಜಿಡಿ ಪೈಪ್‌ಲೈನ್ ಅಳವಡಿಸಿದ್ದು, ಹಾಗಾಗಿ ಆಗಾಗ್ಗೆ ಸಮಸ್ಯೆಯಾಗುತ್ತಿದೆ. ಹಳೇ ಪೈಪ್‌ಲೈನ್ ತೆರವುಗೊಳಿಸಿ ಈಗಿನ ಸಾಮರ್ಥ್ಯಕ್ಕೆ ಅನುಗುಣವಾಗಿ ಪೈಪ್‌ಲೈನ್ ಅಳವಡಿಸಲು ಕ್ರಮ ವಹಿಸಬೇಕು. ಗ್ಯಾಸ್ ಪೈಪ್‌ಲೈನ್ ಅಳವಡಿಕೆ ಕಾರಣ ಬಡಾವಣೆಯಲ್ಲಿ ಒಂದೂ ರಸ್ತೆಯೂ ಚೆನ್ನಾಗಿಲ್ಲ. 12ರಿಂದ 13 ಮುಖ್ಯ ರಸ್ತೆಗಳಿದ್ದು, ಬಹುತೇಕ ಎಲ್ಲವೂ ಗುಂಡಿ ಬಿದ್ದಿವೆ. ಆದಷ್ಟು ಶೀಘ್ರ ಸರಿಪಡಿಸಬೇಕು ಎಂದು ಮನವಿ ಮಾಡಿದರು.

ರಸ್ತೆ ಕ್ರಾಸ್‌ಗಳಲ್ಲಿ ಚರಂಡಿ ವ್ಯವಸ್ಥೆ ಸಮರ್ಪಕವಾಗಿಲ್ಲ. ಮಳೆ ಬಂದರೆ ರಸ್ತೆಯಲ್ಲಿ ನೀರು ಹರಿಯುವಂತಾಗುತ್ತದೆ. ಇದನ್ನು ಸರಿಪಡಿಸಬೇಕು. ಇದೇ ಪಾರ್ಕ್ ಪಕ್ಕದಲ್ಲಿ ಹೊಸದಾಗಿ ಕ್ರೀಡಾಂಗಣ ನಿರ್ಮಾಣ ಮಾಡಿದ್ದು, ಅಲ್ಲಿ ಡೆಕ್ ನಿರ್ಮಿಸಿಕೊಡಬೇಕು. ಇದರಿಂದ ವಾಹನ ಸಂಚಾರಕ್ಕೆ ಅನುಕೂಲವಾಗುತ್ತದೆ. ಜೊತೆಗೆ ಅರಣ್ಯ ಇಲಾಖೆಯಿಂದ ಅಲ್ಲಿ ಮರದ ಕೊಂಬೆ ತೆರವು ಮಾಡಿಕೊಡಬೇಕು. ಅಲ್ಲದೆ, ಕ್ರೀಡಾಂಗಣದಲ್ಲಿ ಶೌಚಾಲಯ ನಿರ್ಮಿಸಿಕೊಡಬೇಕು. ಮುಖ್ಯ ರಸ್ತೆಗಳಲ್ಲಿ ಮರದ ಕೊಂಬೆಗಳು ವಾಹನ ಸಂಚಾರಕ್ಕೆ ತೊಡಕಾಗಿವೆ. ಸ್ಕೂಲ್ ಬಸ್‌ಗಳ ಸಂಚಾರಕ್ಕೆ ಕಷ್ಟವಾಗುತ್ತಿದೆ ಎಂದರು.

ಬಸ್ ಸೌಕರ್ಯ: ರೈಲ್ವೆ ನಿಲ್ದಾಣ, ಬಸ್ ನಿಲ್ದಾಣಕ್ಕೆ ಇಲ್ಲಿನ ನಿವಾಸಿಗಳು ಹೋಗಿ ಬರಲು ಸಮರ್ಪಕ ಬಸ್ ಸೌಲಭ್ಯ ಇಲ್ಲ. ಹಿಂದೆ ರೂಟ್ ನಂಬರ್ 31, 135 ಬಸ್ ಸಂಚಾರ ಇತ್ತು. ಆದರೆ ಈಗ ಕೇವಲ 62 ನಂಬರ್ ಬಸ್ ಮಾತ್ರ ಇಲ್ಲಿಗೆ ಲಭ್ಯವಿದೆ. 7ನೇ ಮೇನ್‌ನಲ್ಲಿ ದೊಡ್ಡ ಪಾರ್ಕ್ ಇದ್ದು, ಅಲ್ಲಿ ವಿದ್ಯುತ್ ದೀಪಗಳು ಇಲ್ಲ. ಸಂಜೆ ವೇಳೆ ಕುಡುಕರ ಹಾವಳಿ ಹೆಚ್ಚಾಗಿದೆ. ಬಡಾವಣೆಯಲ್ಲಿರುವ ಇಡಬ್ಲ್ಯೂಎಸ್ ಮನೆಗಳು ಇರುವ ಸ್ಥಳದಲ್ಲಿ ಮೀಸಲು ಅರಣ್ಯ ಇರುವ ಕಾರಣ ಬಿದಿರು ಎತ್ತರವಾಗಿ ಬೆಳೆದಿದ್ದು, ಮಳೆ ಬಂದಾಗ ಅವು ಮನೆ ಮೇಲೆ ಬೀಳುತ್ತವೆ. ಹಾಗಾಗಿ ಕೊಂಬೆಗಳನ್ನು ತೆರವು ಮಾಡಿಸಬೇಕು ಎಂದು ಕೋರಿದರು.

500 ಕೋಟಿ ರೂ. ಪ್ರಸ್ತಾವನೆ: ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯ ನಗರಪಾಲಿಕೆ ವಾರ್ಡ್‌ಗಳು, ಖಾಸಗಿ ಬಡಾವಣೆಗಳಲ್ಲಿ ರಸ್ತೆ, ಒಳಚರಂಡಿ ಸಮಸ್ಯೆಯನ್ನು ಪರಿಹರಿಸಲು ಅಂದಾಜು 500 ಕೋಟಿ ರೂ. ಅಗತ್ಯವಿದ್ದು, ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಹಂತ ಹಂತವಾಗಿ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿಸಿ ಕಾಮಗಾರಿಗಳನ್ನು ಆರಂಭಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಬಡಾವಣೆಗಳನ್ನು ನಿರ್ಮಾಣ ಮಾಡುವಾಗ ಕುಡಿಯುವ ನೀರು, ರಸ್ತೆ, ಒಳಚರಂಡಿ ಮೊದಲಾದ ಸಮಸ್ಯೆಗಳನ್ನು ಪರಿಹರಿಸದೆ ಹಾಗೆಯೇ ಬಿಟ್ಟು ಹೋಗಿದ್ದಾರೆ. ಇವುಗಳಿಗೆ ಮೂಲ ಸೌಕರ್ಯ ಕಲ್ಪಿಸಬೇಕಾದರೆ ಅಂದಾಜು 500 ಕೋಟಿ ರೂ. ಬೇಕಾಗುತ್ತದೆ. ಯುಜಿಡಿ ಸಮಸ್ಯೆಗಳನ್ನು ಪರಿಹರಿಸಲು ಶಾಶ್ವತವಾದ ಕಾಮಗಾರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಶೀಘ್ರ ಅನುಮೋದನೆ ಪಡೆಯಲು ಶಕ್ತಿ ಮೀರಿ ಶ್ರಮಿಸುವೆ. ರಾಮಕೃಷ್ಣನಗರ ಸೇರಿದಂತೆ ನನ್ನ ವ್ಯಾಪ್ತಿಯ ಭಾಗದ ಐದು ವಾರ್ಡ್‌ಗಳಿಗೆ 27 ಕೋಟಿ ರೂಪಾಯಿ ಪ್ರಸ್ತಾವನೆ ಸಲ್ಲಿಸಿದ್ದು, ಸದ್ಯ ಅನುದಾನ ಬಿಡುಗಡೆ ಆಗಿಲ್ಲ ಎಂದರು.

> 
>
> ನಾಳೆಯಿಂದ ಮೂರು ದಿನಗಳು ಇಬ್ಬರು ಎಇಇಗಳು ಇದೇ ವಾರ್ಡ್‌ನ ಪ್ರತಿ ಬೀದಿಯಲ್ಲಿ ಯುಜಿಡಿ ಸಂಬಂಧ ಪರಿಶೀಲನೆ ನಡೆಸಲಿದ್ದಾರೆ. ಈ ಸಂಬಂಧ ಅವರಿಗೆ ಸೂಚನೆ ನೀಡಲಾಗಿದೆ. ಪಾಲಿಕೆಯಿಂದ ಕೊಂಬೆಗಳ ತೆರವಿಗೂ ಕ್ರಮ ವಹಿಸಲು ನಿರ್ದೇಶನ ನೀಡಲಾಗಿದೆ.
>
> **-ಜಿ.ಲಕ್ಷ್ಮೀಕಾಂತರೆಡ್ಡಿ,**
> ಜಿಲ್ಲಾಧಿಕಾರಿಗಳು, ಮೈಸೂರು.

ನೀರಿನ ಸಮಸ್ಯೆ: ಮುಖಂಡ ನಂಜುಂಡಸ್ವಾಮಿ ಮಾತನಾಡಿ, ರಾಮಕೃಷ್ಣನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಹಗಲಿನಲ್ಲಿ ನೀರಿನ ವ್ಯವಸ್ಥೆ ಮಾಡಿಕೊಡಬೇಕು. ಈಗ ರಾತ್ರಿ 10.30ಕ್ಕೆ ನೀರು ಬಿಟ್ಟು ಬೆಳಗ್ಗೆ 7 ಗಂಟೆಗೆ ನಿಲ್ಲಿಸುತ್ತಾರೆ. ಇದಕ್ಕೆ ಬದಲಾಗಿ ಹಗಲಿನಲ್ಲಿ ನೀರು ಪೂರೈಕೆಗೆ ಕ್ರಮ ವಹಿಸಬೇಕು ಎಂದು ಮನವಿ ಮಾಡಿದರು.

ನಿವೃತ್ತ ಶಿಕ್ಷಕ ನಾಗರಾಜು ಮಾತನಾಡಿ, ರಾಮಕೃಷ್ಣನಗರ ಚರ್ಚ್ ಹಿಂಭಾಗ ದೊಡ್ಡ ಮಳೆ ನೀರು ಚರಂಡಿ ಇದ್ದು, ಒಡೆದು ಹೋದ ಕಾರಣ ಪ್ರತಿ ಬಾರಿ ಮಳೆ ಬಂದಾಗ ಮನೆಗಳಿಗೆ ನೀರು ನುಗ್ಗುತ್ತಿದೆ ಈ ಮೋರಿಯಲ್ಲಿ ಯುಜಿಡಿ ನೀರು ಸಹ ಹೋಗುತ್ತದೆ. ಇದನ್ನು ಸರಿಪಡಿಸಬೇಕು. ಅಲ್ಲದೆ, ಮಾಧವ ಪಾರ್ಕ್ ಅಭಿವೃದ್ಧಿಪಡಿಸಬೇಕು. ಜೊತೆಗೆ ಇ ಅಂಡ್ ಎಫ್ ಬ್ಲಾಕ್ 9ನೇ ಕ್ರಾಸ್‌ನಲ್ಲಿ ಜಲ್ಲಿ ಕಲ್ಲು ಹಾಕಿ ಹಾಗೆ ಬಿಟ್ಟಿದ್ದು, ಇನ್ನು ಡಾಂಬರೀಕರಣ ಮಾಡಿಲ್ಲ. ಕೂಡಲೇ ಡಾಂಬರೀಕರಣ ಮಾಡಬೇಕು ಎಂದು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ದಕ್ಷಿಣೇಶ್ವರ ರಸ್ತೆ ಅಭಿವೃದ್ಧಿಗೆ ಪೂಜೆಯಾಗಿ ಕೆಲಸ ನಡೆಯುತ್ತಿದೆ ಎಂದರು.

ರಾಮಕೃಷ್ಣನಗರ ಇ ಅಂಡ್ ಎಫ್ ಬ್ಲಾಕ್‌ನ ಶಿವರಾಮು ಮಾತನಾಡಿ, ದಕ್ಷಿಣೇಶ್ವರ ರಸ್ತೆ ಹಾಗೂ ಸಾಯಿ ಬಾಬಾ ದೇವಸ್ಥಾನ ರಸ್ತೆ ಮೂರು ವರ್ಷಗಳಿಂದ ಹದಗೆಟ್ಟಿದೆ. ಚೆನ್ನಾಗಿರುವ ರಸ್ತೆಗಳಿಗೆ ಅಭಿವೃದ್ಧಿ ಮಾಡಲು ಆಯ್ಕೆ ಮಾಡಿಕೊಳ್ಳುತ್ತಿದ್ದು, ಹದಗೆಟ್ಟಿರುವ ರಸ್ತೆಗಳತ್ತ ಗಮನ ನೀಡುತ್ತಿಲ್ಲ. ರಸ್ತೆ ಅಗೆದು ಹಾಳುಗೆಡುವುತ್ತಿದ್ದು, ಸಮನ್ವಯದಿಂದ ಇಲಾಖೆಗಳು ಕೆಲಸ ಮಾಡುತ್ತಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ಈ ರಸ್ತೆಗಳ ಅಭಿವೃದ್ಧಿ ವಿಚಾರದಲ್ಲಿ ನಾನು ಹಾಗೂ ಅಧಿಕಾರಿಗಳಿಗೆ ಸಂಬಂಧಿಸಿದ ಎಲ್ಲಾ ಕ್ರಮಗಳನ್ನು ಪೂರ್ಣಗೊಳಿಸಿದ್ದೇವೆ ಎಂದು ತಿಳಿಸಿದರು.

ಇನ್ನಾರು ತಿಂಗಳಲ್ಲಿ ಉಂಡುವಾಡಿ ಯೋಜನೆಯಡಿ ನೀರು ಪೂರೈಕೆ

ಮೈಸೂರು,ಮೇ 7(ಪಿಎಂ)– ಉಂಡುವಾಡಿ ಕುಡಿಯುವ ನೀರಿನ ಯೋಜನೆ ಶೀಘ್ರದಲ್ಲಿ ಪೂರ್ಣಗೊಳ್ಳಲಿದ್ದು, ಇನ್ನು 6 ತಿಂಗಳಲ್ಲಿ ಚಾಲನೆ ದೊರೆಯಲಿದೆ ಎಂದು ಮಾಜಿ ಸಚಿವರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ನಾನು ಮಂತ್ರಿ ಇದ್ದಾಗ ಪರಿಶ್ರಮ ವಹಿಸಿ ಸರ್ಕಾರದ ಮೇಲೆ ಒತ್ತಡ ತಂದು ಈ ಯೋಜನೆಗೆ ಅನುಮೋದನೆ ಕೊಡಿಸಿದೆ. ಆ ಬಳಿಕ ಯಡಿಯೂರಪ್ಪ, ಹೆಚ್.ಡಿ.ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ, ಸಿದ್ದರಾಮಯ್ಯ ಸೇರಿದಂತೆ ಎಲ್ಲರ ಅವಧಿಯಲ್ಲೂ ಹಣ ಬಿಡುಗಡೆ ಮಾಡಿಸಿದ್ದೇನೆ. ನಿಲ್ಲದಂತೆ ಕಾಮಗಾರಿ ಮಾಡಿಸಿದ್ದೇನೆ. ಇದು ಇಡೀ ಕ್ಷೇತ್ರಕ್ಕೆ 24 ಗಂಟೆ ಕುಡಿಯುವ ನೀರು ದೊರೆಯಲಿದೆ. ಇದು ಇನ್ನು 6 ತಿಂಗಳಲ್ಲಿ ಚಾಲನೆಗೆ ಬರಲಿದೆ. ಕಬಿನಿಯಿಂದಲೂ 60 ಎಂಎಲ್‌ಡಿ ನೀರು ಸರಬರಾಜು ಆಗುವಂತೆ ಕ್ರಮ ವಹಿಸಿದ್ದೇನೆ. ಇನ್ನು 60 ಎಂಎಲ್‌ಡಿ ನೀರು ಪೂರೈಕೆ ಸಂಬಂಧ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

58ನೇ ವಾರ್ಡ್ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಉಪಸ್ಥಿತಿಯಲ್ಲಿ ಸಭೆ ಏರ್ಪಡಿಸಲಾಗಿದೆ. ಈ ವಾರ್ಡ್‌ನ ನಾಗರಿಕರ ಸಹಕಾರ ಅಗತ್ಯ. ಸಾರ್ವಜನಿಕರ ಜವಾಬ್ದಾರಿಯೂ ಇರುತ್ತದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ 3.75 ಲಕ್ಷ ಮತದಾರರು ಇದ್ದು, ಐದೂವರೆ ಲಕ್ಷ ಜನಸಂಖ್ಯೆಯನ್ನು ಚಾಮುಂಡೇಶ್ವರಿ ಕ್ಷೇತ್ರ ಹೊಂದಿದೆ. ನಾನು ಕ್ಷೇತ್ರದಲ್ಲೇ ಇದ್ದು ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದರು.

ಅರಣ್ಯ ಇಲಾಖೆಯಿಂದ ಸಹಕಾರ: ಡಿಸಿಎಫ್ ಪರಮೇಶ್ ಮಾತನಾಡಿ, ಲಿಂಗಾಬುಧಿ ಕೆರೆಗೆ ಬರುವ ಕೊಳಚೆ ನೀರು ತಡೆಗಟ್ಟಲು ಈಗಾಗಲೇ ಪಾಲಿಕೆ ಆಯುಕ್ತರೊಂದಿಗೆ ಮಾತನಾಡಿದ್ದೇನೆ. ಬಯೋ ಡೈವರ್‌ಸಿಟಿ ಬೋರ್ಡ್‌ನಿಂದ 20 ಲಕ್ಷ ಅನುದಾನ ದೊರೆಯುವ ನಿರೀಕ್ಷೆ ಇದೆ. ಇದನ್ನು ಬಳಸಿಕೊಂಡು ಇಲ್ಲಿಗೆ ಬರುವ ಕೊಳಚೆ ನೀರು ತಡೆಗೆ ರೀಟೈನ್ ವಾಲ್ ಸೇರಿದಂತೆ ಅಗತ್ಯ ಕ್ರಮ ವಹಿಸಲು ಅರಣ್ಯ ಇಲಾಖೆಯಿಂದ ಅನುಮತಿ ನೀಡಲಾಗುವುದು. ಕೊಳಚೆ ನೀರು ತಡೆ ಸಂಬಂಧ ಅಗತ್ಯ ಕ್ರಮ ವಹಿಸಲು ಪಾಲಿಕೆ ಇಲಾಖೆ ಸಹಕಾರ ನೀಡಲಾಗಿದೆ. 2 ಮತ್ತು 5ನೇ ಮೇನ್ ಮನೆಗಳ ಮುಂದೆ ಇರುವ ಒಣ ಮರಗಳ ತೆರವಿಗೆ ವಾರದಲ್ಲಿ ಕ್ರಮ ವಹಿಸಲಾಗುವುದು. ಮನೆಗಳ ಮೇಲೆ ಬಾಗಿರುವ ಬಿದಿರು ಕೊಂಬೆ ತೆರವಿಗೆ ನಾಳೆಯೇ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಕೊಳಚೆ ನೀರಿಗೆ ತಡೆ: ಬಳಿಕ ಮಾತನಾಡಿದ ಶಾಸಕರು, ಚರಂಡಿ ಸ್ವಚ್ಛಗೊಳಿಸಲು ಅರಣ್ಯ ಇಲಾಖೆ, ಪಾಲಿಕೆಯವರಿಗೆ ಅವಕಾಶ ಕಲ್ಪಿಸಬೇಕು ಎಂದು ಸೂಚಿಸಿದರು. ಈ ಸಂಬಂಧ ಪ್ರತಿಕ್ರಿಯಿಸಿದ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಅರಣ್ಯ ಇಲಾಖೆ ಈಗಾಗಲೇ ಸಲ್ಲಿಕೆಯಾಗಿರುವ ಪ್ರಸ್ತಾವನೆಗೆ ಅನುಮೋದನೆ ನೀಡಿದರೆ ಕೊಳಚೆ ನೀರು ಲಿಂಗಾಬುಧಿ ಕೆರೆಗೆ ಸೇರದಂತೆ ತಡೆಯುವ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದರು.

ಸೂಕ್ತ ಬಸ್ ವ್ಯವಸ್ಥೆ: ಕೆಎಸ್‌ಆರ್‌ಟಿಸಿ ನಗರ ಸಾರಿಗೆ ವಿಭಾಗದ ವಿಭಾಗಾಧಿಕಾರಿ ವೀರೇಶ್ ಮಾತನಾಡಿ, ವಾರದಲ್ಲಿ ರೂಟ್ ನಂಬರ್ 61 ಬಸ್ ಅನ್ನು ರಾಮಕೃಷ್ಣನಗರದಲ್ಲಿ ಸಂಚರಿಸಲು ವ್ಯವಸ್ಥೆ ಮಾಡಲಾಗುವುದು. ಶೀಘ್ರದಲ್ಲಿ ಮತ್ತೊಂದು ಬಸ್ ಸೌಲಭ್ಯ ಕಲ್ಪಿಸಲು ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಸ್ಥಳೀಯರೊಬ್ಬರು ಮಾತನಾಡಿ, ಆರೋಗ್ಯ ಬಡಾವಣೆಯಲ್ಲಿ ನಿವೇಶನ ಇದ್ದು, ಇಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವ್ಯವಸ್ಥೆ ಮಾಡಬೇಕು ಎಂದು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಡಿಹೆಚ್‌ಓ ಡಾ.ಪಿ.ಸಿ. ಕುಮಾರಸ್ವಾಮಿ, ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲು ಅಗತ್ಯವಿರುವಷ್ಟು ಜನಸಂಖ್ಯೆ ಇಲ್ಲಿ ಇಲ್ಲವಾದ ಕಾರಣ ಅದು ಸಾಧ್ಯವಾಗದು. ಇದಕ್ಕೆ ಬದಲಾಗಿ ಆರೋಗ್ಯ ಶಿಬಿರಗಳನ್ನು ಏರ್ಪಡಿಸುವ ಮೂಲಕ ವೈದ್ಯಕೀಯ ಸೇವೆ ಕಲ್ಪಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಮುಖಂಡರೊಬ್ಬರು ಮಾತನಾಡಿ, ಮಾಧವ ಪಾರ್ಕ್ ಸೇರಿದಂತೆ ಇಲ್ಲಿನ ಕೆಲ ಪಾರ್ಕ್ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ಕತ್ತಲಾಗುತ್ತಿದ್ದಂತೆ ಪುಂಡರ ಹಾವಳಿ ಹೆಚ್ಚಾಗುತ್ತಿದೆ. ಕುಡಿದು ಮದ್ಯದ ಬಾಟಲಿಯನ್ನು ಅಲ್ಲೇ ಎಸೆದು ಹೋಗುತ್ತಾರೆ. ಇದನ್ನ ತಡೆಗಟ್ಟಲು ಪೊಲೀಸ್ ಗಸ್ತು ಹೆಚ್ಚಿಸಬೇಕು. ಗರುಡ ವಾಹನ ಗಸ್ತು ಹಾಕಬೇಕು ಎಂದು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಎಸಿಪಿ ರಮೇಶ್, ಇನ್ನಷ್ಟು ಗಸ್ತು ಹೆಚ್ಚಿಸಲಾಗುವುದು ಎಂದು ತಿಳಿಸಿದರು. ಮುಂದುವರೆದು ಮಾತನಾಡಿದ ಶಾಸಕರು, ಕಟ್ಟುನಿಟ್ಟಿನ ಕ್ರಮ ಕೈಗೊಂಡು ಪುಂಡರ ಹಾವಳಿ ತಪ್ಪಿಸಬೇಕು ಎಂದು ಸೂಚನೆ ನೀಡಿದರು.

ನಾಗರಿಕರ ಸುರಕ್ಷತೆ: ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಮಾತನಾಡಿ, ಗರುಡ ಪರಿಕಲ್ಪನೆ ನಗರದಲ್ಲಿ ಇಲ್ಲ. ಪ್ರತಿ ಠಾಣೆ ಸರಹದ್ದಿನಲ್ಲಿ ತಲಾ ಎರಡು 112 ಗಸ್ತು ವಾಹನಗಳು ಇವೆ. ನಗರ ವ್ಯಾಪ್ತಿಯಲ್ಲಿ 112 ವಾಹನ ಪ್ರತಿಕ್ರಿಯೆ ಕೇವಲ ಐದು ನಿಮಿಷದಲ್ಲಿ ಪ್ರಕ್ರಿಯೆ ನೀಡುವ ವ್ಯವಸ್ಥೆ ಇದೆ. ಈ ಗಸ್ತಿನಲ್ಲಿ ನಗರ ಪೊಲೀಸ್ 2ನೇ ಸ್ಥಾನದಲ್ಲಿದೆ. ಹಾಗಾಗಿ 112 ಕರೆ ಮಾಡಿದ ಐದು ನಿಮಿಷಕ್ಕೆ ಸ್ಥಳಕ್ಕೆ ವಾಹನ ಆಗಮಿಸಲಿದೆ. ಎರಡನೇ ಆಯ್ಕೆಯಾಗಿ ಮನೆ ಮನೆಗೆ ಪೊಲೀಸ್ ಕಾರ್ಯಕ್ರಮದ ಸೌಲಭ್ಯ ಪಡೆಯಬಹುದು. ಸಂಜೆ 6 ಗಂಟೆಯಾಗುತ್ತಿದ್ದಂತೆ ಯಾವುದೇ ಅಧಿಕಾರಿ ಠಾಣೆಯಲ್ಲಿ ಕುಳಿತುಕೊಳ್ಳುವುದಿಲ್ಲ. ಎಲ್ಲರೂ ಟಾಪ್ ಲೈಟ್ ಹಾಕಿಕೊಂಡು ರೌಂಡ್ಸ್ ಮಾಡಲಿದ್ದಾರೆ. ಪ್ರತಿಯೊಂದು ಪೊಲೀಸ್‌ನಿಂದ ಸ್ಪಂದಿಸಿ ಕ್ರಮ ವಹಿಸಲಾಗುತ್ತಿದೆ ಎಂದು ಹೇಳಿದರು.

ಪಾಲಿಕೆ ವಲಯ 3ರ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ ಮಾತನಾಡಿ, ಯುಜಿಡಿ ಲೈನ್ ಸಂಬಂಧ 3 ಮೀಟರ್ ಆಳದಲ್ಲಿ 1 ಮೀಟರ್ ಅಗಲ ಪೈಪ್ ಅನ್ನು ನಾವು ಅಳವಡಿಸಬೇಕಿತ್ತು. ಮೂರು ಮೀಟರ್ ಅಗೆದ ಕಾರಣ ರಸ್ತೆ ಹಾಳಾಗಿದೆ. ಈಗ 8 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದರು. ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಸೇರಿದಂತೆ ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

ಅಸಲು ದಾವೆ ಸಂಖ್ಯೆ: 79/2025

ವಾದಿಗಳು : ಮರಪ್ಪ,

ವಿರುದ್ಧ

ಪ್ರತಿವಾದಿಗಳು : ನಾಗಮ್ಮ ಮತ್ತು ಇತರರು,
13ನೇ ಪ್ರತಿವಾದಿ : ಮರಿನಂಜಮ್ಮ, 70 ವರ್ಷ ಕೋಂ ಮರಿನಂಜಪ್ಪ, ವಾಸ: ಚೆನ್ನವಡೆಯನಪುರ ಗ್ರಾಮ, ಬೇಗೂರು ಹೋಬಳಿ, ಗುಂಡ್ಲುಪೇಟೆ ತಾಲ್ಲೂಕು

ಪತ್ರಿಕೆ ಪ್ರಕಟಣೆ

ಈ ಮೇಲ್ಕಂಡ ವಾದಿಗಳು ಪ್ರತಿವಾದಿಗಳ ವಿರುದ್ಧ ದಾವಾ ಆಸ್ತಿಯಲ್ಲಿ ಭಾಗಾಂಶವನ್ನು ಕೋರಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಮರಿನಂಜಮ್ಮ ಆದ ನಿಮ್ಮ ಹೆಸರು ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ಯಡವನಹಳ್ಳಿ ಗ್ರಾಮದ ಸರ್ವೆ ನಂ. 109/5ರ ಆರ್.ಟಿ.ಸಿಯಲ್ಲಿ ನಮೂದಾಗಿದ್ದ ಕಾರಣ ನಿಮ್ಮನ್ನು ಅವಶ್ಯಕ 13ನೇ ಪ್ರತಿವಾದಿಯನ್ನಾಗಿ ಮಾಡಿದ್ದು, ಮೇಲ್ಕಂಡ ಪ್ರಕರಣದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ 09.06.2026 ರಂದು ನಿಗಧಿಪಡಿಸಿದ್ದು, ನೀವು ಖುದ್ದಾಗಿ ಅಥವಾ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು, ಇಲ್ಲದ ಪಕ್ಷದಲ್ಲಿ ಮೇಲ್ಕಂಡ ಪ್ರಕರಣದಲ್ಲಿ ನಿಮ್ಮನ್ನು ಏಕಪಕ್ಷೀಯವಾಗಿ ಆದೇಶವನ್ನು ಮಾಡುತ್ತದೆ ಎಂದು ತಿಳಿಯುವುದು.

ಘನ ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/– ಶಿರಸ್ತೇದಾರರು, ಸಿವಿಲ್ ಮತ್ತು ಜೆ.ಎಂ.ಎಫ್‌ಸಿ ನ್ಯಾಯಾಲಯ, ಗಂಡ್ಲುಪೇಟೆ.

ಅರ್ಜಿದಾರರ ಪರ ವಕೀಲರು
ಸಹಿ/– ಬಿ.ಶಿವಣ್ಣ ಬಿ.ಎಸ್ಸಿ, ಎಲ್.ಎಲ್.ಬಿ ವಕೀಲರು, ಗುಂಡ್ಲುಪೇಟೆ ತಾಲ್ಲೂಕು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದಲ್ಲಿ ವಾಸವಾಗಿರುವ ಲೇಟ್ ಜವರೇಗೌಡರ ಮಗನಾದ ಶ್ರೀ ಹೊನ್ನೇಗೌಡ ಮತ್ತು ಇವರ ಕುಟುಂಬದವರುಗಳು ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ಮೈಸೂರು ನಗರ, ಜೆ.ಪಿ.ನಗರ, 'ಎ' ಬ್ಲಾಕ್, 1ನೇ ಮುಖ್ಯರಸ್ತೆ, ಶ್ರೀಗಂಧ, ಮನೆ ನಂ.50ರಲ್ಲಿ ವಾಸವಾಗಿರುವ ಶ್ರೀ ಆರ್.ಎಸ್.ರಾಜಶೇಖರ ರವರ ಮಗನಾದ ಶ್ರೀ ಆರ್. ವೀರೇಶ್ (ಹಳೇ ವಿಳಾಸ.ನಂ.4, ಕೆ.ಲಿಂಗಯ್ಯ ಕಾಲೋನಿ, ನಜರ್‌ಬಾದ್, ಮೈಸೂರು) ರವರಿಗೆ ದಿನಾಂಕ: 13.02.2007 ರಂದು ಅಭಿವೃದ್ಧಿ ಕರಾರು ಪತ್ರ ಮತ್ತು ಸಾಮಾನ್ಯ ಅಧಿಕಾರ ಪತ್ರವನ್ನು ಸಬ್ ರಿಜಿಸ್ಟ್ರಾರ್, ಮೈಸೂರು ಉತ್ತರ, ಮೈಸೂರು ಕಛೇರಿಯಲ್ಲಿ ನೊಂದಣಿ ಮಾಡಿಕೊಟ್ಟು, ಶ್ರೀ ಆರ್. ವೀರೇಶ್ ರವರಿಂದ ಪ್ರತಿಫಲವನ್ನು ಪಡೆದುಕೊಂಡಿರುತ್ತಾರೆ.

ಸದರಿ ಲೇಟ್ ಜವರೇಗೌಡರ ಮಗನಾದ ಶ್ರೀ ಹೊನ್ನೇಗೌಡ ಮತ್ತು ಇವರ ಕುಟುಂಬದವರುಗಳ ಪರವಾಗಿ ಜಿ.ಪಿ.ಎ. ಪ್ರತಿನಿಧಿಯಾದ ಶ್ರೀ ಆರ್. ವೀರೇಶ್ ರವರು ಷೆಡ್ಯೂಲ್ ಸ್ವತ್ತಿನ ಸಂಬಂಧ ಅನ್ಯಕ್ರಾಂತ ಆದೇಶವನ್ನು ಪಡೆದು ನನ್ನ ಕಕ್ಷಿದಾರರಾದ ಮೈಸೂರು ನಗರ, ನಾರಾಯಣ ಶಾಸ್ತ್ರಿ ರಸ್ತೆ, ನೆಲಮಹಡಿ, ನಂ. 218/ಕೆ–30 ರಲ್ಲಿ ಕಛೇರಿಯುಳ್ಳ ದಿ ಸಿಟಿಜನ್ ವೆಲ್ಫೇರ್ ಗೃಹ ನಿರ್ಮಾಣ ಸಹಕಾರ ಸಂಘ ನಿ., ರವರಿಗೆ ಷೆಡ್ಯೂಲ್ ನಲ್ಲಿ ನಮೂದಿಸಿರುವ ಜಮೀನನ್ನು ದಿನಾಂಕ: 01.10.2024 ರಂದು ನೊಂದಾಯಿತ ಶುದ್ಧ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಸದರಿ ಕ್ರಯಪತ್ರವು ಮೈಸೂರು ಪಶ್ಚಿಮ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಲ್ಪಟ್ಟಿರುತ್ತದೆ.

ಷೆಡ್ಯೂಲ್ ಸ್ವತ್ತಿನ ಸಂಬಂಧ ಆರ್.ಟಿ.ಸಿ. ಯಲ್ಲಿ ಖಾತೆಯು ಭೂ–ಮಾಲೀಕರ ಹೆಸರಿನಲ್ಲಿ ಇರುವುದರಿಂದ, ಮೇಲ್ಕಂಡ ಕ್ರಯಪತ್ರದ ವಿಷಯವನ್ನು ಮರೆಮಾಚಿ ಷೆಡ್ಯೂಲ್ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿರುವುದು ಸಹ ನಮ್ಮ ಕಕ್ಷಿದಾರರ ಗಮನಕ್ಕೆ ಬಂದಿರುತ್ತದೆ.

ಆಗಾಗಿ ಸಾರ್ವಜನಿಕರಲ್ಲಿ ತಿಳಿಸುವುದೇನೆಂದರೆ, ಮೇಲ್ಕಂಡ ಸ್ವತ್ತಿನ ಮೇಲೆ ನಮ್ಮ ಕಕ್ಷಿದಾರರಿಗೆ ಸಂಪೂರ್ಣ ಹಕ್ಕು ಭಾದ್ಯತೆಗಳು ಇರುವುದರಿಂದ ಷೆಡ್ಯೂಲ್ ಸ್ವತ್ತಿನ ಸಂಬಂಧವಾಗಿ ಮೇಲ್ಕಂಡ ಶ್ರೀ ಹೊನ್ನೇಗೌಡ ಮತ್ತು ಇವರ ಕುಟುಂಬದವರುಗಳ ಜೊತೆ ಯಾರೂ ಕೂಡ ಯಾವುದೇ ರೀತಿಯ ವ್ಯವಹಾರಗಳನ್ನು ಮಾಡಬಾರದು. ಒಂದು ವೇಳೆ ವ್ಯವಹರಿಸಿದಂತಹ ಪಕ್ಷದಲ್ಲಿ ಅಂತಹ ವ್ಯವಹಾರವು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು, ಅಲ್ಲದೆ ಅದರಿಂದ ಉಂಟಾಗುವ ನಷ್ಟಗಳಿಗೆ ನೀವುಗಳೇ ಜವಾಬ್ದಾರರಾಗಿರುತ್ತೀರಿ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದ ಸರ್ವೆ ನಂಬರ್ 182/1ರಲ್ಲಿ ವಿಸ್ತೀರ್ಣ 1 ಎಕರೆ 20 ಗುಂಟೆ ಅನ್ಯಕ್ರಾಂತವಾದ ಇನ್ನೂ ಅಭಿವೃದ್ಧಿ ಹೊಂದದ ಜಮೀನಿಗೆ ಚಕ್ಕುಬಂದಿ:– ಪೂರ್ವಕೆ: ಹಳ್ಳ, ಪಶ್ಚಿಮಕ್ಕೆ: ಸರ್ವೆ ನಂಬರ್ 181 ರ ಜಮೀನು, ಉತ್ತರಕ್ಕೆ: ಸರ್ವೆ ನಂಬರ್ 173 ರ ಜಮೀನು, ದಕ್ಷಿಣಕ್ಕೆ: ಸರ್ವೆ ನಂಬರ್ 182/2ರ ಜಮೀನು.

ಶ್ರೀ. ಮಹದೇವಸ್ವಾಮಿ. ಪಿ ಬಿ.ಎ.ಎಲ್, ಎಲ್ ಎಲ್.ಬಿ,
ವಕೀಲರು
ನಂ. 2904, ಸಿ.ಹೆಚ್–67, 2ನೇ ಮಹಡಿ, ಕಾಂತರಾಜ ಅರಸ್ ರಸ್ತೆ, ಸರಸ್ವತಿಪುರಂ, ಮೈಸೂರು. ಮೊಬೈಲ್ ಸಂಖ್ಯೆ: 9739254292
ದಿನಾಂಕ: 06–05–2026

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಮೈಸೂರು ನಗರ, ಜೆ.ಪಿ.ನಗರ, 'ಎ' ಬ್ಲಾಕ್, 1ನೇ ಮುಖ್ಯರಸ್ತೆ, ಶ್ರೀಗಂಧ, ಮನೆ ನಂ.50ರಲ್ಲಿ ವಾಸವಾಗಿರುವ ಶ್ರೀ ಆರ್.ಎಸ್.ರಾಜಶೇಖರ ರವರ ಮಗನಾದ ಶ್ರೀ ಆರ್. ವೀರೇಶ್ (ಹಳೇ ವಿಳಾಸ.ನಂ.4, ಕೆ.ಲಿಂಗಯ್ಯ ಕಾಲೋನಿ, ನಜರ್‌ಬಾದ್, ಮೈಸೂರು) ರವರಿಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದಲ್ಲಿ ವಾಸವಾಗಿರುವ ಲೇಟ್ ಜವರೇಗೌಡರ ಮಗನಾದ ಶ್ರೀ ಮಾಲೇಗೌಡ ಮತ್ತು ಅವರ ಕುಟುಂಬದವರು ದಿನಾಂಕ: 07.08.2006 ರಂದು ಅಭಿವೃದ್ಧಿ ಕರಾರು ಪತ್ರ ಮತ್ತು ಸಾಮಾನ್ಯ ಅಧಿಕಾರ ಪತ್ರವನ್ನು ಸಬ್ ರಿಜಿಸ್ಟ್ರಾರ್, ಮೈಸೂರು ಉತ್ತರ, ಮೈಸೂರು ಕಛೇರಿಯಲ್ಲಿ ನೊಂದಣಿ ಮಾಡಿಕೊಟ್ಟು, ನನ್ನ ಕಕ್ಷಿದಾರರಿಂದ ಸೂಕ್ತ ಪ್ರತಿಫಲವನ್ನು ಪಡೆದುಕೊಂಡಿರುತ್ತಾರೆ.

ಸದರಿ ಲೇಟ್ ಜವರೇಗೌಡರ ಮಗನಾದ ಶ್ರೀ ಮಾಲೇಗೌಡ ಮತ್ತು ಇವರ ಕುಟುಂಬದವರುಗಳ ಪರವಾಗಿ ಜಿ.ಪಿ.ಎ. ಪ್ರತಿನಿಧಿಯಾದ ಶ್ರೀ ಆರ್. ವೀರೇಶ್ ರವರು ಷೆಡ್ಯೂಲ್ ಸ್ವತ್ತಿನ ಸಂಬಂಧ ಅನ್ಯಕ್ರಾಂತ ಆದೇಶವನ್ನು ಪಡೆದುಕೊಂಡಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಸಂಬಂಧ ಆರ್.ಟಿ.ಸಿ. ಯಲ್ಲಿ ಖಾತೆಯು ಭೂ–ಮಾಲೀಕರ ಹೆಸರಿನಲ್ಲಿ ಇರುವುದರಿಂದ ಸದರಿ ಭೂ ಮಾಲೀಕರು ಇದನ್ನು ದುರುಪಯೋಗ ಪಡಿಸಿಕೊಂಡು ಬೇರೆಯವರಿಗೆ, ಕ್ರಯದ ಕರಾರು ಪತ್ರ, ಕ್ರಯ ಪತ್ರ, ದಾನ ಪತ್ರ, ಆಧಾರ ಪತ್ರ, ಇತ್ಯಾದಿಗಳನ್ನು ಮಾಡಲು ಪ್ರಯತ್ನಿಸುತ್ತಿರುವುದಾಗಿ ನನ್ನ ಕಕ್ಷಿದಾರರ ಗಮನಕ್ಕೆ ಬಂದಿರುತ್ತದೆ.

ಆಗಾಗಿ, ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಷೆಡ್ಯೂಲ್ ಸ್ವತ್ತಿನಲ್ಲಿ ನನ್ನ ಕಕ್ಷಿದಾರರಿಗೆ ಸಂಪೂರ್ಣ ಹಕ್ಕು ಭಾದ್ಯತೆಗಳು ಇರುವುದರಿಂದ ಷೆಡ್ಯೂಲ್ ಸ್ವತ್ತಿನ ಸಂಬಂಧವಾಗಿ ಮೇಲೆ ತಿಳಿಸಿರುವ ವ್ಯಕ್ತಿ ಹಾಗೂ ಅವರ ಕುಟುಂಬದವರ ಜೊತೆ ಬೇರೆ ಯಾರೂ ಕ್ರಯದ ಕರಾರು ಪತ್ರ, ಕ್ರಯ ಪತ್ರ, ದಾನ ಪತ್ರ, ಆಧಾರ ಪತ್ರ, ವಗೈರೆ ವ್ಯವಹಾರಗಳನ್ನು ಮಾಡಬಾರದು, ಒಂದು ವೇಳೆ ವ್ಯವಹಾರವನ್ನು ಮಾಡಿದ ಪಕ್ಷದಲ್ಲಿ ಅದರಿಂದ ಉಂಟಾಗುವ ಕಷ್ಟ–ನಷ್ಟಗಳಿಗೆ ನೀವುಗಳೇ ಜವಾಬ್ದಾರರಾಗಿರುತ್ತೀರಿ ವಿನಃ ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

1. ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದ ಸರ್ವೆ ನಂಬರ್ 234/5 (ಹಳೇ ಸರ್ವೆ ನಂಬರ್ 234/5) ರಲ್ಲಿ ವಿಸ್ತೀರ್ಣ 1 ಎಕರೆ 36 ಗುಂಟೆ ಜಮೀನಿನ ಪೈಕಿ 00 ಎಕರೆ 30 ಗುಂಟೆ ಅನ್ಯಕ್ರಾಂತವಾದ ಇನ್ನೂ ಅಭಿವೃದ್ಧಿ ಹೊಂದದ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಸರ್ವೆ ನಂಬರ್ 234/6 ರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂಬರ್ 234/3 ರ ಜಮೀನು, ಉತ್ತರಕ್ಕೆ: ಸರ್ವೆ ನಂಬರ್ 234/4 ರ ಜಮೀನು, ದಕ್ಷಿಣಕ್ಕೆ: ಸರ್ವೆ ನಂಬರ್ 234/1 ಮತ್ತು 235 ರ ಜಮೀನು.
2. ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದ ಸರ್ವೆ ನಂಬರ್ 234/6 (ಹಳೇ ಸರ್ವೆ ನಂಬರ್ 234/5) ರಲ್ಲಿ ವಿಸ್ತೀರ್ಣ 1 ಎಕರೆ 06 ಗುಂಟೆ ಅನ್ಯಕ್ರಾಂತವಾದ ಇನ್ನೂ ಅಭಿವೃದ್ಧಿ ಹೊಂದದ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಸರ್ವೆ ನಂಬರ್ 239 ಮತ್ತು 240 ರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂಬರ್ 234/5 ರ ಜಮೀನು, ಉತ್ತರಕ್ಕೆ: ಸರ್ವೆ ನಂಬರ್ 234/4 ರ ಜಮೀನು, ದಕ್ಷಿಣಕ್ಕೆ: ಸರ್ವೆ ನಂಬರ್ 235 ರ ಜಮೀನು.

ಶ್ರೀ. ಮಹದೇವಸ್ವಾಮಿ. ಪಿ ಬಿ.ಎ.ಎಲ್, ಎಲ್ ಎಲ್.ಬಿ,
ವಕೀಲರು
ನಂ. 2904, ಸಿ.ಹೆಚ್–67, 2ನೇ ಮಹಡಿ, ಕಾಂತರಾಜ ಅರಸ್ ರಸ್ತೆ, ಸರಸ್ವತಿಪುರಂ, ಮೈಸೂರು. ಮೊಬೈಲ್ ಸಂಖ್ಯೆ: 9739254292
ದಿನಾಂಕ: 06–05–2026